ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 14

ಸೆಪ್ಟೆಂಬರ್ 2, 2007

ರೂ. 5/-



ಅಣು ಬಂಧವೋ ಅಮೆರಿಕಾದ ಕಬಂಧಬಾಹುವೋ?

ಫ್ಯಾಸಿಸ್ಟ್ ಕ್ರಿಮಿಗಳ ಖುಲಾಸೆ



ಮೂಟೆ ಹೊರುವ ಬೆನ್ನಮೇಲೆ ಸಂಕಷ್ಟಗಳ ಭಾರ



ಕೋಲಾರದ ಚಿನ್ನದ ಗಣಿ ಆರಂಭವಾಗುವುದೇ?



ಮಾತಾಡ್ ಮಾತಾಡ್ ಮಲ್ಲಿಗೆ

ಮೈಸೂರಿನಲ್ಲಿ ಜನಶಕ್ತಿ ವಾರದ ಸಂಚಿಕೆ ಮತ್ತು ಎ.ಕೆ.ಜಿ.ಯವರ ಆತ್ಮಕಥೆ 'ನನ್ನ ಜೀವನದ ಕಥೆ'ಯ ಬಿಡುಗಡೆ

'ಜಾಗತೀಕರಣದಿಂದ ಅಸಮಾನತೆ ಅಗಾಧ'

ಸಾಹಿತಿ ದೇವನೂರು ಮಹಾದೇವ

ಜನಶಕ್ತಿ ಪತ್ರಿಕೆಯ ವಾರದ ಸಂಚಿಕೆ ಬಿಡುಗಡೆ ಸಮಾರಂಭವನ್ನು ದಿನಾಂಕ 2007 ಆಗಸ್ಟ್ 19ರಂದು ಮೈಸೂರಿನ ನಮನ ಕಲ್ಯಾಣಮಂಟಪದಲ್ಲಿ ಜನಶಕ್ತಿ ಓದುಗ ಬಳಗ ಆಯೋಜಿಸಿತ್ತು. ಇದೇ ಸಂದರ್ಭದಲ್ಲಿ ಭಾರತಿ ಪ್ರಕಾಶನದವರು ಹೊರತಂದಿರುವ ಎ.ಕೆ.ಗೋಪಾಲನ್ (ಎ.ಕೆ.ಜಿ) ಆತ್ಮಕಥೆ 'ನನ್ನ ಜೀವನದ ಕಥೆ'ಯ ಕನ್ನಡ ಅನುವಾದದ (ಅನುವಾದಕರು ಕಾಂ.ಬಿ.ಮಾಧವ) ಎರಡನೆ ಮುದ್ರಣದ ಬಿಡುಗಡೆಯನ್ನು ಹಮ್ಮಿಕೊಳ್ಳಲಾಗಿತ್ತು.

ಜನಶಕ್ತಿಯ ಸಂಚಿಕೆ ಬಿಡುಗಡೆಯನ್ನು ನೆರವೇರಿಸಿದ ಸಾಹಿತಿ ದೇವನೂರ ಮಹಾದೇವರವರು, ಜಾಗತೀಕರಣ ದಿಂದುಂಟಾಗಿರುವ ಪರಿಸ್ಥಿತಿಯನ್ನು ವಿವರಿಸಿದರು.



ಸುಬ್ರಹ್ಮಣ್ಯ, ದೇವನೂರು ಮಹಾದೇವ, ಪ್ರಭಾಕರ, ಲಿಂಗದೇವರು, ಶ್ರೀನಿವಾಸ

ಪತ್ರಿಕೆಯಲ್ಲಿ ಬಳಸುವ ಭಾಷೆಯ ಬಗ್ಗೆ ಹೇಳುತ್ತಾ ಜನರಿಗೆ ತಲುಪುವ ಭಾಷೆ ಬಳಸಬೇಕು. ಸಮುದಾಯದ ನುಡಿಗಟ್ಟಿನಲ್ಲಿ, ಹೃದಯದ ಭಾಷೆಯಲ್ಲಿ ಬರವಣಿಗೆ ಇದ್ದರೆ ಜನರಿಗೆ ತಲುಪುತ್ತದೆ ಎಂದರು. ರಾಜಕೀಯ ಪಕ್ಷಗಳಲ್ಲಿ ಎಡಪಕ್ಷಗಳನ್ನು ಮಾತ್ರ ನಂಬಬಹುದಾಗಿದೆ ಎಂದರು. ಜಾಗತೀಕರಣದಿಂದಾಗಿ ಇಂದು ರೈತ ಬೆಳೆ ಬೆಳೆಯಲು ಸಾಧ್ಯವಿಲ್ಲ. ಬದುಕೂ ಉಳಿಯುತ್ತಿಲ್ಲ. ಆದರೆ ಇನ್ನೊಂದೆಡೆ ದುಡ್ಡು ಬಿತ್ತಿ ಶ್ರೀಮಂತರು ದುಡ್ಡು ಬೆಳೆಯುತ್ತಾ ಇದ್ದಾರೆ ಎಂದರು. ಕೋಟಿ ರೂಪಾಯಿ ಎಂದರೆ ಕೆಲವರಿಗೆ ಬೆಲೆಯೇ ಇಲ್ಲದ ಪರಿಸ್ಥಿತಿ ಬಂದಿದೆ ಎಂದರು. ಜನಶಕ್ತಿ ಪತ್ರಿಕೆಯು ಹೋರಾಟಗಳಿಗೆ ಸ್ಫೂರ್ತಿ ನೀಡಲಿ ಎಂದು ಹಾರೈಸಿದರು.

ಎ.ಕೆ.ಜಿ ಆತ್ಮಕಥೆಯನ್ನು ಬಿಡುಗಡೆ ಮಾಡಿದ ಸಾಹಿತಿ ಲಿಂಗದೇವರು ಹಳೆಮನೆಯವರು, ಎ.ಕೆ.ಜಿ ದೇಶದ ಮಹಾನ್ ನಾಯಕರುಗಳಲ್ಲಿ ಒಬ್ಬರೆಂದರು. ಇಡೀ ಜೀವನವನ್ನು ಹೋರಾಟಕ್ಕೆ ಮುಡಿಪಾಗಿಟ್ಟ ಎ.ಕೆ.ಜಿ. ಅತ್ಯಂತ ಪ್ರಭಾವಶಾಲಿ. ಕೆಲವು ಸಂಸತ್ ಸದಸ್ಯರು ಪತ್ರಿಕೆಗಳಲ್ಲಿ ಫೋಟೋ ಹಾಕಿಸಿಕೊಂಡು ನಾಯಕರೆಂದು ಮೆರೆದಾಡುವ ನಕಲಿ ಹೋರಾಟಗಾರರ ಈ ಕಾಲದಲ್ಲಿ ಕಮ್ಯೂನಿಸ್ಟರು ಮಾತ್ರ ರೈತರು, ಕಾರ್ಮಿಕರನ್ನು ಸಂಘಟಿಸಿ ಅವರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡುತ್ತಾರೆ. ಈ ಹೋರಾಟಗಳಿಂದ ಬಂದವರೆ ಪೊಲಿಟ್ ಬ್ಯೂರೋದಂತಹ ಉನ್ನತ ಸ್ಥಾನಗಳಿಗೆ ಏರುತ್ತಾರೆ ಎಂದ ಹಳೆ ಮನೆಯವರು, ಎಲ್ಲಾ ರಾಜಕೀಯ ಪಕ್ಷಗಳೂ ಕಾರ್ಮಿಕ ಸಂಘಗಳನ್ನು ರಚಿಸಿ, ಕಾರ್ಮಿಕರ ನಡುವೆ ಅನೈಕ್ಯತೆ ತಂದಿರುವುದಕ್ಕೆ ಆತಂಕ ವ್ಯಕ್ತಪಡಿಸಿದರು. ಕಾರ್ಮಿಕ ವರ್ಗದ ಪ್ರಶ್ನೆಗಳಿಗೆ ಐಕ್ಯ ಹೋರಾಟ ಅಗತ್ಯವೆಂದರು.

ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪ್ರಭಾಕರ್, ಜನಶಕ್ತಿ ದುಡಿಯುವ ಜನರಿಗೆ ಸದಾ ಕಾಲವೂ ಸ್ಪಂದಿಸುವುದು ಮತ್ತು ಭಾಷೆ, ವಿಷಯ ಇತ್ಯಾದಿಗಳ ಬಗ್ಗೆ ಗಮನವಿಟ್ಟಿರುವುದಾಗಿ ತಿಳಿಸಿದರು. ನಿರಂಜನರ ಸಂಪಾದಕೀಯದಲ್ಲಿ ನಡೆಯುತ್ತಿದ್ದ ಜನಶಕ್ತಿ ಪುನಃ ಆರಂಭವಾಗಿರುವುದನ್ನು ಸ್ವಾಗತಿಸಿದರು ಮತ್ತು ಇದು ದುಡಿಯುವ ಜನರ ಶೈಲಿ ಅಸ್ತ್ರವಾಗುವುದೆಂದರು.

ಭಾರತಿ ಪ್ರಕಾಶನದ ಶ್ರೀನಿವಾಸ್ ಸಮಾರಂಭದಲ್ಲಿದ್ದರು. ಓದುಗರ ಬಳಗದ ಆರ್.ಸುಬ್ರಹ್ಮಣ್ಯ ಸ್ವಾಗತ ಕೋರಿದರೆ, ಬಾಲಾಜಿರಾವ್ ವಂದಿಸಿದರು.

○

ಪುಟಾಣಿಯ ಪ್ರಬುದ್ಧ ಚಿಂತನೆ



ಪ್ರೌಢಶಾಲೆಯಲ್ಲಿ 8ನೇ ತರಗತಿ ಓದುತ್ತಿರುವ ಈ ಪುಟ್ಟ ಬಾಲೆ ಪತ್ರಿಕೆಗೆ 'ನನ್ನ ನೆಚ್ಚಿನ ರಾಷ್ಟ್ರ ನಾಯಕ' ಎಂಬ- ಹುತಾತ್ಮ ಭಗತ್ ಸಿಂಗ್‌ರ ಜೀವನ ಹೋರಾಟ, ಚಿಂತನೆಗಳ ಕುರಿತ ಪ್ರಬಂಧವೊಂದನ್ನು ಕಳಿಸಿದ್ದಾಳೆ.

"ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಎಂದಾದರೆ ಜನರ ಸ್ಥಿತಿ ಹೀಗೆಯೇ ಉಳಿಯುತ್ತದೆ" ಎಂಬಂತಹ ಭಗತ್ ಸಿಂಗ್ ಮಹತ್ವದ ಚಿಂತನೆ ವಿಚಾರವನ್ನು ಗುರುತಿಸಿರುವುದು- ಈ ವಯಸ್ಸಿನಲ್ಲೇ ಇದನ್ನು ಅರ್ಥ ಮಾಡಿಕೊಳ್ಳಲು ಮಾಡಿರುವ ಪ್ರಯತ್ನ ಅಭಿನಂದನೀಯ.

ಪತ್ರದಲ್ಲಿ ಎಲ್ಲೂ ಪುಟಾಣಿಯ ಹೆಸರು ಊರು ದಾಖಲಾಗಿಲ್ಲ. ಈ ಸಂಚಿಕೆ ನೋಡಿ ಪತ್ರ ಬರೆದರೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಪುಟಾಣಿಯ ಓದು ಅಧ್ಯಯನ ಇನ್ನಷ್ಟು ಹೆಚ್ಚಲಿ, ಶುಭಾಶಯಗಳು.

ಸಂ.



ಮಹಿಳಾ ಸಮ್ಮೇಳನದ ಸಂದರ್ಭದಲ್ಲಿ ವಿಶೇಷ ಲೇಖನಗಳಲ್ಲಿ ಮಹಿಳಾ ಸ್ಥಿತಿ ಮತ್ತು ಮಹಿಳಾ ಹೋರಾಟಗಳ ಬಗ್ಗೆ ಪರಿಚಯವಾಯಿತು. ಮಹಿಳೆ ಕುರಿತ ಬರಹಗಳು ಹೆಚ್ಚು ಬರಲಿ.

- ಈರಮ್ಮ ವಿದ್ಯಾರ್ಥಿನಿ, ಮಹಗಾಂವ್

★

ಡಿ ನಿರ್ಮೂಲನೆ ಮಾಡಿಕೊಳ್ಳಲು ಯ(ರೆ)ಡಿಯೂರಪ್ಪನವರು ಯಜ್ಞ ನಡೆಸಿದ್ದರೆ, ರೆಡಿಯೂರಪ್ಪನನ್ನೇ ಸ್ಥಾನದಿಂದ ನಿರ್ಮೂಲನೆ ಮಾಡಲು ಯಜ್ಞಗಳೂ ನಡೆಯುತ್ತಿವೆಯಲ್ಲ. ಇಲ್ಲೂ ಶಕ್ತಿ ಪೈಪೋಟಿಯೇ? ಖ್ಯಾತೆ ಚೆನ್ನಾಗಿ ಬರುತ್ತಿದೆ.

- ರಮೇಶ್, ಬಳ್ಳಾರಿ

★

ಜ್ಞಾನ-ವಿಜ್ಞಾನ ಮತ್ತು ಸಾಮಾನ್ಯ ಜ್ಞಾನ ಪರೀಕ್ಷೆ ಇಷ್ಟವಾದವು.


- ಸುಕನ್ಯಾ, ಬೆಂಗಳೂರು

ವಗ್ಗೈರೆಗಳು....

ಐದು ವರ್ಷಗಳಲ್ಲಿ ಪ್ರವಾಸಕ್ಕೆಂದು ಮೀಸಲಿಟ್ಟ 28 ಕೋಟಿ ಖರ್ಚಿನ ಬದಲು 5 ಕೋಟಿಯಲ್ಲೇ ಎಲ್ಲಾ ಶಾಸಕರ ಪ್ರವಾಸ ಏರ್ಪಾಡಾಗಿದೆಯೆಂದು ಸಮರ್ಥನೆಗಳು ಹೊರಟಿರುವಾಗಲೇ ಶಾಸಕರ ಒಂದು ತಂಡ ಚೀನಾ ತಲುಪಿದೆ. ಚೀನಾಕ್ಕೆ ಹೋಗುವುದು ಅಲ್ಲಿನ ಅಭಿವೃದ್ಧಿ ಅರಿಯಲು ಎಂಬುದು ಘೋಷಿತ ಉದ್ದೇಶ. 'ಅಯ್ಯುರೀ' ಸಾರ್ ಅಲ್ಲಿ ಬರೀ ಬೆರಗುಗಣ್ಣಿನಿಂದ ನೋಡಿ ವಾಪಾಸಗೋದು ಬ್ಯಾಡ್ರೀ.... ಸ್ವಲ್ಪ ತಳಕ್ಕೂ ತಲೆ ಹಾಕಿ ನೋಡ್ರಿ, ಅಲ್ಲಿನ ಸಮಾಜವಾದಿ ವ್ಯವಸ್ಥೆಯೇ ಎಲ್ಲದಕ್ಕೂ ಅಡಿಪಾಯವಾಗಿರುವುದನ್ನು ಕಾಣ್ರಿ"......ಬಂದ್ಮೇಲೆ ಕರ್ನಾಟಕದಲ್ಲಿ ಏನಾರ....ಮಾಡ್ತಿದ್ದರೇನು!?

ರಾಜ್ಯಪಾಲರ ನಿರ್ಗಮನ ಆಗಮನ

ಕರ್ನಾಟಕ್ಕೀಗ ಹೊಸ ರಾಜ್ಯಪಾಲರ ಆಗಮನ, ಟಿ.ಎನ್.ಚತುರ್ವೇದಿಯವರ ನಿರ್ಗಮನ. ಬಂದವರು ರಾಮೇಶ್ವರ ಠಾಕೂರ್ ಯುಪಿಎ ನೇಮಕ ಮಾಡಿದವರು.



ಹೋದವರು ಎನ್‌ಡಿಎ ಯಿಂದ ಈ ಅವಧಿ ಯಲ್ಲಿ ಚತುರ್ವೇದಿ ತುಂಬಾ ಸಭ್ಯವಾಗಿ ನಡೆದುಕೊಂಡರು ಯಾವುದೇ ವಿವಾದಕ್ಕೆ ಒಳಗಾಗಲಿಲ್ಲ ಎನ್ನುವವರು ಇದ್ದಾರೆ. ಹಾಗೆಂದು ಹೇಳಲು ಅವರಿಗೆ ಅವರದೇ ಆದ ಕಾರಣ ಪ್ರೀತಿ, ಮಮಕಾರ ಇರಬಹುದು. ಆದರೆ ರಾಜಭವನದಲ್ಲಿ ಅವರು ಕುಳಿತಿರುವಾಗ ಸಂಘ ಪರಿವಾರವನ್ನು ಅಂತರಂಗದಲ್ಲಿಟ್ಟು ಚಿಂತಿಸಿದವರು. ಉನ್ನತ ಶಿಕ್ಷಣ ರಂಗದಲ್ಲಿ ಉನ್ನತ ಸ್ಥಾನ ಹೊಂದಿರುವ ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಉಪಕುಲಪತಿಗಳನ್ನು ಚೆಡ್ಡಿ ಪರಿವಾರದಿಂದ ಆಯ್ದವರನ್ನೇ ಭರ್ತಿ ಮಾಡಿದರು. ಸಿಂಡಿಕೇಟ್, ಸೆನೆಟ್‌ಗಳಿಗೆ ಸಂಘ ಪರಿವಾರ, ಪರಿಷತ್‌ನ ಕಾರ್ಯಕರ್ತರನ್ನು ತೂರಿಸಿದರು. ವಿಷಾದದ ಸಂಗತಿಯೆಂದರೆ ಇವುಗಳ ವಿರುದ್ಧ ಆಕ್ಷೇಪಗಳ ಧ್ವನಿ ಜೋರಾಗಿ ಕೇಳಲಿಲ್ಲ. ವಿರೋಧ ವ್ಯಾಪಕವಾಗಲಿಲ್ಲ. ಚತುರ್ವೇದಿ ಹೋದರೂ ವಿಶ್ವ ವಿದ್ಯಾಲಯಗಳಿಗೆ ಅಂಟಿರುವ ಈಗಿನ ವ್ಯಾಧಿ, ವೇದನೆ ಸುಲಭವಾಗಿ ಹೋಗಲಾರದು. ಈಗ ಬಂದವರು ಏನು ಮಾಡಲಿದ್ದಾರೆ?


ಹೂ ಬದಲು ಬೀಸಿದರು ಕಲ್ಲು!

ಹೂವು ಚೆಲ್ಲಿ ಸ್ವಾಗತಿಸುತ್ತಿದ್ದವರೇ ಕಲ್ಲು ಬೀಸಿ ಬೀಳ್ಕೊಟ್ಟರು. ಈ ಘಟನೆ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲೇ ಜರುಗಿದೆ. ಮೊನ್ನೆ ಗಂಡಸಿಗೆ ಕಾರ್ಯಕ್ರಮವೊಂದಕ್ಕೆ ಹೋಗಿ ಭರ್ಜರಿ ಭಾಷಣ ಮುಗಿಸಿ ಹೊರಟಿದ್ದ ಕುಮಾರಸ್ವಾಮಿಯವರನ್ನು ಜನರ ಗುಂಪು ತಡೆದು ತಮ್ಮ ಹಲವಾರು ಹಳೆ-ಹೊಸ ಸಮಸ್ಯೆಗಳನ್ನು ಪರಿಹರಿಸುವಂತೆ ಕೇಳಿ ಜನತಾದರ್ಶನ ಆರಂಭಿಸಿದೆ. ಅಹವಾಲು ಹೇಳುವಾಗ ಸಮಸ್ಯೆಯ ಹಿಂದೆ ಮುಂದೆ ವಿವರಿಸುತ್ತಾ 'ಉಸ್ತುವಾರಿ ಸಚಿವರೂ ಸಹ ತಮ್ಮನ್ನು ಕೇರ್ ಮಾಡದೇ ಕಡೆಗಣಿಸುತ್ತಿದ್ದಾರೆ ಮಾತನಾಡಲೂ ಆಗಲಾರದ ವಾತಾವರಣವಿದೆ' ಎಂದೂ ದೂರಿದ್ದಾರೆ. ಅಭಿವೃದ್ಧಿ ಕಾರ್ಯಗಳು ಹೊಳೆನರಸೀಪುರ, ಹಾಸನ, ಸಿ.ಆರ್. ಪಟ್ಟಣಕ್ಕೆ ಗುಳೇ ಹೊರಟಿವೆ ಎಂದೂ ಹೇಳಿದ್ದಾರೆ. ಇದಕ್ಕೆ ಸಿ.ಎಂ.ತಲೆ ಹಾಕುತ್ತಿರುವಂತೆಯೇ ಅಲ್ಲೇ ಇದ್ದ ಉಸ್ತುವಾರಿ ಸಚಿವರು ಸಿ.ಎಂ.ರವರ ಕೈ ಹಿಡಿದು ಜನರಿಂದ ಬಿಡಿಸಿ ಕಾರಿನತ್ತ ಕರೆ (ಎಳೆ)ದೊಯ್ಯಬೇಕೇ! ಕಾರಿನಲ್ಲಿ ಕೂಡಿಸಿಕೊಂಡು ಹೊರಟೇ ಬಿಡೋದೆ? ಹೇಗಿದೆ ಉಸ್ತುವಾರಿಯ ಪವರ್! ಹೇಗೂ ಅವರು ಸಿ.ಎಂ.ರವರ ಅಣ್ಣನಲ್ಲವೇ?

ಇದರಿಂದ ಚಕಿ(ಕುಪಿ)ತರಾದ ಜನ ಓಡುವ ಕಾರಿಗೆ ಕಲ್ಲು ಬೀಸಿ ತಮ್ಮ ಅಹವಾಲು ಮುಟ್ಟಿಸಿಯೇ ಬಿಟ್ಟಿರಲ್ಲ. ಇದು ರಾಜಕೀಯ ಶತೃಗಳ ಪಿತೂರಿ ಎಂದು ಇನ್ನೂ ಹೇಳಿಕೆ ನೀಡಿಲ್ಲ, ಯಾಕೆಂದರೆ ಜೆಡಿ(ಎಸ್)ನ ಕಾರ್ಯಕರ್ತರು ಮುಖಂಡರೇ ಅವರೆಲ್ಲಾ!

ಅಕ್ರಮ ಗಣಿಗಾರಿಕೆ ರೆಡ್ಡಿ + ಕೊಲೆ ಬೆದರಿಕೆಯ ಸಚಿವ

'ಶ್ರೀರಾಮಚಂದ್ರನಿಗೇ ಕಳಂಕ ತಪ್ಪಿಲ್ಲ ಇನ್ನೂ ಶ್ರೀರಾಮುಲು ಪಾಡೇನು?' ಹೀಗೆಂದವರು ಸಾಕ್ಷಾತ್ ಟೂರಿಂಗ್ ಅಥವಾ ಪ್ರವಾಸೋದ್ಯಮ ಸಚಿವ ಶ್ರೀರಾಮುಲುವೇ? ಅದೂ ಬಿಜೆಪಿಯ ರಾಜಕೀಯ ಮೀಟರ್‌ಗೆ ಬಳಸುವ ಸಾಮೂಹಿಕ ವಿವಾಹದ ಕಾರ್ಯಕ್ರಮದಲ್ಲಿ ಅದೂ ಬಳ್ಳಾರಿ ಮಂಗಳೆಂದು ವರ್ಷಕ್ಕೊಂದು ಬಾರಿ ಸಿಂಗರಿಸಿಕೊಂಡು ನೆನಪಿಸಿ ಹೋಗುವ ಸುಷ್ಮಾಸ್ವರಾಜ್‌ರವರ ಎದುರೇ? ಕಂಕಣ



ಕಟ್ಟುವಾಗಲೂ ಸಚಿವರಿಗೆ ಕಳಂಕ ಅಂಟಿಕೊಂಡ ಚಿಂತೆಯಾಕೆ ಅಂತೀರಾ! ಗಣಿಗಾರಿಕೆಯನ್ನೂ ಮನಸೋ ಇಚ್ಛೆ ನಿಯಮ ಉಲ್ಲಂಘಿಸುತ್ತಿರುವ ಸಿಡಿ ಜನಾರ್ಧನರೆಡ್ಡಿ ಗ್ಯಾಂಗ್‌ನ ತಾಳಕ್ಕೆ ಕುಣಿಯಲು ನಿರಾಕರಿಸಿದ ಅರಣ್ಯಾಧಿಕಾರಿ ಡಾ: ರಾಜಶೇಖರನ್‌ರವರಿಗೆ ಧಮಕಿ ಹಾಕಿದವರು ಸ್ವತಃ ಕಾನೂನು ಜಾರಿ ಮಾಡಬೇಕಾದ ಸಚಿವರೇ. ಹೇಳಿದ್ಮಾತು ಕೇಳೋದಿಲ್ಲ ಏನೋ, ನಿನ್ನನ್ನು, ನಿನ್ನ ಹೆಣ್ತಿ, ಮಕ್ಕಳನ್ನು ಕೊಯ್ದು ಕುಣಿಗೆ ದಬ್ಬಬೇಕಾಗುತ್ತದೆ ಎಂದೆಲ್ಲಾ ಬೆದರಿಸಿದ್ದಾರೆಂದು ತೋರಣಗಲ್ಲು ಪೋಲೀಸ್ ಸ್ಟೇಷನ್‌ನಲ್ಲಿ ದೂರು ನೀಡಲಾಗಿದೆ. ಗಣಿಗಾರಿಕೆ = ಅಕ್ರಮ ಹಣ+ದಾದಾಗಿರಿ ಗಣಿ ಕುಣಿ ರಾಜಕಾರಣ ಪರವಾಯಿತಲ್ಲ. ಶ್ರೀ ರಾಮಚಂದ್ರನನ್ನೇ ಕುಣಿಗೆ ಎಳೆದುಕೊಳ್ಳುವ ಹಕೀಕತ್ತು, ಜೆಡಿ(ಎಸ್)ನ ಸಿಎಂ ಇರುವಾಗ ಹೀಗೆ! ಬಿಜೆಪಿ ಸಿಎಂ ಆದಾಗ ಇನ್ಹೇಗೆ?

- ಜೀ

ಆತ್ಮೀಯ ಚಂದಾದಾರರು, ಓದುಗರು, ಏಜೆನ್ಸಿದಾರರ ಗಮನಕ್ಕೆ

ಅಂಚೆ ಮೂಲಕ ಕಳಿಸುತ್ತಿರುವ ಪತ್ರಿಕೆಗಳು ಹಲವು ಬಾರಿ ಚಂದಾದಾರರಿಗೆ ತಲುಪುತ್ತಿಲ್ಲವೆಂಬ ದೂರುಗಳು ಬರುತ್ತಿವೆ. ಅಂತಹ ದೂರುಗಳೇನಾದರೂ ಇದ್ದಲ್ಲಿ ದಯಮಾಡಿ ಪತ್ರಿಕೆಯ ಕಾರ್ಯಾಲಯವನ್ನು ಮಾತ್ರ ಸಂಪರ್ಕಿಸಿ. ಎಲ್ಲ ಅಲ್ಲಿಯ ಅಂಚೆ ಕಛೇರಿಯಲ್ಲೂ ದೂರು ನೀಡಿ ಇನ್ನೂ, ಚಂದಾ ಹಣ ಪಾವತಿ, ಏಜೆನ್ಸಿ ಬಾಕಿ ವಿವರ, ಪತ್ರಿಕೆಗಳ ಪ್ರತಿ, ಹೆಚ್ಚಳ, ಇತ್ಯಾದಿ ಇಂತಹ ಯಾವುದೇ ಮಾಹಿತಿ, ಅಗತ್ಯಗಳಿಗಾಗಿ ತಾವು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಜನಶಕ್ತಿ ಕಾರ್ಯಾಲಯ 080-22236462 (ವೀರಣ್ಣ ಕಲ್ಮನಿ).

ದಯಮಾಡಿ ವಿಳಾಸಗಳನ್ನು ಕನ್ನಡದಲ್ಲಿ, ಬಿಡಿ ಅಕ್ಷರಗಳಲ್ಲಿ ಪಿನ್‌ಕೋಡ್ ಸಮೇತ ಸರಿಯಾಗಿ ಅರ್ಥವಾಗುವಂತೆ ಬರೆಯಿರಿ. ಬರೆದು ಕಳಿಸಿದ ವಿಳಾಸಗಳು ಅರ್ಥವಾಗದೇ ತುಂಬ ತೊಂದರೆಯಾಗುತ್ತಿದೆ.

ಸಂಪಾದಕೀಯ

ಫ್ಯಾಸಿಸ್ಟ್ ಕ್ರಿಮಿ(ನಲ್)ಗಳನ್ನು ಖುಲಾಸೆ ಮಾಡಿದ ಸಂಪುಟ

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಭಜರಂಗದಳದ ಪುಂಡರ ಮೇಲೆ ಹೂಡಲಾಗಿದ್ದ ಮೊಕದ್ದಮೆಗಳನ್ನು ಹಿಂತೆಗೆಯಲು ಗುರುವಾರದಂದು ನಡೆದ ಸಚಿವ ಸಂಪುಟದ ಸಭೆ ನಿರ್ಧಾರ ಅತ್ಯಂತ ಆಘಾತಕಾರಿಯಾಗಿದೆ. ಹಿಂತೆಗೆದ 51 ಮೊಕದ್ದಮೆಗಳು ಬಹುತೇಕ ಕ್ರಿಮಿನಲ್ ಸ್ವರೂಪದ್ದಾಗಿವೆ. ರಾಜ್ಯದ ವಿವಿದೆಡೆ ಸಂಭವಿಸಿದ ಕೋಮುಗಲಭೆಗಳಲ್ಲಿ ನೇರವಾಗಿ ತೊಡಗಿ ಸಮಾಜದ ಶಾಂತಿ ಸಾಮರಸ್ಯಕ್ಕೆ ಕೊಳ್ಳಿ ಇಟ್ಟು ವಿಭಜನೆಯ ವಿದ್ವೇಷ ಹಬ್ಬಿಸಿದ ಘಟನೆಗಳಾಗಿವೆ. ಪ್ರಾಣ ತೆಗೆವ ಬೆದರಿಕೆ, ಕಳವು, ದರೋಡೆ ಕೊಲೆಯತ್ನಗಳು ಪ್ರಮುಖವಾಗಿವೆ. ಇಂತಹ ಕ್ರಿಮಿನಲ್ ಕೃತ್ಯಗಳನ್ನು ಕನಿಷ್ಠ ವಿಚಾರಣೆಗೂ ಒಳಪಡಿಸದೇ 'ಮನ್ನಾ' ಮಾಡುವ ಮೂಲಕ ಕೋಮುವಾದಿ ಫ್ಯಾಶಿಸ್ಟ್ ಕ್ರಿಮಿನಲ್‌ಗಳಿಗೆ 'ಸಮಾಜ ಸೇವಕರು' ಮತ್ತು 'ದೇಶಪ್ರೇಮಿಗಳ' 'ಪ್ರಶಸ್ತಿ'ಯನ್ನು ಜೆಡಿ(ಎಸ್)-ಬಿಜೆಪಿ ಸರ್ಕಾರ ನೀಡಿ ಹರಸಿದೆ. ಸರ್ಕಾರದ ಕೃಪಾ ಪೋಷಣೆಯಿಂದ ಖುಲಾಸೆಗೊಂಡ ಈ ಕ್ರಿಮಿನಲ್‌ಗಳು ಆಚರಿಸುವ ವಿಜಯೋತ್ಸವದಲ್ಲಿ ಖಾವಿಧಾರಿ ಸಮಾಜೋದ್ಧಾರಕ ಸ್ವಾಮಿಗಳ ಜೊತೆಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ, ಕಾನೂನು ಸಚಿವರು ಭಾಗವಹಿಸಿ 'ಆಶೀರ್ವಚನ' ನೀಡುವುದೊಂದೇ ಇನ್ನು ಬಾಕಿ!


ಸಂಪುಟದ ಸಭೆ ಇಂತಹ ತೀರ್ಮಾನ ಕೈಗೊಳ್ಳುವ ಕೆಲವೇ ದಿನಗಳ ಹಿಂದಷ್ಟೇ ಸಂಘ ಪರಿವಾರದ ಸೃಷ್ಟಿಯಾದ ಶ್ರೀರಾಮಸೇನೆಯ ಕಾರ್ಯಕರ್ತ ಉಡುಪಿಯಲ್ಲಿ ಯುವತಿಯೊಬ್ಬಳ ಮೇಲೆ ಅತ್ಯಾಚಾರ ನಡೆಸಿ ಸಿಕ್ಕಿಬಿದ್ದಿದ್ದ. ಆದರ ಅಂಚಲ್ಲೇ ಮಂಗಳೂರಿನಲ್ಲಿ ಭಜರಂಗದಳದ ನಾಯಕ ಇಂತಹದ್ದೇ ಕೃತ್ಯ ನಡೆಸಿ ಖಾವೀ ಮುಖವಾಡದ ಹಿಂದಿರುವ ನಿಜಸ್ವರೂಪ ತೋರಿಸಿದ್ದ. ಗೋವುಗಳನ್ನು ಸಾಗಿಸುತ್ತಿದ್ದಾರೆಂದು ಧಾಳಿ ಮಾಡುವುದು, ಗೋವುಗಳನ್ನು ಅಪಹರಿಸುವುದು, ಡ್ರೈವರ್, ಮುಂತಾದವರ ಮೊಬೈಲ್ ಹಣ ಕಿತ್ತುಕೊಳ್ಳುವುದು, ಅಲ್ಪಸಂಖ್ಯಾತರ ಮೇಲೆ, ಅವರ ಅಂಗಡಿಗಳಲ್ಲಿ ದುಡಿಯುವ ಬಡ ಯುವತಿಯರ ಮೇಲೆ ದಿನವೂ ಧಾಳಿ ಮಾಡುವುದು, ಮಾನ ತೆಗೆಯುವಂತಹ ಹೀನ ಕೃತ್ಯಗಳಲ್ಲಿ ತೊಡಗಿದ್ದಾರೆ. ಈ ಹಿಂದೆ ಬೆಳ್ತಂಗಡಿಯ ದಲಿತ ಯುವತಿಯ ಮೇಲೆ ಭಜರಂಗದಳ ನಾಯಕ ಅತ್ಯಾಚಾರ ಎಸಗಿದ್ದ, ದನ ಸಾಗಾಟಿಕೆ ಮಾಡುತ್ತಿದ್ದಾರೆಂದು ಆರೋಪಿಸಿ ಅಲ್ಪಸಂಖ್ಯಾತರೊಬ್ಬರ ಕೈ ಕಡಿದಿದ್ದಾತನನ್ನು ಅಲ್ಲಿಯ ಬಿಜೆಪಿ ಶಾಸಕರು ಬಹಿರಂಗವಾಗಿಯೇ ಅಭಿನಂದಿಸಿ ಸನ್ಮಾನ ಮಾಡಿದ್ದರು. ಗೃಹಿಣಿಯೊಬ್ಬಳನ್ನು ಭಜರಂಗದಳದ ಕಾರ್ಯಕರ್ತರು ಪತಿಯೆದುರೇ ಅತ್ಯಾಚಾರ ಮಾಡಿದ್ದರು. ಇವರೆಲ್ಲಾ ಹಿಂದೂವಾಗಿದ್ದಾರೆ. ಇನ್ನು ಉಡುಪಿಯ ಹಸನಬ್ಬ ಹಾಜಪ್ಪರನ್ನು ಬೆತ್ತಲೆ ಗೊಳಿಸಿ ಹಿಂಸಿಸಿದ್ದ ಘಟನೆ ವಿವರಿಸಬೇಕಿಲ್ಲ. ಕರಾವಳಿಯ ಪ್ರದೇಶದಲ್ಲೆಲ್ಲಾ ಧರ್ಮ ರಕ್ಷಣೆ ಸಂಸ್ಕೃತಿ ಉಳಿವಿನ ಹೆಸರಿನಲ್ಲಿ ಕ್ರಿಮಿನಲ್‌ಗಳೂ, ರಾಜಕಾರಣಿಗಳು, ಅಧಿಕಾರಶಾಹಿಗಳೂ ಒಂದಾಗಿ ನಿಂತಿದ್ದಾರೆ.

ಕಳೆದ ಮೂರು ವರ್ಷಗಳ ಹಿಂದೆಯೂ ಉಳ್ಳಾಲದಲ್ಲಿ ಘಟಿಸಿದ್ದ ಭೀಕರ ಕೋಮುಗಲಭೆಯನ್ನು (ಇಲ್ಲಿ ಅಲ್ಪಸಂಖ್ಯಾತರ ಮೇಲೆಯೇ ಏಕಮುಖಿ ಧಾಳಿ ನಡೆದದ್ದು) ಹೊತ್ತಿಸಿದ್ದ ಶಾಸಕ ಕುಂಬ್ಳೆ ಸುಂದರರಾವ್ ಮತ್ತವರ ಪಟಾಲಂಗಳ ಮೇಲಿನ ಮೊಕದ್ದಮೆಗಳನ್ನು ಸ್ಪಷ್ಟ ದಾಖಲೆಗಳಿದ್ದರೂ ಕಾನೂನಿನ ಕ್ರಮಕ್ಕೆ ಬಿಡದೇ ಕೇಸ್‌ಗಳನ್ನು ಜಾ-ಕೋ ಸರ್ಕಾರ ಹಿಂತೆಗೆವ ಮೂಲಕ ಅಲ್ಲಿನ ದುಷ್ಟರಿಗೆ ಅಭಯದ ಸಂಕೇತವನ್ನು ರವಾನಿಸಿತ್ತು.

ಈಗ ಹಿಂತೆಗೆದ ಮೊಕದ್ದಮೆಗಳ ಘಟನೆಗಳು ನಡೆದಿರುವುದು ಹಾವೇರಿ, ಶಿವಮೊಗ್ಗ, ಬೆಳಗಾಂ, ಮಂಡ್ಯ, ಗದಗ, ವಿಜಾಪುರ ಬಾಗಲಕೋಟೆ, ಕೊಡಗು, ಧಾರವಾಡ, ದಕ್ಷಿಣ ಕನ್ನಡ ಜಿಲ್ಲೆಗಳ ಪ್ರದೇಶಗಳಾಗಿವೆ. ಅಕ್ರಮ ಕೂಟ, ಹಲ್ಲೆ, ಸಾರ್ವಜನಿಕ ಆಸ್ತಿಹಾನಿ, ದರೋಡೆ, ಜೀವ ತೆಗೆದ ಬೆದರಿಕೆ, ಕೊಲೆಯತ್ನದ ಮೊಕದ್ದಮೆಗಳಾಗಿವೆ. ಭಾರತದ ಸಂವಿಧಾನ, ಕಾನೂನು - ಸುವ್ಯವಸ್ಥೆಗೆ ಸೆಡ್ಡು ಹೊಡೆದು ಧಿಕ್ಕರಿಸಿ 'ತಮ್ಮದೇ ಕಾನೂನು' ಚಲಾಯಿಸುತ್ತಾ ನಿಂತವರು ಇವರು. ಈ ಮೊಕದ್ದಮೆಗಳನ್ನು ಹಿಂತೆಗೆಯಲು (ಮನವಿ ನೀಡಿದವರು ಬಿಜೆಪಿ ಶಾಸಕ ಚರಂತಮಠ್) ಪೋಲೀಸ್, ಕಾನೂನು ಇಲಾಖೆಗಳು ವಿರೋಧ ವ್ಯಕ್ತಪಡಿಸಿದ್ದರೂ ಅದನ್ನು ಲೆಕ್ಕಿಸದೇ ಸಂಪುಟ ಸಭೆಗೆ ಪ್ರಸ್ತಾವನೆ ಇರಿಸಿ, ಮೊಕದ್ದಮೆಗಳನ್ನು ಹಿಂತೆಗೆಯಲಾಗಿದೆ. ಇದರಲ್ಲಿ ಬಿಜೆಪಿಯದ್ದೇ ಪ್ರಧಾನ ಪಾತ್ರವಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಜಾತ್ಯಾತೀತರು ಎಂದೂ ಈಗಲೂ ಸಾರಿಕೊಳ್ಳುವ ಜೆಡಿ(ಎಸ್) ನ ಮುಖ್ಯಮಂತ್ರಿ, ಗೃಹಮಂತ್ರಿ, ಇತರರು ತಕರಾರು ಎತ್ತದೇ ಹೂಂಗುಟ್ಟಿರುವುದು ಅಪರಾಧವೇ ಸರಿ. ಇನ್ನು ಇಂತಹ ಬಿಜೆಪಿಗೆ ಅಧಿಕಾರ ಹಸ್ತಾಂತರವಾದಲ್ಲಿ ಎಂತಹ ಅನಾಹುತಗಳು ಕಾದಿದೆಯೋ ಎಂಬ ಆತಂಕ ಸೃಷ್ಟಿಯಾಗಿದೆ.

ಈಗಲಾದರೂ ಸರ್ಕಾರ ರಾಜ್ಯದ ಹಿತಾಸಕ್ತಿಗೆ ಮಾರಕವಾಗುವ, ಕರ್ನಾಟಕದ ಜನತೆಗೆ ಅನ್ಯಾಯವೆಸಗುವ ಸಂಪುಟದ ನಿರ್ಧಾರವನ್ನು ಜಾರಿಗೊಳಿಸದೇ ರದ್ದುಪಡಿಸಬೇಕು. ಈಗ ಆವರಿಸುತ್ತಿರುವ ಕರಿನೆರಳಿನಲ್ಲಿ ಪಾಲಿಸಬಹುದಾದ ಒಂದು ಕಾನೂನು-ಸಂವಿಧಾನದ ಬೆಳಕಿನ ಕಿರಣವಾದರೂ ಕಾಣಲು ಸಾಧ್ಯವಾದೀತು.

ಶಕ್ತಿ ಕ್ರೋಡೀಕರಣದತ್ತ ಬಿಜೆಪಿ ತವಕ



ಅಧಿಕಾರದ ಹಸ್ತಾಂತರದ ಚರ್ಚೆಯಲ್ಲಿ ಎರಡೂ ಪಕ್ಷಗಳು ಮುಳುಗಿವೆಯಾದರೂ. ಇದೇ ಹೊತ್ತಿನಲ್ಲಿ ಬಿಜೆಪಿ ತನ್ನ ನೆಲೆಯನ್ನು ಬಲಗೊಳಿಸ ಹೊರಟಿದೆ.

ಅಕ್ಟೋಬರ್ ಮೂರರ ನಂತರ ಕರ್ನಾಟಕದ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ಊಹಾಪೋಹಗಳನ್ನು ತೇಲಿಬಿಡುತ್ತಲೇ ಬಂದಿರುವ ಜೆಡಿ(ಎಸ್) ಮತ್ತು ಬಿಜೆಪಿ ಪಕ್ಷಗಳ ನಾಯಕರು ಇನ್ನು ಮುಂದೆ ಗೊಂದಲದ ಹೇಳಿಕೆ ನೀಡಬಾರದೆಂದು ದೃಢ ನಿರ್ಧಾರ ಮಾಡಿದ್ದಾರೆಂದು ಹೇಳಲಾಗುತ್ತಿದೆ. ಆದರೆ ಅಂತಹ ಗೊಂದಲ ಸೃಷ್ಟಿಸುವುದು ನಿಂತಿಲ್ಲ. ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯವರೇ ಈ ಮೈತ್ರಿ, ಅಭಾಧಿತವೆಂದೂ, ಒಡನೆಯೇ 3 ರ ನಂತರ ಏನಾಗುವುದೋ ಯಾರು ಬಲ್ಲರು ಎಂದು ಹೇಳಿಕೆ ನೀಡುತ್ತಿದ್ದಾರೆ. ಯಡಿಯೂರಪ್ಪ ಹಸ್ತಾಂತರದ ಬಗ್ಗೆ ಮಾತೇ ಆಡೋಲ್ಲ ಎಂದು ದಿನಕ್ಕೆ ನಾಲ್ಕು ಬಾರಿಯಾದರೂ ಹೇಳುತ್ತಾರೆ. ಮುಖ್ಯಮಂತ್ರಿ ಅವರ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ಜಾಡು ಹಿಡಿದು ನೋಡಿದರೆ ಮುಖ್ಯಮಂತ್ರಿ ಯಡಿಯೂರಪ್ಪ ಬದಲು ಬೇರೊಬ್ಬರನ್ನು ಮಾಡಬಹುದು ಎಂಬ ಇಂಗಿತವೂ ಇದ್ದಂತಿದೆ. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಜೊತೆಗೂ ಮೈತ್ರಿ ಬಗ್ಗೆ ಪ್ರಯತ್ನಗಳೂ ನಡೆದಿದ್ದವು. ಈ ನಡುವೆ ಹಸ್ತಾಂತರದ ವಿಷಯ ಏನೆಂದು ಸ್ಪಷ್ಟವಾಗಿ ಚರ್ಚಿಸಿಯೇ ಬಿಡೋಣ ಎಂದು ಸೇರಬೇಕಿದ್ದ ಎರಡು ಪಕ್ಷಗಳ ಸಮನ್ವಯ ಸಭೆ ನಿಗದಿ - ಮರು ನಿಗದಿಯಾಗಿ ಸೇರಲೇ ಇಲ್ಲ.



ಜೆಡಿ(ಎಸ್)ನ 20 ತಿಂಗಳು ಅಧಿಕಾರ ಮುಗಿದ ಬಳಿಕವೂ ಆದರ ಹಿಡಿತ ಸರ್ಕಾರದ ಮೇಲೆ ಪ್ರಮುಖವಾಗಿ ಇರಬೇಕೆಂಬ ಕಸರತ್ತು ಜೆಡಿ(ಎಸ್)ನಲ್ಲಿ ನಡೆದಿದೆ. ಬಿಜೆಪಿಯೇ ಹೇಗಾದರೂ ಅಧಿಕಾರದಕ್ಕಿಸಿಕೊಂಡು ಬಿಡಬೇಕು ಎಂದು ವಿವಿಧ ರೀತಿಯಲ್ಲಿ ಯತ್ನಿಸುತ್ತಿದೆ. ಆದರೆ ಇದೆಲ್ಲಕ್ಕೂ ಭಿನ್ನವಾಗಿ ಬಿಜೆಪಿ ಈ ಹಸ್ತಾಂತರದ ಮಟ್ಟಿಗೆ ಮಾತ್ರ ನಿಲ್ಲದೇ ಇಡೀ ರಾಜ್ಯದಲ್ಲಿ ತನ್ನ ವರ್ಚಸ್ಸು, ಮುಖ್ಯವಾಗಿ ಸಂಘಟನೆಯನ್ನು ಕ್ರೋಢೀಕರಿಸಿಕೊಳ್ಳಲು ತಳಮಟ್ಟದಲ್ಲಿ ಇಳಿದಿದೆ. ಈ ಮೂಲಕ ಮ್ಲಾನತೆ ಕವಿದಿರುವ ನಾಯಕತ್ವ ಹಾಗೂ ಪಕ್ಷದ ಪ್ರಭಾವ ಹೆಚ್ಚಿಸಿಕೊಳ್ಳುವ ದಿಕ್ಕಿನಲ್ಲಿ ಈ ಪ್ರಯತ್ನಗಳಿಗಿದಿದೆ. ಅಂದರೆ ಅಧಿಕಾರ ತಮಗೆ ದೊರೆತರೆ ಅದನ್ನೂ ಬಳಸಿ ಬಿಜೆಪಿಯನ್ನು ಗಟ್ಟಿಗೊಳಿಸುವುದು. ಒಂದು ವೇಳೆ ತಪ್ಪಿದರೆ ಮುಂದಿನ ಚುನಾವಣೆಗಳಲ್ಲಿ ತಮ್ಮ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುವುದು ಎಂಬ ಗುರಿ ಇರಿಸಿಕೊಂಡಿದೆ. ಆದ್ದರಿಂದಲೇ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೇ ನೆಪವಾಗಿರಿಸಿಕೊಂಡು ಮತಗಟ್ಟೆವಾರಾಗಿ ಕಾರ್ಯಕರ್ತರ ತಂಡಗಳನ್ನು ಕಟ್ಟಲು ತೊಡಗಿದೆ. ಒಂದು ಬೂತ್‌ಗೆ ಕನಿಷ್ಟ 10 ಕ್ರಿಯಾಶೀಲ ಕಾರ್ಯಕರ್ತರನ್ನು ಹೊಂದಲಿದೆ ಎಂದು ಈಗ 250 ಅಂತಹ ಸಮಿತಿಗಳು ರಚಿಸಲಾಗಿದ್ದು ಒಟ್ಟು 4000 ಗುರಿ ತಲುಪುವುದಾಗಿ ಬಿಜೆಪಿ ಹೇಳಿದೆ. ಅಂದರೆ ಕನಿಷ್ಟ 40 ಸಾವಿರ ಕಾರ್ಯಕರ್ತರ ತಂಡ ಕಟ್ಟುವುದು. ಇದಕ್ಕೆ ಚಾಲನೆ ನೀಡಲು ಅಖಿಲ ಭಾರತ ಮುಖಂಡ ವೆಂಕಯ್ಯನಾಯ್ಡು ಭಾಗವಹಿಸಿ ಒತ್ತು ತಂದಿದ್ದಾರೆ.

ಜೆಡಿ(ಎಸ್)ಗೆ ಇಂತಹ ಚಿಂತನೆ, ಸಂಘಟನಾ ಶಕ್ತಿ ಕ್ರೋಢೀಕರಿಸಿಕೊಳ್ಳುವ ಕ್ರಮಗಳು ಬೇಕೇ ಆಗಿಲ್ಲ ಎಂಬಂತೆ ವರ್ತಿಸುತ್ತಿದೆ. ಅದನ್ನು ಜೆಡಿ(ಎಸ್) ನಿರ್ಲಕ್ಷಿಸುತ್ತಿದ್ದರೆ ಬಿಜೆಪಿ ಕ್ರೋಢೀಕರಿಸಲು ಬಯಸುತ್ತದೆ. ಕೆಳಹಂತಗಳಲ್ಲಿ ಈ ಕ್ರಮದಿಂದಾಗಿ ಜೆಡಿ(ಎಸ್)ನ ಕಾರ್ಯಕತರು ಈ ಸೆಳವಿಗೆ ಹೋಗುವುದಿಲ್ಲ ಎಂದು ಹೇಳುವುದು ಅಸಾಧ್ಯ. ಮೇಲಾಗಿ ಆರ್.ಎಸ್.ಎಸ್. ಇದರ ಬೆನ್ನುಲುಬಾಗಿ ನಿಂತು ಕೆಲಸ ಮಾಡುತ್ತದೆ. ಹಿಂದೂ ಸಮಾಜೋತ್ಸವಗಳಲ್ಲಿ ವಿವಿಧ ಪಕ್ಷಗಳ ಮುಖಂಡರನ್ನು, ಕಾರ್ಯಕರ್ತರನ್ನು ಒಳಗೊಂಡಿದ್ದು, ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಸುರಿದಿದ್ದು ಸುಮ್ಮನೇ ಏನಲ್ಲ. ಹೀಗೆ ಕರ್ನಾಟಕದ ರಾಜಕಾರಣ ಸೂಕ್ಷ್ಮವಾದ ಸ್ಥಿತಿಯತ್ತ ಜಾರುತ್ತಿದೆ.


ಅಧಿಕಾರ ಹಸ್ತಾಂತರದ ತರಹೇವಾರಿ ಹೇಳಿಕೆ, ಸುದ್ದಿಗಳಿಂದ ಕಂಗಾಲಾದ ಬಿಜೆಪಿ ಸಚಿವರು ನೇರವಾಗಿ ಕುಮಾರಸ್ವಾಮಿಯನ್ನೇ ಕೇಳಿ ಬಿಡೋಣವೆಂದು ಸಚಿವ ಸಂಪುಟಕ್ಕೆ ಸೀದಾಬರದೇ ಮುಖ್ಯಮಂತ್ರಿ ಕಛೇರಿಯಲ್ಲಿ ಧರಣಿ ನಡೆಸಿದರಂತೆ. ಆನಂತರ ಮುಖ್ಯಮಂತ್ರಿ ಆಹ್ವಾನದಂತೆ ಸಭೆಗೆ ಹೋಗಿ ತಮ್ಮ ಆಕ್ಷೇಪಗಳಿಗೆ ವಿವರಣೆ ಹೇಳಿ ಎಂದರಂತೆ. ಬೇಸತ್ತ ಸ್ವಾಮಿ ವಿಧಾನಸಭೆ ವಿಸರ್ಜನೆ ಬಗ್ಗೆ ಮಾತನಾಡಿದಾಗ ಅವರಿಗೂ ಯಡಿಯೂರಪ್ಪನವರ ನಡುವೆ ಬಿಸಿ ಬಿಸಿ ವಾಗ್ವಾದ ನಡೆದು ಕೊನೆಗೆ ಹಸ್ತಾಂತರ ಬಗ್ಗೆ ಹೇಳಿಕೆ ನೀಡಬಾರದೆಂದು ಅಭಿಪ್ರಾಯಕ್ಕೆ ಬಂದಿದ್ದಾರಂತೆ. ಆದರೆ ಇದು ಎಷ್ಟು ದಿನ, ಎಷ್ಟು ಗಂಟೆಗಳವರೆಗೆ?

ಆನೆ ಬೆನ್ನ ಹತ್ತಿದರೆ ಬಡತನ, ಅಸಮಾನತೆ ಮಾಯವೇ?!

ಉತ್ತರ ಪ್ರದೇಶದ 'ರೆಡಿಮಿಕ್ಸ್' ಫಾರ್ಮುಲಾವನ್ನು ಕರ್ನಾಟಕದಲ್ಲಿ ಪ್ರಯೋಗಿಸಲು ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮುಂದಡಿ ಇಟ್ಟಿದೆ. ದಲಿತರೇ ಮುಖ್ಯಮಂತ್ರಿಯಾಗಬೇಕು, ಪ್ರಧಾನ ಮಂತ್ರಿಯಾಗಬೇಕು (ಅದು ಮಾಯಾವತಿಯೇ ಆಗಬೇಕು) ಅಂದರೆ ಮಾತ್ರ ದಲಿತರ ಸಮಸ್ಯೆ ಮಾಯವಾಗುತ್ತದೆ ಎಂಬ ವಾದ ಮಂಡಿಸುತ್ತಿದ್ದವರು ಈಗ ಮುಸ್ಲಿಂರನ್ನು, ಹಿಂದೆ ತೀವ್ರವಾಗಿ ವಿರೋಧಿಸುತ್ತಿದ್ದ ಬ್ರಾಹ್ಮಣರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಹೊರಟಿದ್ದಾರೆ. ಅದಕ್ಕಾಗಿ ಇತ್ತೀಚೆಗೆ ಬಿಎಸ್‌ಪಿ ಯೊಳಕ್ಕೆ ಮುಸ್ಲಿಂ ಸಮಾಜ, ಈಗ ಬ್ರಾಹ್ಮಣ ಸಮಾಜ' ಎಂದು ಇಡೀ ಆಯಾ ಜಾತಿ-ಸಮೂಹಗಳೇ ಬಿಎಸ್‌ಪಿಗೆ ಗುಳೇ ಹೊರಟಿದೆ ಎಂದು ಬಿಂಬಿಸುತ್ತಿರುವುದು ಪ್ರಚಾರದ ಒಂದು ತಂತ್ರ.

ಇಲ್ಲಿ ಯಾರು ಬೇಕಾದರೂ ಯಾವ ಪಕ್ಷವನ್ನು ಸೇರಬಹುದು, ಅಥವಾ ಸೇರಿಸಿಕೊಳ್ಳಬಹುದು. ಪ್ರಶ್ನೆ ಎಂದರೆ ಪ್ರಜಾಸತ್ತಾತ್ಮಕ ರಾಜಕಾರಣಕ್ಕೆ ಮಾನದಂಡ ಯಾವುದು? ಜನಸಮೂಹದ ಸಮಸ್ಯೆ, ಬೇಕು ಬೇಡಗಳೇ? ಅಥವಾ ಜಾತಿಯೇ-ಜಾತಿಯ ಬಳಕೆಯೇ ಬಿಎಸ್‌ಪಿ ಯ ಆಯ್ಕೆ. ಎರಡನೇಯದ್ದು, ದಲಿತ ಸಮುದಾಯ ಅತ್ಯಂತ ತುಳಿತಕ್ಕೊಳಗಾಗಿ, ಶೋಷಣೆಗೆ ಒಳಗಾಗಿದೆ. ಕೃಷಿ ಕೂಲಿಕಾರರಲ್ಲಿ, ಶೇ 70 ರಷ್ಟು ದಲಿತರೇ, ಅದೂ ಭೂ ಹೀನರು, ಮುಸ್ಲಿಂರ ಸ್ಥಿತಿ ದಲಿತರ ಸ್ಥಿತಿಗಿಂತ ಬಹಳ ಏನೂ ಸುಧಾರಿಸಿಲ್ಲ. ಬ್ರಾಹ್ಮಣರಲ್ಲಿಯೂ ದಾರಿದ್ರ್ಯತೆ, ಬಡತನದಿಂದ ನರಳುವವ ಅಸಂಖ್ಯಾತರು ಇದ್ದಾರೆ. ಹಾಗೆಯೇ ಇತರ ಜಾತಿಗಳಲ್ಲಿಯೂ ಇದ್ದಾರೆ. ಈ ಬಡವರ ಬದುಕಿನ ಬಗ್ಗೆ ಬಿಎಸ್‌ಪಿಯ ಕಾರ್ಯಕ್ರಮವೇನು? ಹೋರಾಟದ ಗೊತ್ತು ಗುರಿ ಏನು? ವರ್ಗ ಶೋಷಣೆ ಮತ್ತು ಜಾತಿ ದಮನದ ಎದುರು ಮೂಲಭೂತ ಪ್ರಶ್ನೆಗಳನ್ನು ಎತ್ತಿ ಅವುಗಳ ನಿರ್ಮೂಲನೆಗೆ ಹೋರಾಡದೇ ಜಾತಿಗಳ ಆಧಾರದಲ್ಲಿ ಜನರನ್ನು ಸೆಳೆಯುವುದು ಅವರ ವಿಮೋಚನೆ ಹಾದಿ ತಪ್ಪಿಸಿದಂತಾಗುತ್ತದೆ. ಮಾತ್ರವಲ್ಲ ಜನತೆಯ ಪ್ರಜಾಸತ್ತಾತ್ಮಕ ಚಳುವಳಿಗೆ ಒಂದು ಗಂಭೀರ ಪೆಟ್ಟಾಗುತ್ತದೆ ಮತ್ತು ಬಿಎಸ್‌ಪಿ ಯ ಈ ಪ್ರಯೋಗವೇ ಅಡ್ಡಿಗಲ್ಲಾಗುತ್ತದೆ. ಅದು ದಲಿತರಾಗಲಿ, ಮುಸ್ಲಿಂ, ಬ್ರಾಹ್ಮಣರೇ ಆಗಲಿ ಅವರ ಪ್ರಶ್ನೆ ವರ್ಗ ವೈಷಮ್ಯ ಮತ್ತು ಜಾತಿ ದಮನ, ಶೋಷಣೆ ವಿರುದ್ಧ ನಡೆಯಲೇಬೇಕು. ಇಲ್ಲವಾದಲ್ಲಿ ಮಾಯಾವತಿ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಯಾದರೂ ದಲಿತರ ಜೀವನದಲ್ಲಿ ಯಾವುದೇ ಪರಿವರ್ತನೆಯಾಗಲಿಲ್ಲ. ಆಗಲೂ ಈಗಲೂ ದಲಿತರ ಸ್ಥಿತಿ ಭೀಭತ್ಸವೇ ಆಗಿದೆ. ವ್ಯವಸ್ಥೆಯ ಕಾಲ್ತುಳಿತದಲ್ಲಿ ನರಳಬೇಕಿದೆ. ಇದನ್ನು ತಪ್ಪಿಸದೇ ಆನೆ ಹತ್ತಿ ದೆಹಲಿ ಹೊರಟಾಗಲೂ ಏನಾಗಲಿದೆ? ಈಗಿನಷ್ಟು, ಇದಕ್ಕಿಂತಲೂ ರವಷ್ಟು ಹೆಚ್ಚು!

ಜನಶಕ್ತಿ ಕನ್ನಡ ವಾರಪತ್ರಿಕೆ ಸೆಪ್ಟೆಂಬರ್ 2, 2007



ಸಿ.ಯತಿರಾಜು

1857ರ ಬಂಡಾಯ

ಈ ಬಂಡಾಯದ ಸಂದರ್ಭದಲ್ಲಿ ದೇಶೀಯ ಶೋಷಕ ವರ್ಗಗಳನ್ನು ರೈತರು ಪ್ರಶ್ನಿಸುವ ಬೆಳವಣಿಗೆಯನ್ನು ನಾವು ಸ್ಪಷ್ಟವಾಗಿ ಗುರ್ತಿಸ ಬಹುದಾಗಿದೆ. ಹಳ್ಳಿಗಳ ಲೇವಾದೇವಿದಾರರ ಶೋಷಣೆ ಮತ್ತು ವಂಚನೆಗಳ ವಿರುದ್ಧವು ರೈತರು ಇದೇ ಸಂದರ್ಭದಲ್ಲಿ ಬಂಡೆದ್ದರು. ಹಲವಾರು ಪ್ರದೇಶಗಳಲ್ಲಿ ಬಂಡಾಯಗಾರರು ಲೇವಾದೇವಿ ಕಾಗದ ಪತ್ರಗಳನ್ನು ಸುಟ್ಟರು. ರೈತರು ಅಗಾಧ ಪ್ರಮಾಣದಲ್ಲಿ ಬಂಡೆದ್ದ ಪರಿಣಾಮವಾಗಿ ಬಂಡಾಯಕ್ಕೆ ಒಂದು ವಿಶಾಲ ವ್ಯಾಪ್ತಿ ದೊರೆಯಿತು.

ರೈತ ಬಂಡಾಯವಾಗಿ 1857 ರ ವಿಪ್ಲವ

ವಸಾಹತುಶಾಹಿ ಆಳ್ವಿಕೆ ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹಾಳುಗೆಡವಿತ್ತು ಮತ್ತು ಅದನ್ನು ಸಂಪೂರ್ಣವಾಗಿ ವಿದೇಶಿಯರ ಲೂಟಿ ಮತ್ತು ದರೋಡೆಗೆ ತೆರೆದಿಟ್ಟಿತು.

ಶೋಷಣೆಯ ತೀವ್ರತೆ

ಬಂಗಾಳಸೇನೆಗೆ ಸೇರಲ್ಪಡುತ್ತಿದ್ದ ಜನ 1857ರ ಬಂಡಾಯ ತೀವ್ರವಾಗಿ ನಡೆದಂತಹ ಪ್ರದೇಶಗಳಿಂದ ಬಂದವರಾಗಿರುತ್ತಿದ್ದರು. ಈ ಪ್ರದೇಶ ಅತ್ಯಂತ ಗರಿಷ್ಠ ಪ್ರಮಾಣದ ತೆರಿಗೆ ವಿಧಿಸಲ್ಪಟ್ಟ ಪ್ರದೇಶವಾಗಿತ್ತು. ಈ ಪ್ರದೇಶದಲ್ಲಿ 1822 ರಿಂದಲೂ ಸತತವಾಗಿ 'ಮಹಲ್ವಾರಿ ಕಂದಾಯ' ಪದ್ಧತಿಯಲ್ಲಿ ಭೂ ಕಂದಾಯವನ್ನು ಹೆಚ್ಚಿಸಲಾಯಿತು. ಕಾಯಂ ಜಮೀನ್ದಾರಿ ಪದ್ಧತಿಯನ್ನು ಹೊಂದಿದ್ದ ಬಂಗಾಳ ಮತ್ತು ರೈತ್ವಾರಿ ಜಮೀನ್ದಾರಿ ಪದ್ಧತಿಯನ್ನು ಹೊಂದಿದ್ದ ಮದ್ರಾಸ್ ಪ್ರಾಂತ್ಯಗಳಲ್ಲಿ ತೆರಿಗೆ ಕಡಿಮೆ ಇತ್ತು ಮತ್ತು ಅದನ್ನು ದೀರ್ಘಾವಧಿವರೆಗೆ ಬದಲಾಯಿಸುವ ಕ್ರಮವಿರಲಿಲ್ಲ. ಆದರೆ ಉತ್ತರ ಪ್ರದೇಶ, ಬಿಹಾರ ಔದ್ ಪ್ರದೇಶಗಳಲ್ಲಿ ಜಾರಿಯಲ್ಲಿದ್ದ ಮಹಲ್ವಾರಿ ಪದ್ಧತಿಯಲ್ಲಿ ತೆರಿಗೆಗಳನ್ನು ಅತ್ಯಂತ ದುಬಾರಿಯಾಗಿ ಹೆಚ್ಚಿಸಲಾಯಿತು ಮತ್ತು ಗುತ್ತಿಗೆ ಅವಧಿಯನ್ನು 20 ವರ್ಷಗಳಿಗೆ ನಿಗದಿಪಡಿಸಿದ್ದರೂ ಅದನ್ನು ಯಾವಾಗ ಬೇಕಾದರೂ ಬದಲಾಯಿಸಬಹುದಿತ್ತು. ಕಂದಾಯ ಸಲ್ಲಿಕೆ ಸಾಮೂಹಿಕ ಹೊಣೆಗಾರಿಕೆಯಾಗಿತ್ತು. ನೆರೆಹೊರೆಯ ಯಾವುದೇ ಜಮೀನ್ದಾರ ಕಂದಾಯ ಪಾವತಿಸದಿದ್ದರೆ ಸರ್ಕಾರ ಎಲ್ಲರ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. Eric Stokes ರ ಪ್ರಕಾರ ಅಲಿಘರ್ ಜಿಲ್ಲೆಯಲ್ಲಿ 1839 ಮತ್ತು 1858ರ ನಡುವೆ ಅರ್ಧಕ್ಕೂ ಹೆಚ್ಚು ಭಾಗ ಜಮೀನು ಕೈ ಬದಲಾವಣೆಗೊಂಡಿತು. ಮುಜಾಫರ್‌ಪುರದಲ್ಲಿ 1841-1861ರ ಅವಧಿಯಲ್ಲಿ 1/4 ಭಾಗ ಜಮೀನು ಹಸ್ತಾಂತರಗೊಂಡಿತು.

ಬ್ರಿಟೀಷ್ ಪೂರ್ವ ಆಳ್ವಿಕೆಗಳಲ್ಲಿ ಬ್ರಾಹ್ಮಣ ಮತ್ತು ಶೇಖ್ ಕುಟುಂಬಗಳು ಕಂದಾಯ ರಹಿತ 'ಇನಾಂತಿ' ಅಥವಾ 'ಮಾಫಿ' ಜಮೀನಿನ ಒಡೆತನವನ್ನು ಹೊಂದಿದ್ದರು. ಬಂಗಾಳ ಸೈನ್ಯಕ್ಕೆ ಸೇರಿಕೊಂಡ ಬಹುಪಾಲು ಸೈನಿಕರು ಇಂತಹ ಮಾಫಿ ಜಮೀನುಳ್ಳ ಕುಟುಂಬಗಳಿಂದ ಬಂದವರಾಗಿದ್ದರು. ಇಂತಹ ಜಮೀನುಗಳನ್ನು ಪಂಡಿತರಿಗೆ ಹಾಗೂ ಇಸ್ಲಾಂ ವಿದ್ವಾಂಸರಿಗೆ ಹಿಂದಿನ ರಾಜಮನೆತನದವರು ಗೌರವಪೂರ್ವಕವಾಗಿ ನೀಡಿದ್ದರು. ಅವರು ಈ ಜಮೀನನ್ನು ವಂಶಪಾರಂಪರ್ಯವಾಗಿ ಅನುಭವಿಸುತ್ತಾ ಬಂದಿದ್ದರು. 1833ರಲ್ಲಿ ಸರ್ಕಾರ ಈ ಮಾಫಿ ಜಮೀನ್ದಾರಿಕೆಯನ್ನು ರದ್ದುಪಡಿಸಿ ಜಮೀನನ್ನು ವಶಪಡಿಸಿಕೊಂಡಿತು. ಇದರಿಂದಾಗಿ ರೈತರು ಮತ್ತು ಜಮೀನ್ದಾರರು ಏಕಪ್ರಕಾರವಾಗಿ ಬಾಧಿಸಲ್ಪಟ್ಟರು 'ಸೈನಿಕರು ಸಮವಸ್ತ್ರದಲ್ಲಿರುವ ರೈತರು' ಎಂಬ ಲೆನಿನ್‌ರ ಹೇಳಿಕೆ ಬಂಗಾಳ ಸೈನ್ಯಕ್ಕೆ ಸಂಪೂರ್ಣವಾಗಿ ಅನ್ವಯವಾಗುತ್ತಿತ್ತು.

ತೀವ್ರಗೊಂಡ ದೋಚುವ ಪ್ರಕ್ರಿಯೆ

1854-55ರ ಅವಧಿಯಲ್ಲಿ ಬ್ರಿಟೀಷರು ಭಾರತವನ್ನು ದೋಚುವ ಪ್ರಕ್ರಿಯೆಯನ್ನು ಅತ್ಯಂತ ತೀವ್ರಗೊಳಿಸಿದರು. ದಂಗೆಯ ಮುಂಚಿನ 2 ವರ್ಷಗಳ ಅವಧಿಯಲ್ಲಿ ಒಂದು ಅಂದಾಜಿನಂತೆ ಬ್ರಿಟಿಷರು ಸುಮಾರು 5.8 ಕೋಟಿ (ಅಂದಿನ ಕೋಟಿ) ರೂಪಾಯಿಗಳನ್ನು ದೋಚಿದರೆಂಬುದು ಈ ಅವಧಿಯ ಆಮದು ರಫ್ತು ಲೆಕ್ಕಗಳಿಂದ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. 1819-1856ರ ನಡುವಿನ ಅವಧಿಯಲ್ಲಿ ಮಹಲ್ವಾರಿ ತೆರಿಗೆ ಪದ್ಧತಿಯಿದ್ದ ಪ್ರದೇಶದಲ್ಲಿ ತೆರಿಗೆಯನ್ನು ಶೇ.70 ರಷ್ಟು ಹೆಚ್ಚಿಸಲಾಯಿತು. ಬ್ರಿಟಿಷರ ನ್ಯಾಯ, ಶಿಸ್ತು ಮತ್ತು ಶಿಕ್ಷೆಯ ಪರಿಕಲ್ಪನೆಗಳು ಈ ದೇಶದ ಜನರಿಗೆ ಪರಕೀಯವಾಗಿದ್ದವು. ಕೊನೆಯಿಲ್ಲದ ವ್ಯಾಜ್ಯ, ನ್ಯಾಯಾಂಗ ವೆಚ್ಚ, ಸಾಲ ಹಾಗೂ ಸಮಯದ ಅಪವ್ಯಯಗಳನ್ನು ಭಾರತೀಯರು ದುಬಾರಿ ಮತ್ತು ಅನ್ಯಾಯಯುತವಾದದ್ದೆಂದು ಪರಿಭಾವಿಸು ವಂತಾಯಿತು. ಸಂಪ್ರದಾಯ ಬದ್ಧ ಗ್ರಾಮ ಸಮುದಾಯ ನ್ಯಾಯಾಂಗ ವ್ಯವಸ್ಥೆಗೆ ಒಗ್ಗಿಕೊಂಡಿದ್ದ ಜನರಿಗೆ ಬ್ರಿಟಿಷರ ನ್ಯಾಯವಿಧಾಯಕ ಕ್ರಮ ಅತ್ಯಂತ ವಿಚಿತ್ರವಾಗಿ ಮತ್ತು ಪರಕೀಯವಾಗಿ ಕಾಣುತ್ತಿತ್ತು.

ಔದ್ ವಶ - ದುಬಾರಿ ತೆರಿಗೆ

1856ರಲ್ಲಿ ಔದ್‌ನ್ನು ಬ್ರಿಟಿಷರು ವಶಪಡಿಸಿಕೊಂಡರು. ಇದರಿಂದ ಔದ್ ಪ್ರಾಂತ್ಯದ ತಾಲ್ಲೋಕ್‌ದಾರರು ತುಂಬಾ ದುಬಾರಿಯಾದ ಮಹಲ್ವಾರಿ ತೆರಿಗೆಯನ್ನು ತೆರಬೇಕಾದ ಪರಿಸ್ಥಿತಿಯುಂಟಾಯಿತು. ಇದರಿಂದಾಗಿ ಈ ಪ್ರಾಂತ್ಯದಲ್ಲಿ ರೈತರು ಮತ್ತು ಜಮೀನ್ದಾರರು ಅಪಾರ ಪ್ರಮಾಣದ ತೆರಿಗೆ ಹೊರೆಯಿಂದ ಬಾಧಿಸಲ್ಪಟ್ಟು ಬಂಡಾಯದ ಬಾವುಟ ಹಾರಿಸುವುದು ಅವರಿಗೆ ಅನಿವಾರ್ಯವಾಯಿತು. ಔದ್ ಗವರ್ನರ್ ಜನರಲ್ ಕ್ಯಾನಿಂಗ್ ಔದ್‌ನಲ್ಲಿ ಈ ತಾಲ್ಲೋಕ್‌ದಾರರು ಬಂಡಾಯದ ನಾಯಕರೆಂದು ಪರಿಭಾವಿಸಿ 1857 ರಲ್ಲಿ ಘೋಷಣಾ ಪತ್ರವೊಂದನ್ನು ಹೊರಡಿಸಿ ತಾಲ್ಲೋಕುದಾರರ ವಶದಲ್ಲಿದ್ದ ಎಲ್ಲಾ



ಭೂಮಿಯನ್ನೂ ಸರ್ಕಾರದ ವಶಕ್ಕೆ ತೆಗೆದುಕೊಂಡನು. ಬ್ರಿಟಿಷ್ ಸಂಸತ್ತಿನಲ್ಲಿ ಔದ್ ಪ್ರಾಂತ್ಯದಲ್ಲಿ ತಾಲ್ಲೋಕ್‌ದಾರರು ಮತ್ತು ರೈತರು ಬ್ರಿಟಿಷರ ವಿರುದ್ಧ ಬಂಡೆದ್ದಿದ್ದಾರೆಂದು ಹಲವಾರು ಬಾರಿ ಪ್ರತಿಪಾದಿಸಲಾಯಿತು.

ಆರ್. ಪಾಲ್ಮೆರ್ಡ್ 1857ರ ಬಂಡಾಯವನ್ನು ಒಂದು ಪ್ರಮುಖ ರೈತ ಬಂಡಾಯವೆಂದೇ ಗುರುತಿಸುತ್ತಾರೆ. ಅವಸಾನೋನ್ಮುಖವಾಗಿದ್ದ ಪಾಳೇಗಾರಿ ಶಕ್ತಿಗಳು ತಮ್ಮ ವಿಶೇಷ ಸೌಲಭ್ಯಗಳನ್ನು (previleges) ಮರಳಿ ಪಡೆಯಲು ಮತ್ತು ವಿದೇಶಿ ದಬ್ಬಾಳಿಕೆಯನ್ನು ಹಿಮ್ಮೆಟ್ಟಿಸುವ ಪ್ರಯತ್ನದ ಭಾಗವಾಗಿ ಈ ಬಂಡಾಯದ ಮುಂಚೂಣಿಯಲ್ಲಿ ನಿಂತು ಹೋರಾಡಿದರೆಂದು ಅಭಿಪ್ರಾಯಪಡುತ್ತಾರೆ. ದೇಶೀಯ ಪಾಳೇಗಾರಿ ಶಕ್ತಿಗಳ ಬಂಡಾಯವನ್ನು ಪ್ರಶಂಸಿಸುತ್ತಲೇ ಅದನ್ನು ಪ್ರಶ್ನಿಸುವ ಮತ್ತು ವಿಮರ್ಶಿಸುವ ಪ್ರಯತ್ನದ ಆರಂಭವನ್ನು ಪಾಲ್ಮೆರ್ಡ್ ಮಾಡುತ್ತಾರೆ.

ದೇಶೀಯ ಶೋಷಕರ ವಿರುದ್ಧವೂ ಬಂಡಾಯ

ಈ ಬಂಡಾಯದ ಸಂದರ್ಭದಲ್ಲಿ ದೇಶೀಯ ಶೋಷಕ ವರ್ಗಗಳನ್ನು ರೈತರು ಪ್ರಶ್ನಿಸುವ ಬೆಳವಣಿಗೆಯನ್ನು ನಾವು ಸ್ಪಷ್ಟವಾಗಿ ಗುರ್ತಿಸ ಬಹುದಾಗಿದೆ. ಹಳ್ಳಿಗಳ ಲೇವಾದೇವಿದಾರರ ಶೋಷಣೆ ಮತ್ತು ವಂಚನೆಗಳ ವಿರುದ್ಧವು ರೈತರು ಇದೇ ಸಂದರ್ಭದಲ್ಲಿ ಬಂಡೆದ್ದರು. ಹಲವಾರು ಪ್ರದೇಶಗಳಲ್ಲಿ ಬಂಡಾಯಗಾರರು ಲೇವಾದೇವಿ ಕಾಗದ ಪತ್ರಗಳನ್ನು ಸುಟ್ಟರು. ರೈತರು ಅಗಾಧ ಪ್ರಮಾಣದಲ್ಲಿ ಬಂಡೆದ್ದ ಪರಿಣಾಮವಾಗಿ ಬಂಡಾಯಕ್ಕೆ ಒಂದು ವಿಶಾಲ ವ್ಯಾಪ್ತಿ ದೊರೆಯಿತು.

ಮುಜಾಫರ್‌ನಗರ್‌ನಲ್ಲಿ ಜಾಟ್ ರೈತರು ಬ್ರಿಟಿಷ್ ಅಧಿಕಾರವನ್ನು ಧಿಕ್ಕರಿಸಿ ಮೇವಾತಿ ಮುಸ್ಲಿಂ ನಾಯಕತ್ವದಲ್ಲಿ ಬಂಡೆದ್ದರು. ಬಿಹಾರದಲ್ಲಿ ಜಗದೀಶ್‌ಪುರದ ಕುವ್ವರ್‌ಸಿಂಗ್ ನೇತೃತ್ವದಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಬಂಡೆದ್ದರು. ಈ ರೈತ ಬಂಡಾಯವನ್ನು ಕುರಿತು ಅನೇಕ ಬೋಜ್‌ಪುರಿ ಜನಪದ ಗೀತೆಗಳು ವ್ಯಾಪಕವಾಗಿ ಪ್ರಚಲಿತ ಇವೆ.

ಪಿ.ಸಿ. ಜೋಷಿಯವರ "Rebellion 1857- A Symposium" ಪುಸ್ತಕದ ಒಂದು ಲೇಖನದಲ್ಲಿ ತಲ್‌ಮಿಜ್ ಖಾಲ್ದನ್ ಉತ್ತಮ ಪುರಾವೆಗಳೊಂದಿಗೆ 1857ರ ಬಂಡಾಯ, ದೇಶಿಯ ಜಮೀನ್ದಾರರು ಮತ್ತು ವಿದೇಶಿ ಸಾಮ್ರಾಜ್ಯಶಾಹಿಗಳ ವಿರುದ್ಧ ರೈತರು ನಡೆಸಿದ ಯುದ್ಧವಾಗಿ ಪರಿಣಮಿಸಿತು ಎಂದು ಅಭಿಪ್ರಾಯಪಡುತ್ತಾರೆ. ಅವರ ಅಭಿಪ್ರಾಯದಂತೆ ಪ್ರಾಥಮಿಕವಾಗಿ ಇದೊಂದು ಪಾಳೇಗಾರಿಶಾಹಿ ವಿರೋಧಿ ಹೋರಾಟ. ಅನಂತರದಲ್ಲಿ ಅದನ್ನು ವಸಾಹತುಶಾಹಿ ವಿರೋಧಿ ಹೋರಾಟವಾಗಿ ಪರಿಗಣಿಸಬಹುದೆಂದು ಅಭಿಪ್ರಾಯಪಡುತ್ತಾರೆ. ಆದರೆ ಈ ಪುಸ್ತಕದ ಸಂಪಾದಕರಾದ ಪಿ.ಸಿ. ಜೋಷಿಯವರೇ ಇದನ್ನು ಸಮರ್ಥನೀಯವಲ್ಲದ ಅವಾಸ್ತವಿಕ ನಿರೂಪಣೆ ಎಂದು ನಿರಾಕರಿಸುತ್ತಾರೆ. ಇದು ಬಂಡಾಯಗಾರರ ಗುಂಪಿನಿಂದ ಜಮೀನ್ದಾರಿ ವರ್ಗವನ್ನೇ ಹೊರಗಿಟ್ಟು ಅದರ ವಸಾಹತುಶಾಹಿ ವಿರೋಧಿ ಹೋರಾಟದ ಸ್ವರೂಪವನ್ನೇ ದುರ್ಬಲಗೊಳಿಸುವ ಪ್ರಯತ್ನ ಎಂದು ಅಭಿಪ್ರಾಯಪಡುತ್ತಾರೆ.

ಇದು ಸರಿ ಇಲ್ಲ ಬುಡ್ರಲಾ...

ಕಟ್ಟೆ

ದಿ. ಶ್ರೀನಿವಾಸ

'ನಮ್ಮ ಪ್ರಧಾನ್ ಮಂತ್ರಿ ಶಾನೆ ಬೇಜಾರ್ ಮಾಡ್ಕೊಂಡವರಂತೆ ಯಾಕ್ಲಾ ಬೋರ?' ಎಂದು ಕೇಳಿದ ತಿಮ್ಮ ಅಂದಿನ ಅರಳೀಕಟ್ಟೆಯ ಚರ್ಚೆ ಪ್ರಾರಂಭಿಸುತ್ತಾ,'ಏ ಅವ್ರೇನೋ ಬುಸ್ ಜತೆ ಒಪ್ಪಂದ ಮಾಡ್ಕೊಂಡು ಬಂದವರಂತೆ. ಅದಕ್ಕೆ ಕೆಲವ್ರು ಒಪ್ಪಿಲ್ಲವಂತೆ' ಎಂದ ಬೋರ.

'ಬುಸ್ ಅಂದ್ರೆ ಯಾರ್‍ಲಾ?'ಎಂದು ಕೇಳಿದ ಸಿದ್ದ. 'ಏ ಬುಸ್ ಅಂದ್ರೆ ಅಮೇರಿಕದೋನು. ಎಲ್ಲಾರ್ ಮೇಲೂ ಬುಸ್ ಬುಸ್ ಅಂತಿರ್‍ತಾನೆ' ಎಂದ ಬೋರ.

'ಯಾಕಂಗೆ ಅವ್ನು?' -ತಿಮ್ಮ ಕೇಳಿದ. 'ದುರಂಕಾರ ಕಣ್ಲಾ, ದುರಂಕಾರ. ತನ್ನ ತವನೇ ದುಡ್ಡೈತೆ. ತಾನೇ ದೊಡ್ಡಪ್ಪ ಅಂತ ಬಲೇ ಸೊಕ್ಕು ಆ ಬುಸ್‌ಗೆ' ಎಂದ ಬೋರ.

'ದುಡ್ಡಿದ್ರೆ ಅವ್ನ ತಕ ಇರುತ್ತೆ. ಬೇರೆಯವರ ಮೇಲೆ ಯಾಕೆ ಅಂಕಾರ ತೋರಿಸ್ಬೇಕು? ಕೇಳಿದ ಸಿದ್ದ.

'ಯಾಕೆಂದ್ರೆ ಅವ್ನು ತಾನೇ ಪೋಲೀಸು ಬಾಕಿಯೋರೆಲ್ಲ ತಾನು ಏಳ್ದಂಗೆ ಕೇಳಬೇಕು ಅಂತ ತಿಳ್ಕೊಂಡವನೆ ಆ ಬುಸ್ಸು' ಎಂದ ಬೋರ.

'ಅದ್ಕಾಗೆ ತಪ್ಪೇನೈತೆ? ಪೋಲೀಸು ಗೀಲೀಸು ಅಂತಿದ್ರೆ ತಾನೆ ಕಳ್ರು ಕಾಕ್ರಿಗೆ ಭಯ ಇರೋದು? ಮುಗ್ಧವಾಗಿ ಕೇಳಿದ ಸಿದ್ದ.

'ಲೇ ಅಂಗಲ್ಲ ಕಣ್ಲಾ ಸಿದ್ದ ಆ ಬುಸ್ಸು ಪೋಲೀಸೋನು ಅಂತ ತಿಳಿಕೊಂಡವನೇ ಅವ್ನೇನು ಪೋಲಿಸಲ್ಲ. ಅವನದ್ದೂ ಒಂದು ದೇಸ ನಮ್ದೂ ಒಂದು ದೇಸ. ಅವನದ್ದು ಹೆಚ್ಚುಗಾರಿಕೆ ಏನೂ ಇಲ್ಲ' ಎಂದ ಬೋರ. 'ಆ ಅಮೇರಿಕಾದೋರು ಪೋಲೀಸೋರ್ ಥರ ಆಡಿದ್ರೂ ಬರೀ ಕಳ್ರು ಜತೆ ಶಾಮೀಲು ಆಗುತರಲ್ಲ ಔದೇನ್ಲ ಬೋರ?' ಎಂದು ಕೇಳಿದ ತಿಮ್ಮ.

'ಕರೆಕ್ಟಾಗೇಳ್ದೆ ಕಣ್ಲಾ ತಿಮ್ಮ ಕಳ್ರು ಕಾಕ್ರು ರೌಡಿಗಳ ಜತೆ ಭಾಳ ದೋಸ್ತಿ ಅವ್ನಿಗೆ. ಜೊತೆಗೆ ಸಬ್ಬಸ್ತ ದೇಸಗಳನ್ನು ಬೆದರಿಸೋದು' ಎಂದ ಬೋರ.'

'ನಮ್ಮ ಪ್ರಧಾನಿ ಒಳ್ಳೆ ಸಭ್ಯಸ್ತ, ಓಗಿ ಓಗಿ ಆ ಅಮೇರಿಕಾದ ಬುಸ್ ಸವಾಸಕ್ಕೆ ಯಾಕೆ ಓದ್ರು? ಎಂದ ಸಿದ್ದ.

'ಲೇ ಅಂಗಲ್ಲ ಕಣ್ಲಾ ಸಿದ್ದ. ನಮ್ಮ ಮನ್ ಮೋಹನ್ ಸಿಂಗು ದುಡ್ಡು ಕಾಸು ಮುಟ್ಟಾಕಿಲ್ಲ. ಕೆಟ್ ಮಾತು ಆಡಾಕಿಲ್ಲ ಆತರ ಸಭ್ಯಸ್ತ ಏನೋ ಸರಿ. ಆದ್ರೆ ಅವ್ರಿಗೆ ಅಮೇರಿಕಾ ಅಂದ್ರೆ ಭಾಳ ಭಯಭಕ್ತಿ' ಎಂದ ಬೋರ.

'ಔದೇನ್ಲ?' ಎಂದ ತಿಮ್ಮ 'ಊ... ಕಣ್ಲಾ ಹಿಂದೆ ಈ ಮನಮೋಹನಸಿಂಗು ಅಣಕಾಸು ಮಂತ್ರಿ ಆಗಿದ್ಲಿಲ್ವೇ? ಆವಾಗ ಅಮೇರಿಕಾ ದೋರ್ ಜತೆ ಒಪ್ಪಂದ ಮಾಡ್ಕೊಂಡು ಬಂದೌವ್ರೆ. ಅದೇ ಖರ್ಮ ನಾವು ಈಗ ಅನುಭವಿಸ್ತಿರೋದು' ಎಂದ ಬೋರ.

'ಅದೇನು ಸರ್ಕ್ಯಾಗೆಳ್ಲಾ' ಎಂದ ಸಿದ್ದ. 'ಅದೇ ಕಣ್ಲಾ ಎಲ್ಲಾ ನಮ್ ದೇಸಕ್ಕೆ ಬರ್ಲಿ ಯಾಪಾರ ಮಾಡ್ಕೊಂಡು ದುಡ್ಡು ಬಾಚ್ಕೊಂಡು ಓಗ್ಲಿ ಅಂತ ಅಂಗ್ಲಾಪ್ಕೊಂಡು ಬೇಡ್ಕೊಳ್ಳೋದೈತಲ್ಲ, ಅದೇ ಉದಾರೀಕರಣ ಅಂತ. ಅಮೇರಿಕಾದೋರ್‍ನ ಉದ್ದಾರ ಮಾಡೋದು' ಎಂದ ಬೋರ.

'ಏ ಅಂಥೋರ್‌ತಕ ಮತ್ಯಾಕೆ ಓಗಿ ಈ ನಮ್ಮ ಸಿಂಗು ಹಣು ಒಪ್ಪಂದ ಅಂತ ಏನೋ ಮಾಡ್ಕೊಂಡು ಬಂದೌವ್ರಂತೆ?' ತಿಮ್ಮ ಕೇಳಿದ.

'ಹಣು ಒಪ್ಪಂದ ಅಂದ್ರೆ ಏನ್ಲಾ?' ಕೇಳಿದ ಸಿದ್ದ. 'ಏ,ಬುಡ್ಲಾ ಕಾಂಗ್ರೆಸ್‌ನೋರ್ಗೇ ಸರ್‍ಯಾಗಿ ಅರ್ಥ ಆಗಿಲ್ಲ. ಇನ್ನು ನಿನಗೆ ಅಣು ಒಪ್ಪಂದ ಎಂಗೆ ಅರ್ಥ ಮಾಡ್ಸದು?' ಎಂದ ಬೋರ.

'ಈಗೇನಾಯ್ತದೇ?' ತಿಮ್ಮ ಕೇಳಿದ.

'ಬ್ರಿಟಿಷೋರು ಯಾಪಾರಕ್ಕೆ ಅಂತ ಬಂದು ನಮ್ಮ ದೇಸಾನೇ ಆಳಿ ನಮ್ಮ ಸ್ವತಂತ್ರ್ಯ ಕಿತ್ಕೊಳ್ಳಿಲ್ವೆ? ಅಂಗೇ ಈ ಬುಸ್ಸನೂ, ಅದ್ರೆ ಈಗೇನಪ ಯತ್ವಾಸ ಅಂದ್ರೆ ಬ್ರಿಟಿಷೋರು ಇಲ್ಲಿಗೇ ಬಂದು ರಾಜ್ಯ ಆಳಿದ್ರು. ಆದ್ರೆ ಈಗ ಅಮೇರಿಕದೋರು ಅಲ್ಲೆ ಕೂತ್ಕಂಡು ನಮ್ಮದೇಶ ಆಳ್ತಾರೆ. ನಮ್ಮ ಸ್ವತಂತ್ರ ಹೆಚ್ಚು ಕಡಿ ಕಿತ್ಕಂಡಗೆಯ ಎಂದು ಬೋರ.

'ಏ ಇದು ಸರಿ ಇಲ್ಲ ಕಣ್ ಬುಡ್ರಲಾ. ನಮ್ ಸ್ವತಂತ್ರ ಯಾವ್ ನನ್ ಮಗ್ನೂ ಕಿತ್ಕಳ ಕಾಗಕಿಲ್ಲ' ನಾವು ಬುಡಕಿಲ್ಲ' ಎಂದು ಸಿದ್ದ ತೀರ್ಮಾನಿಸಿ ಚರ್ಚೆಗೆ ಮಂಗಳ ಹಾಡಿದ.

ಅದ್ದೂರಿ ಹುಟ್ಟುಹಬ್ಬದ ಕೆಟ್ಟ ಸಂಸ್ಕೃತಿ

ಮಹಾತ್ಮರು ಹಾಗೂ ಹುತಾತ್ಮರ ಹುಟ್ಟಹಬ್ಬವನ್ನು ಸಾರ್ವಜನಿಕವಾಗಿ ಆಚರಿಸಲಾಗುತ್ತಿತ್ತು. ಆದರೀಗ....

ಹುಟ್ಟು ಹಬ್ಬದ ಹೆಸರಿನಲ್ಲಿ ಅಬ್ಬರದ ಪ್ರಚಾರ ಗಿಟ್ಟಿಸುವ, ಆಡಂಬರದ ಪ್ರದರ್ಶನ ನೀಡುವ ಸಮಾರಂಭಗಳು ಹೆಚ್ಚುತ್ತಿವೆ. ಆಳುವ ರಾಜಕಾರಣಿಗಳಲ್ಲಿ ಇದು ಹೆಚ್ಚುತ್ತಿದೆ. ಅವರ ಹಿಂಬಾಲಕರೂ ಆತಂಕಕಾರಿಯಾಗುವಂತೆ ಇದನ್ನು ಮುಂದುವರಿಸುತ್ತಿದ್ದಾರೆ. ರಾಜ್ಯದ 5.5 ಕೋಟಿ ಜನರಲ್ಲಿ 3 ಕೋಟಿಗೂ ಹೆಚ್ಚು ಜನರಿಗೆ ತಮ್ಮ ಹುಟ್ಟಿದ ದಿನಾಂಕ ಯಾವುದು ಎಂದು ಗೊತ್ತಿಲ್ಲದ ಸಂದರ್ಭದಲ್ಲಿ ಹುಟ್ಟು ಹಬ್ಬದ ಹೆಸರಿನಲ್ಲಿ ದುಂದುವೆಚ್ಚ ಮಾಡುವುದು ನಾಚಿಕೆಗೇಡು.

ಇತ್ತೀಚೆಗೆ ಜೆಡಿ(ಎಸ್) ಮುಖಂಡ, ಮಾಜಿ ಸಚಿವ ಜಮೀರ್ ಅಹ್ಮದ್‌ಖಾನ್ ತನ್ನ ಹುಟ್ಟುಹಬ್ಬ ಆಚರಿಸಿಕೊಂಡರು. ಸ್ವತ: ಮುಖ್ಯಮಂತ್ರಿಯವರೇ ಹಾಜರಾಗಿದ್ದರು. ಅಲ್ಲಿ ಅವರು 'ಕಟ್' ಮಾಡಿದ ಕೇಕ್‌ನ ಒಟ್ಟು ತೂಕ 1500 ಕೆ.ಜಿ. ರೂ.100ಕ್ಕೆ ಒಂದು ಕೆ.ಜಿ. ಎಂದಾದರೂ 150,000 ರೂ. ಬರೀ ಕೇಕ್‌ಗಾಯ್ತು. 500ಕ್ಕೂ ಹೆಚ್ಚು ಬೃಹತ್ ಕಟೌಟ್‌ಗಳು ಚಾಮರಾಜಪೇಟೆ ಕ್ಷೇತ್ರದಾದ್ಯಂತ ಕಂಗೊಳಿಸಿದವು. ಒಂದು ಕಟೌಟ್‌ನ ಬೆಲೆ 1000 ರೂ. ಎಂದರೂ 5 ಲಕ್ಷ ರೂ. ಕಟೌಟ್‌ಗೆ ಖರ್ಚಾಗಿತ್ತು.

ತನ್ನ ಹುಟ್ಟುಹಬ್ಬಕ್ಕೆ ಲಕ್ಷಗಟ್ಟಲೆ ಖರ್ಚು ಮಾಡುವ ಜಮೀರ್‌ಖಾನ್‌ಗೆ ಅವರ ಕ್ಷೇತ್ರದಲ್ಲಿ ಸ್ಲಮ್ಮುಗಳಲ್ಲಿ ವಾಸ ಮಾಡುವ ಬಡಜನರಿಗೆ ಹಕ್ಕು ಪತ್ರ ಕೊಡಿಸಲು ಇನ್ನೂ ಸಾಧ್ಯವಾಗಿಲ್ಲ. ಈ ಹಕ್ಕುಪತ್ರ ಕೊಡಿಸುವುದಾಗಿಯೇ ಹೇಳಿ ಗೆದ್ದಿದ್ದರು.


ಇದೇ ಸಮಯದಲ್ಲಿ ಹುಟ್ಟಿದ ಹಬ್ಬ ಆಚರಿಸಿಕೊಂಡ ಇನ್ನೊಬ್ಬರು ಕಾಂಗ್ರೆಸ್ ಶಾಸಕ ಹಾಗೂ ಮಾಜಿ ಸಚಿವ ವಿ.ಸೋಮಣ್ಣ, ಒಂದು ಸಾವಿರಕ್ಕೂ ಹೆಚ್ಚು ಕಟೌಟ್‌ಗಳು ಬಿನ್ನಿಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹಾಗೂ ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ 'ಕಂಗೊಳಿಸಿದವು'.

ಕಾಂಗ್ರೆಸ್ ಸಂಸ್ಕೃತಿಯು ಗೀಳು ಸಿದ್ದರಾಮಯ್ಯನವರನ್ನು ಬಿಡಲಿಲ್ಲ. ತನ್ನ 60ನೇ ಹುಟ್ಟುಹಬ್ಬದ ಹೆಸರಿನಲ್ಲಿ ಬೆಂಗಳೂರಿನ ಊರು - ಕೇರಿಗಳಿಂದ ಹಿಡಿದು ವಿಧಾನ ಸೌಧದವರೆಗೂ



ಕಟೌಟ್‌ಗಳು ಮೆರೆದವು.

3 ವರ್ಷದ ಹಿಂದೆ 'ಶಿಸ್ತುಬದ್ಧ' ಭಾರತೀಯ ಜನತಾ ಪಕ್ಷದ ಯಡಿಯೂರಪ್ಪನವರು ಹುಟ್ಟುಹಬ್ಬ ಆಚರಿಸಿಕೊಂಡ ರೀತಿ ಇನ್ನೂ ಸೊಗಸಾಗಿದೆ. ಅಧಿಕಾರಕ್ಕೆ ಬರುವ ಮೊದಲೇ ಲಕ್ಷಗಟ್ಟಲೆ ಬಾಡಿಗೆ ತೆರಬೇಕಾದ ಅರಮನೆ ಮೈದಾನದಲ್ಲಿ ಅವರ ಹುಟ್ಟುಹಬ್ಬದ ಸಮಾರಂಭ ನಡೆಯಿತು. ಸ್ವತ: ಯಡಿಯೂರಪ್ಪನವರೇ ಸಿದ್ಧತೆಗಳ ಮೇಲುಸ್ತುವಾರಿಗೆ ಹೋಗಿದ್ದರು. ಜನ್ಮದಿನದ ಪ್ರಚಾರ ಸಾಲದೆಂದು ಅದರ ವ'ುನ್ನಾದಿನ ವ'ೂ ಉಸ್ತುವಾರಿಯನ್ನು ಇವರೇ ನಡೆಸಿ ಪತ್ರಿಕೆಗಳಿಗೆ ಪೋಸುಕೊಟ್ಟರು.



2004ರ ಲೋಕಸಭಾ ಚುನಾವಣೆಗೆ ಮೊದಲು ಅಂದಿನ ಪ್ರಧಾನ ಮಂತ್ರಿ ಅಟಲಬಿಹಾರಿ ವಾಜಪೇಯಿ ಮತ್ತು ಅವರ ಬಿಜೆಪಿ ಬಳಗದವರು ಹುಟ್ಟು ಹಬ್ಬವನ್ನು ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳಲು ಮುಂದಾದರು. ಅದರಂತೆ, ಉಚಿತ ಸೀರೆ ನೀಡುವುದಾಗಿ ಘೋಷಿಸಿದರು. ಅಂದು ನಡೆದ ಕಾಲ್ತುಳಿತಕ್ಕೆ 25ಕ್ಕೂ ಹೆಚ್ಚು ಬಡ ಮಹಿಳೆಯರು ಸಾವನ್ನಪ್ಪಿದರು.

ಅಂದರೆ ಬಿಜೆಪಿ, ಕಾಂಗ್ರೆಸ್, ಜೆಡಿ(ಎಸ್) ಎಲ್ಲಾ ಮುಖಂಡರ ಪಾಡೂ ಹೀಗೆನೇ! ಈ ಇಮೇಜ್ ಬೆಳೆಸಿಕೊಳ್ಳಲು ರಾಜಕಾರಣಿಗಳ ಹುಟ್ಟುಹಬ್ಬದ ಜಾಹಿರಾತಿನಿಂದಲೇ ಕೆಲವು ಪತ್ರಿಕೆಗಳು ಜೀವಂತವಾಗಿ ಉಳಿದಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಜಾಹೀರಾತಿನ ಮೂಲಕ ವಸ್ತುಗಳನ್ನು ಮಾರಾಟ ಮಾಡುವಂತೆ, ಆಳುವ ರಾಜಕಾರಣಿಗಳು ತಮ್ಮನ್ನು ಹುಟ್ಟುಹಬ್ಬದ ಮೂಲಕ ಆಚರಣೆಯ ಮೂಲಕ ರಾಜಕಾರಣದ ಮಾರುಕಟ್ಟೆಗೆ ಮಾರಿಕೊಳ್ಳುತ್ತಿದ್ದಾರೆ ಎಂದೇ ಹೇಳಬೇಕು.

ಇನ್ನೊಂದು ಮುಖ : ದೇಶದ ರಾಜಕಾರಣದಲ್ಲಿ, ಜನರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡುವುದರಲ್ಲಿ ಕಮ್ಯೂನಿಸ್ಟರು ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದಾರೆ. ಕಮ್ಯುನಿಸ್ಟ್ ಚಳುವಳಿಯಲ್ಲಿ ಇಂತಹ ಹುಟ್ಟುಹಬ್ಬದ ಆಚರಣೆಗೆ ಬೆಂಬಲ ಪ್ರೋತ್ಸಾಹವಿಲ್ಲ. ಒಂದುವೇಳೆ ಆಚರಿಸಿದರೂ ಆಡಂಬರವಿಲ್ಲದೆ ಅರ್ಥ ಪೂರ್ಣವಾಗಿರುತ್ತದೆ.

ಒಮ್ಮೆ ಕಾಮ್ರೇಡ್ ಸೂರ್ಯ ನಾರಾಯಣರಾವ್ ಅವರ ಕುಟುಂಬದವರು ಸೂರಿಯವರನ್ನು ಹುಟ್ಟುಹಬ್ಬದ ನೆಪದಲ್ಲಿ ಬೆಂಗಳೂರಿನ ಹೋಟೆಲೊಂದಕ್ಕೆ ಕರೆದುಕೊಂಡು ಹೋಗಿದ್ದರಂತೆ. ಎಲ್ಲರಿಗೂ ಸೇರಿ ಸಾಧಾರಣ 3000 ರೂ. ಬಿಲ್ ಆಗಿತ್ತು. ಅಷ್ಟು 'ದೊಡ್ಡಮೊತ್ತ'ದ ಬಿಲ್ಲನ್ನು ನೋಡಿ, ಸೂರಿಯವರು ಕೆಂಡಾ ಮಂಡಲವಾಗಿ ರೇಗಾಡಿದರಂತೆ. ಹೋಟೆಲಿನವರ ಮೇಲೆ ಮಾತ್ರವಲ್ಲ, ಮನೆಯವರ ಮೇಲೆ ಕೂಡಾ. 'ನಮ್ಮ ಪಕ್ಷದಲ್ಲಿ ಒಬ್ಬ ಪೂರ್ಣಾವಧಿ ಕಾರ್ಯಕರ್ತನ ಮೂರು ತಿಂಗಳ ಅಲೋವೆನ್ಸ್ ಆಗುತ್ತದೆ' ಎಂದು ಗುಡುಗಿದರಂತೆ. ಹೋಟೆಲಿನವರನ್ನು ಕರೆದು ಇಷ್ಟೊಂದು ಬಿಲ್ ಯಾಕೆ ಮಾಡಿದ್ದೀಯಾ? ಕೆಲಸಗಾರರಿಗೆ ಎಷ್ಟು ಸಂಬಳ ಕೊಡುತ್ತೀಯಾ?' ಎಂದು ಪ್ರಶ್ನಿಸಿದರಂತೆ.

ಇತ್ತೀಚೆಗೆ ಜ್ಯೋತಿಬಸುರವರ 94ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ವಾಸ ಮಾಡುವ ಮನೆಯ ಪಕ್ಕದ ಶಾಲೆಯ ಮಕ್ಕಳು ಬಂದು ಹೂ ಗುಚ್ಛವನ್ನು ನೀಡಿದರು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತು ಮಾರ್ಮಿಕವಾಗಿತ್ತು. "ನಾವು ಕಮ್ಯೂನಿಸ್ಟರು. ಹುಟ್ಟುಹಬ್ಬ ಆಚರಿಸಿಕೊಳ್ಳುವ ಸಂಸ್ಕೃತಿ ನಮ್ಮದಲ್ಲ. ಆದರೆ ಚಿಕ್ಕಮಕ್ಕಳು, ಗೆಳೆಯರು ಬಂದು ಹೂ ನೀಡುವಾಗ ಬೇಡವೆನ್ನಲಾಗಲಿಲ್ಲ"

ತಮ್ಮ ಬೆಂಬಲಿಗರ ಒತ್ತಾಯಕ್ಕೆ ಮಣಿದು ಕೆಲವು ಸಾಹಿತಿಗಳ, ಹೋರಾಟಗಾರರ ಪ್ರಗತಿಪರ ಚಿಂತಕರ ಹುಟ್ಟುಹಬ್ಬದ ಸಮಾರಂಭಗಳು ನಡೆದಿವೆ. ಅಲ್ಲಿ ಆಡಂಬರಕ್ಕೆ ಆಸ್ಪದವಿರಲಿಲ್ಲ. ಬದಲಾಗಿ ಸಂದರ್ಭವನ್ನು ಬಳಸಿಕೊಂಡು ವೈಚಾರಿಕತೆಯ ಸಂದೇಶ ಸಾರುವುದಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿತ್ತು.


ಜನಶಕ್ತಿ ಪತ್ರಿಕೆಯ ಸಂಸ್ಥಾಪಕ ಸಂಪಾದಕರಾಗಿದ್ದ ಸಾಹಿತಿ ನಿರಂಜನರವರು ದಿನಕರ ದೇಸಾಯಿಯವರ 60ನೇ ಹುಟ್ಟುಹಬ್ಬದ ಬಗ್ಗೆ ತಮ್ಮ 'ದಿನಚರಿ' ಪುಸ್ತಕದಲ್ಲಿ ಬರೆದದ್ದು ಹೀಗೆ.

"ಅಂದ ಚಂದವಿಲ್ಲದ, ರೈತ ಸಭೆಯ ನೋಟೀಸಿನಂತಹ, ಆಮಂತ್ರಣ ಪತ್ರಿಕೆ, 60ನೇ ಹುಟ್ಟುಹಬ್ಬದ ಸಭೆಗೆ, ಈ ಸರಳತೆಯೂ ಒಂದು ಗೌರವ. ಸ್ವತಃ ದಿನಕರರು ಸಭೆಯಲ್ಲಿರಲಿಲ್ಲ. ಊರಿನಲ್ಲಿಯೇ ಇರಲಿಲ್ಲ. ವ್ಯಕ್ತಿತ್ವ ಥಳಥಳಿಸುವುದು ಇಂಥ ಘಟನೆಯಲ್ಲೇ. 'ದಿನಕರ ಒಬ್ಬನೇ' ಎಂಬ ಮಾತು ಮಾರ್ಮೊಳಗುವುದೂ ಇಂತಹ ವರ್ತನೆಯಿಂದಲೇ".

ತನ್ನ ಹುಟ್ಟುಹಬ್ಬದ ಆಚರಣೆಯ ಸಮಾರಂಭದ ಸಿದ್ಧತೆಗಳ ಮೇಲ್ವಿಚಾರಣೆಗೆ ಅರಮನೆ ಮೈದಾನಕ್ಕೆ ತೆರಳಿದ ಬಿಜೆಪಿ ಮುಖಂಡ ಯಡಿಯೂರಪ್ಪನವರೆಲ್ಲಿ? ದಿನಕರ ದೇಸಾಯಿಯವರೆಲ್ಲಿ! ಯಾವ ಆದರ್ಶಕ್ಕೆ ಒತ್ತು ನೀಡಬೇಕು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ.

ಭಗತ್‌ಸಿಂಗ್, ಗಾಂಧಿ, ಮೊದಲಾದವರ ಹುಟ್ಟುಹಬ್ಬವನ್ನು ನಿಧನದ ನಂತರ ಆಚರಿಸುವುದರ ಮೂಲಕ ಅವರ ಧ್ಯೇಯ, ಗುರಿಯನ್ನು ಇಂದಿನ ಜನಕ್ಕೆ ತಲುಪಿಸಲು ಸಾಧ್ಯವಾಗುತ್ತದೆ. ಮೊನ್ನೆ ಆಗಸ್ಟ್ 24 ರಂದು ನಡೆದ ಕಾಂ. ಸೂರಿಯವರ ಜನ್ಮದಿನಾಚರಣೆ ಇಂತಹ ಒಂದು ಅರ್ಥಪೂರ್ಣ ಕಾರ್ಯಕ್ರಮ.


■ ಬಾಲಕೃಷ್ಣ ಶೆಟ್ಟಿ



ಎಂಡೆವರ್ ಗಗನನೌಕೆ

ಅಮೇರಿಕಾ ಕಳೆದ ಆಗಸ್ಟ್ 8ರಂದು ಕೆನಡಿ ಗಗನಯಾನ ಉಡಾವಣಾ ಕೇಂದ್ರದಿಂದ ಉಡಾವಣೆ ಮಾಡಿದ್ದ ಎಂಡೆವರ್ ಗಗನನೌಕೆಯು ಆಗಸ್ಟ್ 22ರಂದು ವಾಪಸು ಸುರಕ್ಷಿತವಾಗಿ ಭೂಮಿಗೆ ಬಂದಿಳಿದಿದೆ. ಇದು ಎಂಡೆವರ್ ಗಗನನೌಕೆಯ ಎರಡನೆ ಯಾನವಾಗಿದ್ದು ಈ ಮುಂಚೆ 2002 ರಲ್ಲಿ ಉಡಾಯಿಸಿದ್ದೇ ಕೊನೆಯದಾಗಿತ್ತು. ನಂತರ ಕೊಲಂಬಿಯಾ ಗಗನನೌಕೆಯು ಅಪಘಾತಕ್ಕೀಡಾಗಿ ಭಾರತದ ಕಲ್ಪನಾ ಚಾವ್ಲಾ ಸೇರಿದಂತೆ ಏಳು ಮಂದಿ ಗಗನಯಾನಿಗಳು ದುರ್ಮರಣ ಹೊಂದಿದ್ದರಿಂದ ಇದನ್ನು ಉಡಾಯಿಸಿರಲಿಲ್ಲ. ಪ್ರಸ್ತುತ ವರ್ಷದಲ್ಲಿ ಇನ್ನೂ ಎರಡು ಗಗನನೌಕೆಗಳನ್ನು ಉಡಾಯಿಸಲು ಅಮೇರಿಕಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ಯೋಜಿಸಿದೆ.

ಮೊದಲಿಗೆ 11ದಿನಗಳ ಕಾಲ ತಂಗಲು ಉದ್ದೇಶಿಸಿದ್ದು ನಂತರದಲ್ಲಿ 14ದಿನಗಳ ಕಾಲ ಅಂತರಾಷ್ಟ್ರೀಯ ವ್ಯೋಮ ನಿಲ್ದಾಣದಲ್ಲಿಯೇ ಉಳಿಯಬೇಕಾಯಿತು. ಎಂಡೆವರ್ ಗಗನನೌಕೆಯು 2ಟನ್ ತೂಕದ ಸಾಮಗ್ರಿಗಳನ್ನು ಹೊತ್ತು ಕೊಂಡು ಹೋಗಿತ್ತು. ಈ



ಗಗನನೌಕೆಯಲ್ಲಿ ಏಳು ಮಂದಿ ಗಗನಯಾನಿಗಳಿದ್ದರು. ಇದರಲ್ಲಿ ಬಾರ್ಬರಾ ಮೋರ್ಗನ್ ಎಂಬ ಶಿಕ್ಷಕರೊಬ್ಬರು ಗಗನಯಾನಿಯಾಗಿದ್ದದ್ದು ಈ ಬಾರಿಯ ವಿಶೇಷ. ಎಲ್ಲ ಗಗನಯಾನಿಗಳು ಆರೋಗ್ಯದಿಂದಿದ್ದರೂ, ತೂಕ-ರಹಿತ ಆಗಸದಲ್ಲಿ, ಗುರುತ್ವಾಕರ್ಷಣ ಶಕ್ತಿಯಿಂದ ಹೊರತಾದ ವಾತಾವರಣದಲ್ಲಿದ್ದರಿಂದ ಮತ್ತೆ ಭೂಮಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಅವರಿಗೆ ಇನ್ನಷ್ಟು ದಿನ ಬೇಕಾಗುತ್ತದೆ. ಭೂಮಿಯು ಸುತ್ತುವ ದಿಕ್ಕಿಗನುಗುಣವಾಗಿ ಅಂತರಾಷ್ಟ್ರೀಯ ವ್ಯೋಮ ನಿಲ್ದಾಣದ ದಿಕ್ಕು ಮತ್ತು ಸ್ಥಾನವನ್ನು ಸೂಚಿಸುವ ಉಪಕರಣವನ್ನು ಗೈರೋಸ್ಕೋಪ್ ಎಂದು ಕರೆಯಲಾಗುತ್ತದೆ. ಇದನ್ನು ದುರಸ್ತಿ ಮಾಡುವ ಸಲುವಾಗಿ ಹಾಗೂ ಗಗನ ನಿಲ್ದಾಣದ ದೊಡ್ಡ ತೊಲೆಯನ್ನು ಸರಿಪಡಿಸಲು ಎಂಡೆವರ್ ಗಗನನೌಕೆಯನ್ನು ಕಳುಹಿಸಲಾಗಿತ್ತು. ಉಡಾವಣಾ ಸಮಯದಲ್ಲಿ ಎಂಡೆವರ್ ಗಗನನೌಕೆಯ ಉಷ್ಣತಾ ಕವಚದಲ್ಲಿ ಮೂರುವರೆ ಇಂಚು ಉದ್ದದ ಬಿರುಕು ಕಾಣಿಸಿಕೊಂಡು ವಿಜ್ಞಾನಿಗಳಲ್ಲಿ ಆತಂಕ ಮೂಡಿತ್ತು. ಆದರೆ ಈ ಬಿರುಕು ಗಗನಯಾನಿಗಳಿಗೆ ಮತ್ತು ಗಗನನೌಕೆಗೆ ಯಾವುದೇ ತೊಂದರೆಯುಂಟು ಮಾಡದು ಎಂದು ಹಲವು ಪರೀಕ್ಷೆ ಮತ್ತು ವಿಶ್ಲೇಷಣೆಗಳ ಮೂಲಕ ಕಂಡುಕೊಳ್ಳಲಾಯಿತು.

ರೂ. 4,00,000 ಕೋಟಿ ವೆಚ್ಚದ ಅಂತರಾಷ್ಟ್ರೀಯ ವ್ಯೋಮ ನಿಲ್ದಾಣವನ್ನು 2010ನೇ ವರ್ಷದ ವೇಳೆಗೆ ಪೂರ್ಣಗೊಳಿಸಲು ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಲಾಗುತ್ತಿದೆ. ಮುಂದಿನ ಗಗನ



ಯಾನವನ್ನು ಬರುವ ಅಕ್ಟೋಬರ್ 23ರಂದು ಆರಂಭಿಸಲು ನಾಸಾ ಯೋಜಿಸಿದೆ. ಇದರಲ್ಲಿ ಜಪಾನ್ ತಯಾರು ಮಾಡಿರುವ ಬ್ಯಾಟರಿಗಳನ್ನು ಹೊತ್ತೊಯ್ಯಲಾಗುವುದು. ನಿರ್ಮಾಣ ಕಾರ್ಯವನ್ನು ನಿಗದಿತ ವೇಳೆಯೊಳಗೆ ಪೂರ್ಣಗೊಳಿಸಲು ಇನ್ನೂ ಕನಿಷ್ಟ 11 ಗಗನನೌಕೆಗಳನ್ನು ಕಳುಹಿಸಬೇಕಾಗುತ್ತದೆ.

ಕೋಲಾರದ ಚಿನ್ನದ ಗಣಿ : ಹೊಸ ಅಧ್ಯಾಯ ಆರಂಭವಾಗುವುದೇ ?

ಗಣಿಗಾರಿಕೆ ರಾಜಕೀಯದ ಧೂಳು ಇತ್ತ ಕರ್ನಾಟಕವನ್ನು ಅತ್ತ ಆಂಧ್ರಪ್ರದೇಶವನ್ನೂ ಮೆತ್ತಿಕೊಂಡಿದೆ. ಈ ರಾಜಕೀಯ ಚದುರಂಗದಾಟದ ನಡುವೆ ಆಳುವ ಸರದಾರರು ಒಂದು ಬಹುಮುಖ್ಯ ಗಣಿಗಾರಿಕೆಯನ್ನು ಮರೆತೇ ಹೋದಂತಿದೆ.

ಸುಮಾರು ಒಂದು ಕಾಲು ಶತಮಾನಕ್ಕಿಂತ ಹೆಚ್ಚು ಕಾಲ (ಬರೋಬ್ಬರಿ 134 ವರ್ಷ) ಭೂಮಿಯ ಗರ್ಭದಿಂದ ಚಿನ್ನವನ್ನು ಮೊಗೆ ಮೊಗೆದುಕೊಟ್ಟ ಕೋಲಾರ ಚಿನ್ನದ ಗಣಿ (ಕೆ.ಜಿ.ಎಫ್) ಜನಮಾನಸದಿಂದಲೂ ದೂರ ಸರಿದಂತಿದೆ. ಕರ್ನಾಟಕಕ್ಕೆ 'ಚಿನ್ನದ ಬೀಡು' ಎಂಬ ವಿಶೇಷ ಅಭಿದಾನ ಕೊಡಿಸಿದ ಕೀರ್ತಿ ಕೋಲಾರ ಚಿನ್ನದ ಗಣಿಯದ್ದು.

ದಯನೀಯ ಬದುಕು

ಆದರೆ ಜಗದಗಲ ನೀರೆಯರ ಮೆಚ್ಚುವ ಆಭರಣಗಳಿಗೆ ಪುಷ್ಟಿ ನೀಡುವ ಬಂಗಾರದ ಅದಿರನ್ನು ತೆಗೆಯುವ ಕಾರ್ಯ ಇಲ್ಲಿ ನಿಂತುಹೋಗಿ ಆರೇಳು ವರ್ಷಗಳೇ ಕಳೆದುಹೋಗಿವೆ. ಸುಮಾರು 3000ಕ್ಕೂ ಹೆಚ್ಚು ಕಾರ್ಮಿಕರು, ನೌಕರರು ಮತ್ತು ಅವರ ಕುಟುಂಬ ವರ್ಗದವರು ದಿಕ್ಕುತೋಚದೆ ಪರಿತಪಿಸುತ್ತಿದ್ದಾರೆ.

ಮೊದಲು ಬ್ರಿಟೀಷರಿಂದ ಪ್ರಾರಂಭವಾಗಿ ಆ ನಂತರ ಕೇಂದ್ರ ಸರಕಾರಿ ಸ್ವಾಮ್ಯದ ಕಂಪನಿಯಾಗಿ ಅಸ್ತಿತ್ವಕ್ಕೆ ಬಂದಿದ್ದು ಭಾರತ ಗೋಲ್ಡ್ ಮೈನ್ಸ್ ಲಿಮಿಟೆಡ್ (ಬಿಜಿಎಂಎಲ್) ಸಂಸ್ಥೆ. ಅತಿ ಅಮೂಲ್ಯ ಖನಿಜದ ಅದಿರನ್ನು ಭೂಗರ್ಭದ ಆಳದಿಂದ ಅಗೆದು ತೆಗೆಯುವ ಕಾಯಕವನ್ನು ಬಿಜಿಎಂಎಲ್ ಸ್ಥಗಿತಗೊಳಿಸಿ ಕಾರ್ಮಿಕರಿಂದ ವಿಆರ್‌ಎಸ್ ಯೋಜನೆ ಆಧಾರದಲ್ಲಿ ಸ್ವಯಂ ನಿವೃತ್ತಿ ಪಡೆದು ಅವರಿಗೆ ತೀರಾ ಕಡಿಮೆಯೆನ್ನಬಹುದಾದ ಪರಿಹಾರ ಮೊತ್ತವನ್ನು ವಿತರಿಸಿ ಕೈತೊಳೆದುಕೊಂಡಿದೆ.

ಕಾರ್ಮಿಕ ವರ್ಗದ ಶ್ರಮಶಕ್ತಿಯನ್ನು ಮೂಲ ಕಾರಣ.

ಚಿನ್ನದ ಗಣಿ ಕಾರ್ಮಿಕರೆಂದರೆ ಅವರು ಚಿನ್ನದ ಬಟ್ಟಲಲ್ಲೇ ಊಟ ಮಾಡುತ್ತಾರೇನೋ ಎಂಬ ಸಾರ್ವತ್ರಿಕ ಕಲ್ಪನೆ ಅದೆಷ್ಟು ಸುಳ್ಳು, ಅಸಹಜ ಎನ್ನುವುದಕ್ಕೆ ಕಾರ್ಮಿಕರು ಪಡೆದ ಪರಿಹಾರ ಮೊತ್ತದ ಚೆಕ್‌ಗಳೇ ಸಾಕ್ಷಿ. ಅವರು ಬಾಳಿದ ಮನೆಗಳೆಂಬ ಮುರುಕಲು ಕಟ್ಟಡಗಳೇ ಸಾಕ್ಷಿ.

ವಿಶ್ವಾಸ್

ಬಂಡವಾಳಶಾಹಿ ವರ್ಗ ಯಾವ ರೀತಿಯಲ್ಲಿ ಶೋಷಣೆಗೆ ಒಳಪಡಿಸುತ್ತದೆ ಎನ್ನುವುದಕ್ಕೆ ಕೋಲಾರ ಚಿನ್ನದ ಗಣಿಯ ಸ್ಥಗಿತದ ನಂತರ ಕಾರ್ಮಿಕರ ದಯನೀಯ ಬದುಕೇ ನಿದರ್ಶನ ಹೇಳುತ್ತದೆಂದರೆ ತಪ್ಪಾಗಲಾರದೇನೋ?

ಕೋಲಾರ ಚಿನ್ನದ ಗಣಿಯ ಶ್ರಮಿಕ ಸಮುದಾಯವು ಸಿಪಿಐ(ಎಂ) ಮತ್ತು ಸಿಐಟಿಯು ನೇತೃತ್ವದಲ್ಲಿ ರಾಜ್ಯದ ದುಡಿಯುವ ವರ್ಗದ ಹೋರಾಟಕ್ಕೆ ನೀಡಿದ ಕೊಡುಗೆ ಅವಿಸ್ಮರಣೀಯ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರ ವಿರುದ್ದ ಬಂಡಾಯವೆದ್ದ ಶ್ರೇಯಸ್ಸು ಕೂಡ ಕೆಜಿಎಫ್ ಕಾರ್ಮಿಕರಿಗಿದೆ.


ದೃಢ ವಿಶ್ವಾಸ

ಈ ಗತ ಇತಿಹಾಸವೆಲ್ಲ ಒತ್ತಟ್ಟಿಗಿರಲಿ. ಈ ಚಿನ್ನದ ಗಣಿಯ ಸಾವಿರಾರು ಕಾರ್ಮಿಕರು ಹಾಗೂ ಅವರ ಕುಟುಂಬ ವರ್ಗದವರ ಸಂಕಷ್ಟವನ್ನು ದೂರ ಮಾಡಲು ಸಾಧ್ಯವೇ ಇಲ್ಲವೇ ಎಂಬ ಪ್ರಶ್ನೆ ಈಗ ಕಾಡುತ್ತಿದೆ. ಅದಿರು ಸಂಗ್ರಹ ಸಾಕಷ್ಟಿಲ್ಲ ಹಾಗೂ ಕಾರ್ಯಾಚರಣೆ ವೆಚ್ಚವೂ ದುಬಾರಿ ಎಂಬ ಕಾರಣಗಳನ್ನೊಡ್ಡಿ ಸರಕಾರ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿತು. ಆದರೆ ಇನ್ನೂ ಅರ್ಧ ಶತಮಾನ ಕಾಲ ಕೆಲಸ ಮಾಡಬಹುದಾದಷ್ಟು ಅದಿರು ಸಂಗ್ರಹವಿದೆ ಎಂಬ ದೃಢವಿಶ್ವಾಸ ಇಲ್ಲಿನ ಕಾರ್ಮಿಕರದ್ದು. ಅನುಭವವೇ ಈ ವಿಶ್ವಾಸಕ್ಕೆ ಮೂಲ ಕಾರಣ.

ಈ ಹಿನ್ನೆಲೆಯಲ್ಲಿ ಗಣಿಯನ್ನು ನಿಮಗೆ ನಡೆಸಲು ಆಗದಿದ್ದರೆ ನಮಗೇ ಬಿಟ್ಟುಕೊಡಿ ಎಂಬ ಬಲವಾದ ಕೂಗು ಕೆಲಸಗಾರರ ನಡುವಿನಿಂದ ಎದ್ದುಬಂದಿದೆ.

ಇದು ಗ್ಲೋಬಲ್ ಟೆಂಡರ್ (ಜಾಗತಿಕ ಹರಾಜು) ಎಂಬ ಪ್ರಕ್ರಿಯೆಗೆ ಚಾಲನೆ ನೀಡಿದೆ. ಬಿಜಿಎಂಎಲ್‌ನ ಆಸ್ತಿಪಾಸ್ತಿಯ ಮೊತ್ತವೆಷ್ಟು ಎಂಬುದನ್ನು ಮೌಲ್ಯಮಾಪನ ಮಾಡುವುದೇ ಗ್ಲೋಬಲ್ ಟೆಂಡರ್‌ನ ಉದ್ದೇಶ. ವೌಲ್ಯಮಾಪನದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವುದೇ ಇದರ ಉದ್ದೇಶ ಎನ್ನುತ್ತವೆ ಮೂಲಗಳು. ಆದರೆ ನಿಜವೆಷ್ಟು? ಉದ್ದೇಶವೇನು? ಸ್ಪಷ್ಟವಾಗಬೇಕು.


ಶಿಥಿಲ ಬದುಕಿಗೆ ಸಾಕ್ಷಿ


ಬಣಗುಡುವ ಗಣಿ ಪ್ರವೇಶದ್ವಾರ

ಕರ್ನಾಟಕ ಹೈಕೋರ್ಟ್ ನಿರ್ದೇಶನದ ಪ್ರಕಾರ ಈ ಪ್ರಕ್ರಿಯೆ ಆಗಸ್ಟ್ 17ರೊಳಗೆ ಮುಗಿಯಬೇಕು. ಕೇಂದ್ರ ಸಚಿವ ಸಂಪುಟ ಕೂಡ ಗ್ಲೋಬಲ್ ಟೆಂಡರ್‌ಗೆ ಹಸಿರು ನಿಶಾನೆ ತೋರಿದೆ ಎಂಬುದು ಸುದ್ದಿ. ಒಮ್ಮೆ ಆಸ್ತಿ ಮೌಲ್ಯ ನಿರ್ಧಾರವಾದ ಮೇಲೆ ಇದರ ಖರೀದಿಗಾಗಿ ಕಾರ್ಮಿಕ ಹಾಗೂ ನೌಕರ ಸಂಘಗಳು ಒಂದಾಗಿ ರಚಿಸಿಕೊಂಡ ಸೊಸೈಟಿಗೆ ಸರಕಾರ ಆಹ್ವಾನ ನೀಡುತ್ತದೆ. ಬೆಲೆ ಒಪ್ಪಿಗೆಯಾದಲ್ಲಿ ಈ ಸೊಸೈಟಿ ಆ ಆಹ್ವಾನವನ್ನು ಅಂಗೀಕರಿಸಬಹುದು. ಇಲ್ಲವೇ ತಿರಸ್ಕರಿಸಬಹುದು. ಮೊದಲ ಆದ್ಯತೆ ಕಾರ್ಮಿಕರಿಗೆ. ಆದಾಗದಿದ್ದಲ್ಲಿ ಸರಕಾರ ಖಾಸಗೀಯವರತ್ತ ಹೊರಳುತ್ತದೆ ಎನ್ನಲಾಗುತ್ತಿದೆ.

ಒಂದು ವೇಳೆ ಸೊಸೈಟಿ ಬೆಲೆ ಒಪ್ಪಿಗೆಯಾಗಿ ಆಫರ್‌ನ್ನು ಅಂಗೀಕರಿಸಿದರೂ ಗಣಿ ಚಟುವಟಿಕೆಯನ್ನು ಸ್ವತಂತ್ರವಾಗಿ ನಡೆಸಿಕೊಂಡು ಹೋಗುವ ಆರ್ಥಿಕ ಚೈತನ್ಯ ಅದಕ್ಕಿಲ್ಲ. ಹೀಗಾಗಿ ಅದು ಯಾವುದಾದರೂ ವಿಶ್ವಾಸಯೋಗ್ಯ ಖಾಸಗಿ ಕಂಪನಿಯೊಂದಿಗೆ ಕೈಜೋಡಿಸಲಿದೆ. ಅಂದರೆ ಜಂಟಿ ಸಹಭಾಗಿತ್ವದ ಕಂಪನಿ ತಲೆಯೆತ್ತಲಿದೆ.

ಒಟ್ಟಾರೆಯಾಗಿ ಚಿನ್ನದ ಗಣಿ ಪುನಃ ಕಾರ್ಯಾರಂಭ ಮಾಡಲಿರುವ ಸಾಧ್ಯತೆಗಳು ಇವೆಯೆಂದು ಇಲ್ಲಿನ ದುಡಿಯುವ ವರ್ಗದವರ ಮುಖದಲ್ಲಿ ಹೊಸ ಕಳೆ ಲಾಸ್ಯವಾಡುತ್ತಿದೆ. ಗಣಿಗಾರಿಕೆ ಪುನಾರಂಭವಾಗಿ ದುಡಿಯುವ ಕೈಗಳ ಭಾಗ್ಯದ ಬಾಗಿಲು ತೆರೆಯದಿದ್ದರೂ ಅವರ ತುತ್ತಿನ ಚೀಲವಾದರೂ ತುಂಬೀತೇ ಎಂದು ಆಶಿಸಿದರೆ ಅದು ತಪ್ಪೇನಲ್ಲ. ಈ ದುಡಿಯುವ ಜನರ ಅಪಾರ ಅನುಭವವೇ ಮುಂದೆ ಜನಿಸಲಿರುವ ಕಂಪನಿಯ ಆಧಾರವಾಗಲಿದೆ ಎಂಬುದಂತೂ ನಿಜ.

ಗ್ಲೋಬಲ್ ಟೆಂಡರ್ ಯಾಕೆ ? 'ಸಿಟು' ವಿರೋಧ

ಗ್ಲೋಬಲ್ ಟೆಂಡರ್ ಬೇಡವೇ ಬೇಡ ಅನ್ನುತ್ತದೆ ಕೋಲಾರ ಚಿನ್ನದ ಗಣಿ ಕಾರ್ಮಿಕರಿಗೆ ದಶಕಗಳ ಕಾಲ ಪರಿಣಾಮಕಾರಿ ನಾಯಕತ್ವ, ಮಾರ್ಗದರ್ಶನ ನೀಡಿದ ಸಿ.ಐ.ಟಿ.ಯು.

ಸರಕಾರಕ್ಕೆ ಗಣಿ ನಡೆಸಲು ಸಾಧ್ಯವಾಗದಿದ್ದರೆ ಅದನ್ನು ಕಾರ್ಮಿಕರಿಗೆ ಬಿಟ್ಟುಕೊಡಬೇಕೆನ್ನುವುದು ಸಿಟು ನಿಲುವು. ಒಂದು ಸಂಸ್ಥೆಯ ಆಸ್ತಿಪಾಸ್ತಿ ಮೌಲ್ಯವನ್ನು ನಿರ್ಧರಿಸುವಂಥ ಸಾಮರ್ಥ್ಯ ನಮ್ಮ ದೇಶದ ಕಂಪನಿಗಳಿಗೇ ಇದೆ. ಹೀಗಾಗೀದಕ್ಕಾಗಿ ಜಾಗತಿಕ ಟೆಂಡರ್ ಕರೆಯಬೇಕಿಲ್ಲ ಎನ್ನುತ್ತಾರೆ ಸಿಐಟಿಯು ಸಂಯೋಜಿತ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ಸವರಿದಾಸ್.

ಸಿಐಟಿಯು ಬೆಂಬಲಿತ ಗ್ಲೋಬಲ್ ಗೋಲ್ಡ್ ಮೈನ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟಿ (ಜಿಜಿಎಂಐಸಿಎಸ್)ಗೆ ಬಹುಮತ ಇರುವುದರಿಂದ ಅದಕ್ಕೇ ಗಣಿಗಾರಿಕೆ ಹೊಣೆಯನ್ನು ಬಿಟ್ಟುಕೊಡ ಬೇಕೆನ್ನುತ್ತಾರೆ ಅವರು. ಈ ಸಂಬಂಧ ನ್ಯಾಯಾಲಯಕ್ಕೆ ಮೊರೆ ಹೋಗಲಾಗಿದೆ. ಪ್ರಧಾನಿಯವರ ಬಳಿಯೂ ಸವಿವರ ವಾದವನ್ನು ಮಂಡಿಸಲಾಗಿದೆ ಎಂದು ಹಿರಿಯ ಕಾರ್ಮಿಕ ಧುರೀಣ ತಿಳಿಸಿದ್ದಾರೆ.

'ಮನೆಗೆ ಜಾಗ ಕೊಡಿ' ಎರಡನೆಯ ಹಂತದ ಚಳುವಳಿ

ಭೂಗಳ್ಳರಿಂದ ವಶಪಡಿಸಿಕೊಂಡ ಸರ್ಕಾರಿ ಭೂಮಿಯನ್ನು ಬಡವರಿಗೆ ಮನೆ ನಿವೇಶನಕ್ಕಾಗಿ, ಮೀಸಲಿಟ್ಟು ಎಲ್ಲಾ ಬಡವರಿಗೆ, ಕಾರ್ಮಿಕರಿಗೆ, ಆಟೋ ಚಾಲಕರಿಗೆ, ಬೀಡಿ ಕಾರ್ಮಿಕರಿಗೆ, ಅಂಗನವಾಡಿ ಕಾರ್ಮಿಕರಿಗೆ ಮುಂತಾದ ದುಡಿವ ಜನರಿಗೆ ಕಾಲೋನಿಗಳನ್ನು ನಿರ್ಮಿಸಿ ಕೊಡಬೇಕೆಂದು ಒತ್ತಾಯಿಸಿ 18.08.2007ರಂದು ಬೆಂಗಳೂರು ನಗರದ ಪುರಭವನದಿಂದ ಆರು ಸಾವಿರಕ್ಕೂ ಹೆಚ್ಚು ಜನ ಮಹಿಳೆಯರು, ಕಾರ್ಮಿಕರು ಆಟೋ ಚಾಲಕರು ಮುಂತಾದ ಬಡ ಜನರ ಬೃಹತ್ ಮೆರವಣಿಗೆ ಬನ್ನಪ್ಪ ಪಾರ್ಕ್‌ವರೆಗೂ ನಡೆದು ಅಲ್ಲಿ ಧರಣಿ ಮತ್ತು ಬಹಿರಂಗ ಸಭೆ ನಡೆಯಿತು.


ಅಹವಾಲು - ಆಗ್ರಹದೊಂದಿಗೆ

ಬಹಿರಂಗಸಭೆಯನ್ನು ಉದ್ದೇಶಿಸಿ, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ. ಬಯ್ಯಾರೆಡ್ಡಿ ಮತ್ತು ಬೀಡಿ ಕಾರ್ಮಿಕರ ಸಂಘಟನೆಯ ಜಿಲ್ಲಾಧ್ಯಕ್ಷರಾದ ಜಲೀಲ್ ಖಾನ್ ಮಾತನಾಡಿ ಎಲ್ಲಾ ಬಡವರಿಗೆ ಕಾರ್ಮಿಕರಿಗೆ ಮನೆ ನಿವೇಶನಗಳನ್ನು ಕೊಡಬೇಕೆಂದು ಒತ್ತಾಯಿಸಿ ನೀವು ಮನೆ ನಿವೇಶನ ಕೊಡದಿದ್ದರೆ, ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಳ್ಳುವ ಹೋರಾಟವನ್ನು ನಿವೇಶನ ರಹಿತರೆಲ್ಲಾ ಸಿಪಿಎಂ ನೇತೃತ್ವದಲ್ಲಿ ಮಾಡುತ್ತೇವೆಂದು ಸರ್ಕಾರಕ್ಕೆ ಎಚ್ಚರಿಸಿದರು.

ವಿಶೇಷ ಜಿಲ್ಲಾಧಿಕಾರಿ ಶಾಂತಪ್ಪರವರು ಸ್ಥಳಕ್ಕೆ ಆಗಮಿಸಿ ಅರ್ಜಿ ಸ್ವೀಕರಿಸಿ 1000 ಎಕರೆ ಭೂಮಿಯನ್ನು ಬಿಡಿಎ, ಕೆಹೆಚ್‌ಬಿ, ಸ್ಲಂ ಬೋರ್ಡ್‌ಗೆ ಕೊಡಲು ಸರ್ಕಾರ ತೀರ್ಮಾನಿಸಿದ ಬಗ್ಗೆ ತಿಳಿಸಿದರು. ಈಗಿನ ಮನವಿ ಮತ್ತು ಅರ್ಜಿಗಳ ಬಗ್ಗೆ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಮುಖಂಡರು ಸರ್ಕಾರ ನೀಡಲಿರುವ ಭೂಮಿ ಯಾತಕ್ಕೂ ಸಾಲದು ಎಂದು ಖಂಡಿಸಿದರು.

ಮುಂದಿನ ಯೋಜನೆ ಬಗ್ಗೆ ಕೆ.ಪ್ರಕಾಶ್ ಮಾತನಾಡಿದರು. ಗೌರಮ್ಮನವರು ಪ್ರಸ್ತಾವನೆ ಮಾಡಿ ಮಾತನಾಡಿದರು.

ಜನತೆಯ ನೆಮ್ಮದಿಗೆ ಭಂಗ ತರುತ್ತಿರುವ ಬಿಜೆಪಿ-ಸಂಘಪರಿವಾರದ ಶಕ್ತಿಗಳು ಅಧಿಕಾರದ ಗದ್ದುಗೆಯನ್ನೇರುವುದನ್ನು ತಡೆಯುವ ಏಕೈಕ ದೇಶಪ್ರೇಮಿ ಉದ್ದೇಶಕ್ಕಾಗಿ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರಕ್ಕೆ ಕಳೆದ 3 ವರ್ಷಗಳಿಂದ ಎಡಪಕ್ಷಗಳು ಬಾಹ್ಯ ಬೆಂಬಲ ನೀಡುತ್ತಾ ಬಂದಿವೆ. ಆದರೆ ಡಾ:ಮನಮೋಹನ್ ಸಿಂಗ್ ನೇತೃತ್ವದ ಸರ್ಕಾರವು ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭರವಸೆಗೊಳಿಸುತ್ತಾ ಜನರ ನಿರೀಕ್ಷೆಗಳಿಗೆ ಆಘಾತವನ್ನುಂಟು ಮಾಡುತ್ತಿದೆ. ಇದರಿಂದಾಗಿ ಜನರ ಅತೃಪ್ತಿ ತೀವ್ರಗೊಳ್ಳುತ್ತಿದ್ದು ಇದರ ಲಾಭ ಪಡೆಯಲು ಕೋಮುವಾದಿ ಬಿಜೆಪಿ ಹೊಂಚು ಹಾಕುತ್ತಿದೆ. ಹೀಗಾಗುವುದನ್ನು ತಡೆಯಲು ಕೇಂದ್ರ ಸರ್ಕಾರ ತನ್ನ ಜನವಿರೋಧಿ ನೀತಿಯನ್ನು ಬದಲಾಯಿಸಬೇಕಾಗಿದೆ. ಇದಕ್ಕಾಗಿಯೇ ಎಡಪಕ್ಷಗಳು ಸಂಸತ್ತಿನ ಒಳಗೂ ಹಾಗೂ ಸಂಸತ್ತಿನ ಹೊರಗೂ ತಮ್ಮ ಒತ್ತಡವನ್ನು ತೀವ್ರಗೊಳಿಸುತ್ತಿವೆ.

ಈ ಹಿನ್ನೆಲೆಯಲ್ಲಿ ದೇಶದ ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು, ನಿರುದ್ಯೋಗಿ ಯುವಕರು, ಮಹಿಳೆಯರು, ಸಣ್ಣ ವ್ಯಾಪಾರಸ್ಥರು ಮತ್ತು ಇತರ ಜನ ಸಾಮಾನ್ಯರು ಸದ್ಯ ಎದುರಿಸುತ್ತಿರುವ ಕೆಲವು ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಒತ್ತಾಯಿಸಿ ಸಿಪಿಐ(ಎಂ) ಇದೇ ಆಗಸ್ಟ್ 16 ರಿಂದ ದೇಶಾದ್ಯಂತ ಜನರ ನಡುವೆ ಪ್ರಚಾರ ಮಾಡಿ ಆಗಸ್ಟ್ 30 ರಂದು ಸರ್ಕಾರಿ ಕಛೇರಿಗಳ ಎದುರು 'ಪಿಕೆಟಿಂಗ್' ನಡೆಸುತ್ತಿದೆ.

ಕೋಮುವಾದಿಗಳ ದುರಾಡಳಿತ, ದೌರ್ಜನ್ಯಗಳಿಂದ ನರಳಿದ ದೇಶದ ಜನ ಬಿಜೆಪಿ ನೇತೃತ್ವದ ಸರ್ಕಾರವನ್ನು ಕಿತ್ತೆಸೆದು, ಪರ್ಯಾಯವಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ-ಜನಾದೇಶ ಕಡೆಗಣಿಸಿ ಹೊರಟಿದೆ. ಬೆಂಬಲಿಸಿದ ಎಡಪಕ್ಷಗಳು ಬೆಲೆ ಏರಿಕೆ, ಆಹಾರ, ಉದ್ಯೋಗ, ಕೃಷಿ ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆಯಲ್ಲದೇ ಪರಮಾಣು ಒಪ್ಪಂದದ ಅಪಾಯಗಳ ವಿರುದ್ಧ ದೇಶದಾದ್ಯಂತ ಸಮರ ಸಾರಿವೆ.

ಆಗಸ್ಟ್ 30

ಕೇಂದ್ರ ಸರ್ಕಾರಿ ಕಚೇರಿಗಳ ಮುತ್ತಿಗೆ ದಿಟ್ಟ ಉತ್ತರಕ್ಕೆ ಜನ ಸಜ್ಜು

ಬೆಲೆ ಏರಿಕೆಗೆ ಕಡಿವಾಣ ಹಾಕಿ:

ಆಹಾರ ಪದಾರ್ಥಗಳ ಮತ್ತು ಇತರ ಅಗತ್ಯವಸ್ತುಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರು ಕಂಗಾಲಾಗಿದ್ದಾರೆ. ಅಕ್ಕಿ ಮತ್ತು ಗೋಧಿ ಬೆಲೆ ಈ ವರ್ಷದಲ್ಲೇ ಶೇ.25 ರಿಂದ 30 ರಷ್ಟು ಏರಿದೆ. ದಿನ ಬಳಕೆಯ ವಸ್ತುಗಳ ಬೆಲೆ ಏರಿಕೆಗೆ ಅನುಗುಣವಾಗಿ ಜನ ಸಾಮಾನ್ಯರ ಆದಾಯ ಹೆಚ್ಚಾಗುವುದಿಲ್ಲ. ಬೆಲೆ ಏರಿಕೆಯನ್ನು ಸರಿದೂಗಿಸಲು ಇವರಿಗೆ ಯಾವುದೇ ತುಟ್ಟಿ ಭತ್ಯೆ ಸಿಗುವುದಿಲ್ಲ. ಬೆಲೆ ಏರಿಕೆಗೆ ಕಡಿವಾಣ ಹಾಕಲಾಗದ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯುವ ಹಕ್ಕೆಲ್ಲಿದೆ? ಆಹಾರ ಧಾನ್ಯಗಳ ಮತ್ತು ಇತರ ಅಗತ್ಯ ವಸ್ತುಗಳ ಅಕ್ರಮ ದಾಸ್ತಾನು ತಡೆಗಟ್ಟಬೇಕು. ಅಕ್ರಮ ದಾಸ್ತಾನುದಾರರ ಹಾಗೂ ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಎಲ್ಲ ಅಗತ್ಯ ವಸ್ತುಗಳ ವ್ಯಾಪಾರದಲ್ಲಿ 'ಮುಂಗಡವ್ಯಾಪಾರ' ಎಂಬ ಜೂಜಾಟವನ್ನು ನಿಷೇಧಿಸಬೇಕು. ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಯನ್ನು ನಿಯಂತ್ರಿಸಲು ಅವುಗಳ ಮೇಲೆ ತೆರಿಗೆ ವಿಧಿಸುವ ವಿಧಾನವನ್ನು ಪರಿಷ್ಕರಿಸಬೇಕು. ಇಷ್ಟು ಮಾಡಲಾಗದ ಸರ್ಕಾರ ತೊಲಗಬೇಕು.

ರೇಷನ್ ವ್ಯವಸ್ಥೆ ಬಲಪಡಿಸಿ:

ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರು ತತ್ತರಿಸುತ್ತಿರುವಾಗ, ಕೇಂದ್ರ ಸರ್ಕಾರ ಅವರ ನೆರವಿಗೆ ಧಾವಿಸುವ ಬದಲು ರೇಷನ್ ವ್ಯವಸ್ಥೆಯನ್ನೇ ಮೆಲುಕು ಮಾಡಿ ಗಾಯದ ಮೇಲೆ ಬರೆ ಎಳೆಯಲು ಹೊರಟಿದೆ. ರೇಷನ್ ವ್ಯವಸ್ಥೆಯನ್ನು ಕ್ರಮೇಣ ಕೈಬಿಡುವ ಉದ್ದೇಶದಿಂದ ರೈತರು ಬೆಳೆದ ಆಹಾರ ಧಾನ್ಯಗಳನ್ನು ಬೆಂಬಲ ಬೆಲೆ ನೀಡಿ ಕೊಂಡುಕೊಳ್ಳುವದನ್ನು ಕೈ ಬಿಡಲಾಗುತ್ತಿದೆ. ರೇಷನ್ ವ್ಯವಸ್ಥೆಗೆ ನೀಡಲಾಗುತ್ತಿದ್ದ ಸಬ್ಸಿಡಿಯನ್ನು ಗಣನೀಯವಾಗಿ ಕಡಿತ ಮಾಡಲಾಗುತ್ತಿದೆ. ಬಿಪಿಎಲ್ ಕಾರ್ಡುದಾರರಿಗೆ ಒದಗಿಸುವ ಆಹಾರ ಧಾನ್ಯಗಳ ಪ್ರಮಾಣವನ್ನು ಕಡಿಮೆ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ತಿಂಗಳಿಗೆ 327 ರೂ. ಮತ್ತು ನಗರ ಪ್ರದೇಶದಲ್ಲಿ ತಿಂಗಳಿಗೆ 454 ರೂ.ಗಿಂತ ಜಾಸ್ತಿ ಆದಾಯ ಇರುವವರೆಲ್ಲರೂ ಬಡವರಲ್ಲ ಎಂಬ ಅಳತೆಗೋಲಿನ ಬಳಕೆ ಮಾಡಿ ಬಿಪಿಎಲ್ ಕಾರ್ಡುದಾರರ ಸಂಖ್ಯೆಯನ್ನು ಗರಿಷ್ಠ ಪ್ರಮಾಣದಲ್ಲಿ ಕಡಿತ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಅಂತ್ಯೋದಯ ಯೋಜನೆಯ ಅಡಿಯಲ್ಲಿ 2.5 ಕೋಟಿ ಕುಟುಂಬಗಳನ್ನು ಒಳಗೊಳಿಸುವ ಹಿಂದಿನ ಗುರಿಯನ್ನು ಕೈಬಿಡಲಾಗಿದೆ. ಇನ್ನು ಮುಂದೆ ಎಪಿಎಲ್ ಕಾರ್ಡುದಾರರಿಗೆ ಪಡಿತರ ನೀಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲು ನಿರ್ಧರಿಸಲಾಗಿದೆ. ಬಡವರ ಒಪ್ಪತ್ತಿನ ಗಂಜಿಯನ್ನೇ ಕಿತ್ತುಕೊಳ್ಳುವ ಸರ್ಕಾರದ ಈ ನೀತಿಗಳ ವಿರುದ್ಧ ದೊಡ್ಡ ಯುದ್ಧವೇ ನಡೆಯಬೇಕಾಗಿದೆ. ಆಗಸ್ಟ್ 30ರ ಚಳುವಳಿ ಅದಕ್ಕೊಂದು ಅವಕಾಶ.

ರೈತರನ್ನು ಕೊಲ್ಲುವ ಸರ್ಕಾರ:

ಯು.ಪಿ.ಎ. ಸರ್ಕಾರ ರೈತರಿಗೆ ಕೊಟ್ಟ ಯಾವ ಭರವಸೆಯನ್ನೂ ಪರಿಣಾಮಕಾರಿಯಾಗಿ ಜಾರಿ ಮಾಡಿಲ್ಲ. ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆ ದೊರಕಿಸಿಲ್ಲ. ಕೃಷಿ ಉತ್ಪನ್ನಗಳ ಮೇಲೆ ನಿಯಂತ್ರಣ ಹೇರಿ ನಮ್ಮ ರೈತರಿಗೆ ರಕ್ಷಣೆ ಒದಗಿಸಲು ಸಾಧ್ಯವಾಗಿಲ್ಲ. ರೈತರಿಗೆ ರಿಯಾಯ್ತಿ ಬಡ್ಡಿದರ ಸಾಂಸ್ಥಿಕ ಸಾಲ ಒದಗಿಸಲಾಗುತ್ತದೆ ಎಂದು ಹೇಳಲಾಗುತ್ತಿದ್ದರೂ ನೂರಕ್ಕೆ 60ರಷ್ಟು ರೈತರು ಈ ಸೌಲಭ್ಯವನ್ನು ಪಡೆಯಲಾಗದೆ ಖಾಸಗಿ ಸಾಲವನ್ನೇ ಅವಲಂಭಿಸಿದ್ದಾರೆ. ಇದರ ಪರಿಣಾಮವಾಗಿ ರೈತರ ಆತ್ಮಹತ್ಯೆಗಳು ಅವ್ಯಾಹತವಾಗಿ ಮುಂದುವರೆದಿವೆ.

ಸರ್ಕಾರವೇ ನೇಮಿಸಿದ ಡಾ.ಎಂ.ಎಸ್.ಸ್ವಾಮಿನಾಥನ್ ನೇತೃತ್ವದ 'ರಾಷ್ಟ್ರೀಯ ರೈತರ ಆಯೋಗ'ದ ಶಿಫಾರಸ್ಸುಗಳನ್ನು ಜಾರಿಗೆ ತರಲು ಸರ್ಕಾರ ಮುಂದಾಗುತ್ತಿಲ್ಲ. ಬದಲಾಗಿ ರೈತರನ್ನು ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳಿಗೆ ಬಲಿಕೊಡಲು ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಾಡುವಂತೆ ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಿ, ಗುತ್ತಿಗೆ ಕೃಷಿ' ಪದ್ಧತಿ ಎಂಬ ಲೂಟಿಯನ್ನು ಕಾನೂನುಬದ್ಧಗೊಳಿಸಲು ಹೊರಟಿದೆ. ವಿಶೇಷ ಆರ್ಥಿಕ ವಲಯಗಳ ಹೆಸರಿನಲ್ಲಿ ರೈತರ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರಿಯಲ್ ಎಸ್ಟೇಟ್ ದಂಧೆಗೆ ಪ್ರೋತ್ಸಾಹ ನೀಡುತ್ತಿದೆ. ಈ ನೀತಿಗಳಿಂದ ರೈತರ ಆತ್ಮಹತ್ಯೆಗಳೆಂಬ ಕೊಲೆಗಳನ್ನು ಹೆಚ್ಚಿಸಲು ಹೊರಟಿರುವ ಯು.ಪಿ.ಎ ಸರ್ಕಾರದ ವಿರುದ್ಧ ಪ್ರಭಲವಾದ ಪ್ರತಿಭಟನೆಗೆ ಇದು ಸಕಾಲವಾಗಿದೆ.

ಕೇಂದ್ರ ಸರ್ಕಾರದ ಹಣದುಬ್ಬರ ಮತ್ತು ಬೆಲೆ ಏರಿಕೆ ನೀತಿಯಿಂದಾಗಿ ಅತಿ ಹೆಚ್ಚು ಸಂಕಷ್ಟವನ್ನು ಅನುಭವಿಸುವವರು ಕೃಷಿ ಕೂಲಿಕಾರರು ಮತ್ತು ಅಸಂಘಟಿತ ವಲಯದ ಕಾರ್ಮಿಕರು. ತಮ್ಮ ಶ್ರಮ ಶಕ್ತಿಯನ್ನು ದಿನಾಲೂ ಮಾರಾಟ ಮಾಡಿ ಬದುಕುವ ಇವರು ನಮ್ಮ ದೇಶದ ದುಡಿಯುವ ಶಕ್ತಿಯ ಶೇ.83ರಷ್ಟು ಇದ್ದಾರೆ. ಇವರಿಗೆ ಖಾಯಂ ಕೆಲಸವಿಲ್ಲ, ಯಾವುದೇ ಸಾಮಾಜಿಕ ಭದ್ರತೆಯಿಲ್ಲ. ಇವರಿಗಾಗಿ ಎರಡು ಸಮಗ್ರ ಕೇಂದ್ರೀಯ ಶಾಸನಗಳನ್ನು ರೂಪಿಸುವ ಯು.ಪಿ.ಎ ಸರ್ಕಾರದ ಭರವಸೆ 3 ವರ್ಷಗಳ ನಂತರವೂ ಜಾರಿಗೆ ಬಂದಿಲ್ಲ. ಎಡಪಕ್ಷಗಳ ನಿರಂತರ ಒತ್ತಡದಿಂದಾಗಿ ಅರಣ್ಯ ಭೂಮಿಯಲ್ಲಿ ನೆಲೆಸಿರುವ ಹಾಗೂ ವ್ಯವಸಾಯ ಮಾಡುತ್ತಿರುವ ಆದಿವಾಸಿಗಳ ಮತ್ತು ಇತರ ಅರಣ್ಯವಾಸಿಗಳ ಅರಣ್ಯ ಹಕ್ಕುಗಳ ಕಾಯ್ದೆ ಸಂಸತ್ತಿನಲ್ಲಿ ಪಾಸಾಗಿದ್ದರೂ, ಅದರಲ್ಲಿರುವ ಲೋಪದೋಷಗಳನ್ನು ತೆಗೆದುಹಾಕಿ, ಅಗತ್ಯ ನಿಯಮಾವಳಿಯನ್ನು ರೂಪಿಸಿ ಕಾಯ್ದೆಯನ್ನು ಜಾರಿಮಾಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಹೆಚ್ಚುತ್ತಿರುವ ನಿರುದ್ಯೋಗವನ್ನು ಸ್ವಲ್ಪ ಮಟ್ಟಿಗಾದರೂ ಬಗೆಹರಿಸಲು ನೆರವಾಗಬಲ್ಲ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸರ್ಕಾರ ಸಾಕಷ್ಟು ಆಸಕ್ತಿ ತೋರಿಸುತ್ತಿಲ್ಲ ಮತ್ತು ಅಗತ್ಯ ಹಣವನ್ನು ಒದಗಿಸಲು ಮುಂದೆ ಬರುತ್ತಿಲ್ಲ. ವ್ಯಾಪಕ ವಿರೋಧದ ನಡುವೆಯೂ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮಾಡಿಕೊಡುವ ಮೂಲಕ ಹಾಗೂ ದೇಶೀಯ ಗುತ್ತೆದಾರಿ ಕಂಪನಿಗಳಿಗೆ ನಿಯಂತ್ರಣವಿಲ್ಲದೆ ಪ್ರವೇಶ ನೀಡುವ ಮೂಲಕ 11 ಕೋಟಿಗೂ ಹೆಚ್ಚು ಸಣ್ಣ ವ್ಯಾಪಾರಸ್ಥರನ್ನು ಬೀದಿಪಾಲು ಮಾಡಲು ಹೊರಟಿದೆ. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯನ್ನು ಒದಗಿಸುವ ವಿಷಯದಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸುತ್ತಿಲ್ಲ. ಭಾರತ ಅಮೇರಿಕ ನಾಗರೀಕ ಪರಮಾಣು ಸಹಕಾರ ಒಪ್ಪಂದ ಜಾರಿಯಾಗಬಾರದು.

ನಮ್ಮ ಸ್ವತಂತ್ರ ವಿದೇಶಾಂಗ ನೀತಿಗೆ ಮತ್ತು ಒಂದು ಸ್ವಾವಲಂಭಿ ಪರಮಾಣು ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ನಮಗೆ ಇರುವ ಹಕ್ಕಿಗೆ ಧಕ್ಕೆ ತರುವ ಭಾರತ, ಅಮೇರಿಕ 123 ನಾಗರೀಕ ಪರಮಾಣು ಸಹಕಾರ ಒಪ್ಪಂದವನ್ನು ಜಾರಿಮಾಡಲು ಮುಂದಾಗಬಾರದೆಂದು ಎಡಪಕ್ಷಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ. ದೇಶದ ಸಾರ್ವಭೌಮತೆಯ ಮೇಲೆ ದೂರಗಾಮಿ ಪರಿಣಾಮ ಬೀರುವ ಇಂತಹ ಅಂತರ್‍ರಾಷ್ಟ್ರೀಯ ಒಪ್ಪಂದಗಳಿಗೆ ಸಹಿಮಾಡುವ ಮುನ್ನ ಸಂಸತ್ತಿನಲ್ಲಿ ಒಪ್ಪಿಗೆ ಪಡೆಯುವುದು ಅಗತ್ಯವಿದೆ. ಆದರೆ ನಮ್ಮ ಸಂವಿಧಾನದಲ್ಲಿ ಅದನ್ನು ಕಡ್ಡಾಯಗೊಳಿಸಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಇಷ್ಟೊಂದು ಮಹತ್ವದ ಒಂದು ಒಪ್ಪಂದವನ್ನು ಸರ್ಕಾರ ಜಾರಿ ಮಾಡಲು ಹೊರಟಿರುವುದು ಒಂದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಸಂಸತ್ತಿನಲ್ಲಿ ಈಗಾಗಲೇ ಈ ಒಪ್ಪಂದಕ್ಕೆ ಬಹುಮತದ ವಿರೋಧ ವ್ಯಕ್ತವಾಗಿದೆ. ಹಲವು ಪ್ರಶ್ನೆಗಳನ್ನು ಅನುಮಾನಗಳನ್ನು ಎತ್ತಲಾಗಿದೆ. ದೇಶದ ಜನತೆಗೆ ಈ ಒಪ್ಪಂದದ ಸಾಧಕ ಬಾಧಕಗಳನ್ನು ತಿಳಿಯುವ ಹಕ್ಕಿದೆ. ಅಲ್ಲಿಯವರೆಗೆ ಈ ಒಪ್ಪಂದವನ್ನು ಜಾರಿ ಮಾಡಲು ಸರ್ಕಾರ ಮುಂದಾಗಬಾರದು. ಸರ್ಕಾರ ಇದನ್ನು ಪ್ರತಿಷ್ಠೆಯ ವಿಷಯ ಮಾಡಿಕೊಂಡರೆ ಅದು ಗಂಭೀರ ಪರಿಣಾಮವನ್ನು ಎದುರಿಸಬೇಕಾಗುವುದು.

ಸೆಪ್ಟೆಂಬರ್ 4ರಿಂದ 9ರವರೆಗೆ ಬಂಗಾಳಕೊಲ್ಲಿಯಲ್ಲಿ ಅಮೇರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳೊಂದಿಗೆ ಜಂಟಿ ನೌಕಾ ಸಮರಾಭ್ಯಾಸಕ್ಕೆ ಮುಂದಾಗಿರುವುದು ಸಹ ಖಂಡನಾರ್ಹವಾಗಿದೆ. ತನ್ನ ಸಾಮ್ರಾಜ್ಯಶಾಹಿ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಹೆಣಗುತ್ತಿರುವ ಅಮೇರಿಕದಂತಹ ದೇಶದೊಂದಿಗೆ ನಡೆಸುವ ಇಂತಹ ಜಂಟಿ ಸಮರಾಭ್ಯಾಸಗಳು ನಮ್ಮ ದೇಶದ ರಕ್ಷಣಾ ಹಿತಕ್ಕೆ ಧಕ್ಕೆ ಹಾಗೂ ಭಾರತ ಉಪಖಂಡದಲ್ಲಿ ಅಣತಿಗೆ ಕಾಣವಾಗಲಿದ್ದು ಇದರ ವಿರುದ್ಧವೂ ಎಲ್ಲಾ ದೇಶಪ್ರೇಮಿ ಶಕ್ತಿಗಳು ಧ್ವನಿ ಎತ್ತಬೇಕಾಗಿದೆ.

ಈ ಎಲ್ಲಾ ಪ್ರಶ್ನೆಗಳಿಗೆ ಆಗಸ್ಟ್ 30ರ ಕಾರ್ಯಾಚರಣೆ ಜನತೆಯ ದಿಟ್ಟ ಉತ್ತರವಾಗಲಿದೆ.

ನಿತ್ಯಾನಂದಸ್ವಾಮಿ

ಕಾಂ. ಸೂರಿಯವರ ನೆನಪಿನಲ್ಲೊಂದು ವಿಚಾರಸಂಕಿರಣ

ಕರ್ನಾಟಕ ಕಾರ್ಮಿಕ ಆಂದೋಲನದ ಧ್ರುವತಾರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತಾರರಾದ ಕಾಮ್ರೇಡ್ ಸೂರ್ಯನಾರಾಯಣ ರಾವ್ ರವರ 83ನೇ ಜನ್ಮದಿನಾಚರಣೆಯನ್ನು ಇದೇ ಆಗಸ್ಟ್ 24, 2007 ರಂದು ವಿಶಿಷ್ಟವಾಗಿ ಆಚರಿಸಲಾಯಿತು.



ಸೂರ್ಯನಾರಾಯಣರಾವ್ ಸ್ಮಾರಕ ಟ್ರಸ್ಟ್ ವತಿಯಿಂದ ಸೂರಿ ಭವನದಲ್ಲಿ ಕಾರ್ಮಿಕ ಆಂದೋಲನದ ಕಾರ್ಯಕರ್ತರ ಮುಂದಿರುವ ಗಂಭೀರ ಸವಾಲುಗಳ ಕುರಿತು ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ವಿಜೆಕೆ ನಾಯರ್, ರಾಜ್ಯ ಅಧ್ಯಕ್ಷರಾದ ಕಾಂ. ಬಿ.ಮಾಧವ, ರಾಜ್ಯ ಕಾರ್ಯದರ್ಶಿ ಕಾಂ. ಎಸ್.ಪ್ರಸನ್ನಕುಮಾರ್, ಜಿ.ಎನ್.ನಾಗರಾಜ್, ಕೆ.ಪ್ರಕಾಶ್ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಶ್ರೀಮತಿ ಯಶೋಧಾ ಸೂರ್ಯನಾರಾಯಣ ರಾವ್ ಅವರಲ್ಲದೇ ಸೂರಿಯವರ ಮಗಳು ಮೀರಾ ಆಯ್ದ ಕಾರ್ಮಿಕ ಚಳುವಳಿಯ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಆರಂಭದಲ್ಲಿ ಕಾಂ. ಸೂರಿಯವರ ಭಾವಚಿತ್ರಕ್ಕೆ ಹೂ ಅರ್ಪಿಸಿ ಗೌರವ ಸಲ್ಲಿಸಲಾಯಿತು.



ಭಾರತ - ಅಮೆರಿಕಾ ಅಣುಬಂಧವೋ


ಅಮೆರಿಕಾದ ಕಬಂಧ ಬಾಹುಗಳಲ್ಲಿ ಭಾರತದ ಬಂಧನವೋ ?

ಜಿ.ಎನ್.ನಾಗರಾಜ್

ಆಗಸ್ಟ್ 7 ರಂದು ಎಡಪಕ್ಷಗಳು ಸಭೆ ಸೇರಿ ಭಾರತ ಮತ್ತು ಅಮೇರಿಕಾ ನಡುವಣ ಅಣು ಒಪ್ಪಂದಕ್ಕೆ ಸಂಬಂಧಿಸಿದ 123 ಒಪ್ಪಂದವನ್ನು ಕಾರ್ಯಗತಗೊಳಿಸುವ ಬಗ್ಗೆ ಯಾವುದೇ ಮುಂದಿನ ಕ್ರಮಗಳನ್ನು ಕೈಗೊಳ್ಳಬಾರದೆಂದು ಭಾರತ ಸರ್ಕಾರಕ್ಕೆ ಎಚ್ಚರಿಕೆ ನೀಡಿದಂದಿನಿಂದ ಈ ಒಪ್ಪಂದದ ಬಗ್ಗೆ ಚರ್ಚೆ ಆರಂಭವಾಯಿತು. ಅತಿ ಮೃದು ಮನುಷ್ಯನೆಂದೇ ಭಾರತದ ಮಾಧ್ಯಮ ಹಾಗೂ ಪತ್ರಿಕೆಗಳು ಬಿಂಬಿಸಿರುವ ಪ್ರಧಾನಿ ಮನಮೋಹನ್‌ಸಿಂಗ್ ಈ ಅಣು ಒಪ್ಪಂದವನ್ನೂ ಎಡಪಕ್ಷಗಳು ವಿರೋಧಿಸಿದರೂ ಕೂಡ ಸರ್ಕಾರ ಅದನ್ನು ಕಾರ್ಯಗತಗೊಳಿಸುವುದನ್ನು ಮುಂದುವರಿಸಿಯೇ ತೀರುವುದೆಂದೂ ಎಡಪಕ್ಷಗಳು ಸರ್ಕಾರಕ್ಕೆ ತಮ್ಮ ಬೆಂಬಲವನ್ನು ವಾಪಸ್ ಪಡೆಯುವುದಾದರೆ ಪಡೆಯಲಿ ಎಂದು ಸವಾಲು ಹಾಕಿದರು. ಇದು ಮೊಟ್ಟಮೊದಲಬಾರಿಗೆ ಅಣು ಒಪ್ಪಂದವೊಂದು ಸರ್ಕಾರದ ಅಳಿವು-ಉಳಿವಿಗೆ ಕಾರಣವಾಗುವಷ್ಟು ಮಹತ್ತರ ವಿಷಯ ಎಂಬುದು ಭಾರತದ ಜನ ಮಾನಸದ ಮೇಲೆ ಗುಡುಗಿನಂತೆ ಎರಗಿತು. ಅಂದಿನಿಂದ ಚರ್ಚೆ ದೊಡ್ಡ ವಿವಾದವಾಗಿ ಎಲ್ಲಾ ಮಾಧ್ಯಮ, ಪತ್ರಿಕೆಗಳ ಪ್ರಧಾನ ವಿಷಯವಾಯಿತು. ಸಿಪಿಐ(ಎಂ) ನ ಪಾಲಿಟ್‌ಬ್ಯೂರೋ, ಆಗಸ್ಟ್ 18ರಂದು ನೀಡಿದ ಹೇಳಿಕೆಯಲ್ಲಿ ಅಣು ಒಪ್ಪಂದವನ್ನು ಕಾರ್ಯಗತಗೊಳಿಸುವ ಮುಂದಿನ ಹೆಜ್ಜೆಗಳಾದ ಅಂತರರಾಷ್ಟ್ರೀಯ ಅಣುಶಕ್ತಿ ಮಂಡಳಿ ಹಾಗೂ ಅಣು ಸರಬರಾಜು ದೇಶಗಳೊಡನೆ ಮುಂದಿನ ಮಾತುಕತೆ ಹಾಗೂ ಒಪ್ಪಂದಗಳನ್ನು ನಡೆಸಬಾರದೆಂದೂ ಹಾಗೇನಾದರೂ ಮಾಡಿದರೆ ಸರ್ಕಾರ ಹಾಗೂ ದೇಶಕ್ಕೆ ಗಂಭೀರ ಪರಿಣಾಮ ಉಂಟಾಗುವುದೆಂದು ಘೋಷಿಸಿದ್ದಂತೂ ಸರ್ಕಾರ ನಾಳೆಯೇ ಬಿದ್ದೇ ಹೋಗುತ್ತದೆಂಬಂತೆ ಮಾಧ್ಯಮಗಳು ಪತ್ರಿಕೆಗಳು ಬಿಂಬಿಸಿದವು. ಎಡ ಪಕ್ಷಗಳು ಬೆಂಬಲವನ್ನು ಹಿಂತೆಗೆದುಕೊಳ್ಳುವವರೆಗೆ ಮದುವೆ, ವಿಚ್ಛೇದನ, ಎಂಬೆಲ್ಲಾ ಹರಟೆಯ ಮಾತುಗಳು ಹರಿದಾಡಿದರು. ಕಾಂಗ್ರೆಸ್ ಪಕ್ಷದ 'ತಿರುಳು' (ಕೋರ್‌ಗ್ರಾಫ್) ಹಲವಾರು ಬಾರಿ ಸಭೆ ಸೇರಿತು. ಕಾಂಗ್ರೆಸ್ ಎಡಪಕ್ಷಗಳ ನಡುವೆ, ಎಡಪಕ್ಷಗಳ ಒಳಗೆ ಹಲವಾರು ಸಭೆಗಳ ನಡೆದಿವೆ. ನಡೆಯುತ್ತಲಿವೆ. ಭಾರತ ಒಂದು ರಾಜಕೀಯ ಬಿಕ್ಕಟ್ಟಿನ ನಡುವೆ ಇದೆ.


ಅಪಪ್ರಚಾರ ದಾಳಿ

ಈ ಬಿಕ್ಕಟ್ಟಿನಲ್ಲಿ ಭಾರತದ ಆಳುವ ವರ್ಗ ಸಾಮ್ರಾಜ್ಯಶಾಹಿ ವರ್ಗ ತಮ್ಮ ಹಿಡಿತದಲ್ಲಿರುವ ಟಿ.ವಿ. ವಾಹಿನಿಗಳು, ಪತ್ರಿಕೆಗಳ ಮೂಲಕ ದೊಡ್ಡ ಧಾಳಿಯನ್ನೇ ಆರಂಭಿಸಿವೆ. ಅಣು ಒಪ್ಪಂದದ ಬಗ್ಗೆ ಭಾರತದ ಜನತೆಯನ್ನು ಗೊಂದಲದಲ್ಲಿ ಮುಳುಗಿಸಲು ಅನೇಕ ಅರೆ ಸತ್ಯ ಮತ್ತು ಸುಳ್ಳುಗಳ ಸರಮಾಲೆಯನ್ನೇ ಹರಿಯಬಿಡಲಾಗಿದೆ. ಅಣು ಒಪ್ಪಂದ 123 ಒಪ್ಪಂದ, ಹೈಡ್ ಕಾಯಿದೆ, ಅಣು ಬಾಂಬ್, ಅಣು ಇಂಧನ ಇತ್ಯಾದಿ ಪದಗಳನ್ನು ಜನ ಸಾಮಾನ್ಯರಿಗೆ ಅರ್ಥವಾಗದ ರೀತಿಯಲ್ಲಿ ಎಳೆದಾಡಲಾಗುತ್ತಿದೆ. ಕಮ್ಯುನಿಸ್ಟರ ಮೇಲೆ ಅಪಪ್ರಚಾರದ ಅಲೆಯನ್ನೇ ಹುಟ್ಟುಹಾಕಿವೆ. ಸಿಪಿಐ(ಎಂ)ನ ದೃಷ್ಟಿಕೋನಕ್ಕೆ, ಎಡಪಕ್ಷಗಳ ದೃಷ್ಟಿಕೋನಕ್ಕೆ ಅಲ್ಲೊಮ್ಮೆ ಇಲ್ಲೊಮ್ಮೆ ಸೀಮಿತ



ಅಮೆರಿಕಾ, ಭಾರತಗಳ ನಡುವಿನ ಪರಮಾಣು ಒಪ್ಪಂದಕ್ಕೆ ಯಾಕಿಷ್ಟು ಮಹತ್ವ ಬಂದಿದೆ ಎಂದೇ ಹಲವರಿಗೆ ಅರ್ಥವಾಗುತ್ತಿಲ್ಲ. ಅರ್ಥವಾಗಿರುವ ಹಲವರಿಗೆ ಅದು ಬಹಿರಂಗವಾಗುವುದು, ಚರ್ಚೆಯಾಗುವುದು ಬೇಕಿಲ್ಲ. ದಶಕಗಳ ಕಾಲದ ತನ್ನ ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಗೆ ತದ್ವಿರುದ್ಧವಾಗಿ ಭಾರತ ತನ್ನ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಸಾಮ್ರಾಜ್ಯಶಾಹಿ ಅಮೆರಿಕಕ್ಕೆ ಒಪ್ಪಿಸಿ ಅದರ ಬಾಲಂಗೋಚಿಯನ್ನಾಗಿಸುವ ಅತ್ಯಂತ ಅಪಾಯಕಾರಿ ಷರತ್ತುಗಳನ್ನೊಳಗೊಂಡ ಹೈಡ್ ಕಾಯಿದೆ ಇದೇ ಅಣು ಒಪ್ಪಂದದ ಭಾಗವಾಗಿದೆ. ಇದು ಅಣು ಒಪ್ಪಂದ ಮಾತ್ರವಲ್ಲ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮುಂತಾದ ಹಲವು ಪ್ರಶ್ನೆಗಳನ್ನು ಆವರಿಸುವ ಅಮೆರಿಕದ ದುಷ್ಟ ಷಡ್ಯಂತ್ರವಾಗಿರುವುದರಿಂದಲೇ ಎಡಪಕ್ಷಗಳು ಇದರ ವಿರುದ್ಧ ದೃಢವಾದ ನಿಲುವು ತಳೆದಿವೆ.

ಅವಕಾಶ ನೀಡಿ ಉಳಿದಂತೆ ಅವರ ಬಾಲ ಬಡಿಯುವ ಟಿ.ವಿ. ಚರ್ಚೆಗಳು, ಸಂದರ್ಶನಗಳು, ಜನದನಿಗಳು ಮೂಡಿ ಬರುತ್ತಿವೆ. ಇಂತಹ ಸಂದರ್ಭದಲ್ಲಿ ವಾಸ್ತವವೇನು ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಸಮುದಾಯಕ್ಕೆ ನಿಜವಾದ ಮಾಹಿತಿ ನೀಡಬೇಕಾಗಿದೆ. ಅದಕ್ಕೆ ಸಂಬಂಧಿಸಿ ವಿವಿಧ ಶೀರ್ಷಿಕೆಗಳಲ್ಲಿ ಇಲ್ಲಿ ಹರಡಿಕೊಂಡಿರು ಸಂಗಾತಿಗಳು ಅಣು ಒಪ್ಪಂದ ಕೇವಲ ಅಣು ಶಕ್ತಿಯ



ಅಮೆರಿಕಾದ 'ಆತಂಕ'ಕ್ಕೆ ಕಾರಣವಾಗಿದ್ದ ಭಾರತದ ದೇಶೀಯ ಫಾಸ್ಟ್ ಬ್ರೀಡರ್ ರಿಯಾಕ್ಟರ್ ತಂತ್ರಜ್ಞಾನ ಸ್ಥಾವರ

ಬಗೆಗಿನ ಒಪ್ಪಂದವಲ್ಲ ಅದು ಭಾರತದ ಅಭಿವೃದ್ಧಿಯ ಎಲ್ಲಾ ರಂಗಗಳನ್ನು ಆವರಿಸುವ ಕಬಂಧ ಬಂಧನ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ.

ಭಾರತದ ಸ್ವಾತಂತ್ರ್ಯ ಸಾರ್ವಭೌಮತೆಯ ಮೇಲೆ ಧಾಳಿ ವಿಶ್ವದ ದ್ವೇಷಕ್ಕೆ ಭಾರತ ಗುರಿಯಾಗುವತ್ತ

ಅಣು ಒಪ್ಪಂದ ಕೇವಲ ಅಣು ಒಪ್ಪಂದವಲ್ಲ. ಭಾರತದ ಜನ ಜೀವನದ ಎಲ್ಲ ರಂಗಗಳನ್ನು ಆಕ್ರಮಿಸಿ ಭಾರತದ ಸಾಮಾಜಿಕ ವ್ಯವಸ್ಥೆಯನ್ನೇ ಅಲುಗಾಡಿಸುವ ಸಂಚು ಎಂಬುದು ಅರ್ಥವಾಗಬೇಕಾದರೆ ನರಸಿಂಹರಾವ್ - ಮನಮೋಹನ್‌ಸಿಂಗ್ ಸರ್ಕಾರ 1995ರಲ್ಲಿ ಕಾಲದಲ್ಲಿ ಭಾರತ ವಿದೇಶಾಂಗ ಸಚಿವ ಜಸ್ವಂತ್‌ಸಿಂಗ್ ನಡೆಸಿದ 30ಕ್ಕೂ ಹೆಚ್ಚು ರಹಸ್ಯ ಮಾತುಕತೆಗಳ ಕಾಲದಲ್ಲಿ ರಭಸವಾಗಿ ಮುಂದುವರೆದು ಮನಮೋಹನ್‌ಸಿಂಗ್ ಸರ್ಕಾರದ ಸಮಯದಲ್ಲಿ ಕೂಡಿಬಂದ ಭಾರತ-ಅಮೇರಿಕಾ ರಕ್ಷಣಾ ಒಪ್ಪಂದ ಇವೆಲ್ಲವುಗಳನ್ನು ಪರಿಶೀಲಿಸಬೇಕಾಗುತ್ತದೆ. ಈ ಎಲ್ಲ ವಿವರಗಳಿಗೆ ಹೋಗದೆ ಪ್ರಮುಖವಾದ ಕೆಲವು ಅಂಶಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಲಾಗಿದೆ.



1. ಭಾರತ-ಅಮೇರಿಕಾ ಅಣು ಒಪ್ಪಂದ ಮತ್ತು ಆ ಮೂಲಕ ಅಣುಶಕ್ತಿ ಸ್ಥಾವರಗಳನ್ನು ಸ್ಥಾಪಿಸಲು ಅಣು ಇಂಧನ, ಅಣು ಸ್ಥಾವರದ ಯಂತ್ರಗಳು, ಭಾಗಗಳು ಇವುಗಳನ್ನು ನೀಡುವುದು 2005ರಲ್ಲಿ ಪ್ರಣಬ್ ಮುಖರ್ಜಿ ಭಾರತದಲ್ಲಿ ಎಲ್ಲಿಯೂ ಚರ್ಚಿಸದೆ - ಪತ್ರಿಕೆಗಳಿಗೂ ಗೊತ್ತಾಗದಂತೆ ಗುಟ್ಟಾಗಿ ಸಹಿ ಹಾಕಿದ ಭಾರತ-ಅಮೇರಿಕಾ ರಕ್ಷಣಾ ಒಪ್ಪಂದದಲ್ಲಿ ಅಮೇರಿಕಾದ ಅನುಕರಣೆ ದೇಶವಾಗಲು ಭಾರತದ ವಿದೇಶಾಂಗ ನೀತಿ ಮತ್ತು ರಕ್ಷಣಾ ನೀತಿಗಳನ್ನು ಅಮೇರಿಕಾದ ವಿದೇಶಾಂಗ ಹಾಗೂ ಯುದ್ಧ ನೀತಿಗೆ ಅಧೀನ ಮಾಡಲು ಒಪ್ಪಿಗೆ ಕೊಟ್ಟದ್ದಕ್ಕೆ ಪ್ರತಿಯಾಗಿ ನೀಡಿದ ಕೊಡುಗೆ.

2. ಹೈಡ್ ಕಾಯಿದೆಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದಂತೆ ಭಾರತದ ವಿದೇಶಾಂಗ ನೀತಿ ಅಮೇರಿಕಾದ ವಿದೇಶಾಂಗ ನೀತಿಯ ಜೊತೆಗೂಡಿ ಸಾಗಬೇಕು. ಪ್ರಪಂಚದಲ್ಲೆಲ್ಲಾ ತಮಗೆ ಒಪ್ಪಿಗೆಯಾಗದ ಸರ್ಕಾರಗಳನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ, ಭಯೋತ್ಪಾದನೆಗೆ ನೆರವಾಗುತ್ತಿರುವ ನೆಪದಲ್ಲಿ, ಅಣು ಬಾಂಬ್, ರಾಸಾಯನಿಕ ಶಸ್ತ್ರಗಳನ್ನು ತಯಾರಿಸಲು ಹೊರಟಿವೆ ಎಂಬ ನೆಪದಲ್ಲಿ ಆಫಾನಿಸ್ತಾನ, ಇರಾಕ್‌ನ ಮೇಲೆ ದಾಳಿ ಮಾಡಿದಂತೆ ಕಿತ್ತು ಹಾಕಲು ಹೊರಟಾಗ ಭಾರತ ಅದನ್ನು ಬೆಂಬಲಿಸಬೇಕು. ಇರಾನ್, ಉತ್ತರ ಕೊರಿಯಾ, ವೆನೆಜುವೆಲಾ, ಮೆಕ್ಸಿಕೋಗಳಲ್ಲಿ ಸರ್ಕಾರ ಬದಲಾಯಿಸಲು ಅಮೇರಿಕಾಕ್ಕೆ ಸಹಕರಿಸಬೇಕು. ವಿಶ್ವ ಸಂಸ್ಥೆಯ ಮೂಲಕ ನಿಷೇಧ, ಪ್ರತಿಬಂಧಗಳನ್ನು ಹೇರಲು ಅಮೇರಿಕಾ ಪ್ರಯತ್ನಿಸಿದಾಗ ಭಾರತ ಅಮೇರಿಕಾದ ಪ್ರಸ್ತಾಪಗಳಿಗೆ ಮತ ನೀಡಬೇಕು. ಅಂತರರಾಷ್ಟ್ರೀಯ ಕಾನೂನು, ಒಪ್ಪಂದಗಳನ್ನು, ದೇಶಗಳ ಸಾರ್ವಭೌಮತೆ, ಸ್ವಾತಂತ್ರ್ಯಗಳನ್ನು ಉಲ್ಲಂಘಿಸಲು ಭಾರತ ನೆರವು ನೀಡಬೇಕು.

3. ಭಾರತ-ಅಮೇರಿಕಾ ಸೈನ್ಯಗಳು ಆಗಾಗ್ಗೆ ಜಂಟಿ ಸಮರಾಭ್ಯಾಸ ನಡೆಸಬೇಕು. ಜಂಟಿ ಧಾಳಿ ನಡೆಸಲು ಸನ್ನದ್ಧವಾಗಬೇಕು. ಭಾರತದ ದೇಶಪ್ರೇಮಿ ಮಿಲಿಟರಿ ಅಧಿಕಾರಿಗಳು ಅಮೇರಿಕಾದಲ್ಲಿ ತರಬೇತಿ ಪಡೆಯಬೇಕು. ಭಾರತ ಅಮೇರಿಕಾದಿಂದ ಅಮೇರಿಕಾದ ಖಾಸಗೀ ಕಂಪನಿಗಳಿಗೆ ಅಪಾರ ಲಾಭ ತರುವ ದುಬಾರಿ ಬೆಲೆಯ ಶಸ್ತ್ರಾಸ್ತ್ರ, ವಿಮಾನಗಳನ್ನು ಖರೀದಿಸಬೇಕು. ಭಾರತ ಮತ್ತು ಅಮೇರಿಕಾದ ನಡುವೆ ಶಸ್ತ್ರಾಸ್ತ್ರಗಳ ಸಾಮ್ಯತೆ ಇರಬೇಕು.

4. ಸಾಗರ, ವಾಯು ಹಾಗೂ ಭೂ ಸಂಚಾರ ಮಾರ್ಗಗಳಲ್ಲಿ ಸಾಗುವ ಎಲ್ಲಾ ದೇಶಗಳ ವಾಹನಗಳನ್ನು, ಹಡಗುಗಳನ್ನು ಅದರಲ್ಲಿ ಅಣುಬಾಂಬ್ ಇದೆಯೇ ಇಲ್ಲವೇ ಅದರ ಬಿಡಿ ಭಾಗಗಳು ಇವೆಯೇ ಎಂದು ಪರೀಕ್ಷಿಸಲು ಅವುಗಳನ್ನು ಅಮೇರಿಕಾ ತನಿಖೆ ಮಾಡಬೇಕು. ಇಡೀ ವಿಶ್ವದ ಎಲ್ಲ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸಲು, ಅವುಗಳ ಮೇಲೆ ತನ್ನ ಏಕಾಧಿಕಾರ ಅಮೇರಿಕಾ ಸ್ಥಾಪಿಸಲು ಭಾರತ ಸಹಾಯ ಮಾಡಬೇಕು. ಭಾರತದ ಪೂರ್ವಕ್ಕಿರುವ ಸಾಗರ ಪ್ರದೇಶದಲ್ಲಿ ಹಡಗುಗಳ ತನಿಖೆಯ ಕೆಲಸವನ್ನು ಭಾರತ ವಹಿಸಿಕೊಳ್ಳಬೇಕು. ಅಲ್ಲಿ ಸಿಗುವ ಹಡಗುಗಳ ದೇಶಗಳೆಲ್ಲದರ ದ್ವೇಷವನ್ನು ಭಾರತ ಕಟ್ಟಿಕೊಳ್ಳಬೇಕು. ಅಂತರರಾಷ್ಟ್ರೀಯ ಒಪ್ಪಂದಗಳ ಉಲ್ಲಂಘನೆಯಲ್ಲಿ ಭಾರತ ಭಾಗವಹಿಸಬೇಕು. ಅಮೇರಿಕಾದ ಜೊತೆಯಲ್ಲಿ ಭಾರತವೂ ವಿಶ್ವದ ಅನೇಕ ದೇಶಗಳ, ಅಲ್ಲಿಯ ಜನರ ದ್ವೇಷಕ್ಕೆ ಒಳಗಾಗಬೇಕು.

5. ಅಮೇರಿಕಾದ ಜೊತೆ ಸೇರಿ ಭಾರತ ಮೂರನೇ ದೇಶಗಳ ಮೇಲೆ ಧಾಳಿ ನಡೆಸುವುದಕ್ಕೆ ತೊಡಗಬೇಕು. ಅದಕ್ಕಾಗಿ ಭಾರತ-ಅಮೇರಿಕಾ ಜಂಟಿ ಸಮರಭ್ಯಾಸ ಮತ್ತು ಶಸ್ತ್ರಾಸ್ತ್ರಗಳ ಸಾಮ್ಯತೆಬೇಕು.

6. ಅಮೇರಿಕಾ ಭಾಗಿಯಾಗಿರುವ ಅನೇಕ ರಕ್ಷಣಾ ಒಪ್ಪಂದಗಳ ದೇಶಗಳೊಡನೆ ಭಾರತವೂ ಸೇರಿ ಸಮರಭ್ಯಾಸ ನಡೆಸಬೇಕು. ಈ ಬಂಗಾಳ ಕೊಲ್ಲಿಯಲ್ಲಿ ಭಾರತ-ಅಮೇರಿಕಾ, ಜಪಾನ್, ಆಸ್ಟ್ರೇಲಿಯಾ ದೇಶಗಳ ನಡುವೆ ನಡೆಯುತ್ತಿರುವ 'ಸಮರಾಭ್ಯಾಸ' ದಂತೆ ಅಂದರೆ ಇಡೀ ಪ್ರಪಂಚದ ದ್ವೇಷಗಳಿಸಿರುವ ನ್ಯಾಟೋ ಕೂಟದಂತೆ ಭಾರತವೂ ಅಘೋಷಿತ ರಕ್ಷಣಾ ಕೂಟದ ಭಾಗವಾಗಿ ಸುತ್ತಲಿನ ದೇಶಗಳನ್ನು ಹಿಡಿತದಲ್ಲಿಡಲು ಅಮೇರಿಕಾಕ್ಕೆ ಸಹಕರಿಸಬೇಕು.

ಕೃಷಿ, ಕೈಗಾರಿಕೆ, ವ್ಯಾಪಾರ, ವಿದ್ಯುತ್, ಶಿಕ್ಷಣ, ಕಾನೂನು, ನ್ಯಾಯಾಲಯಗಳು ಅಮೇರಿಕಾದ ಹಿಡಿತಕ್ಕೆ...

ಭಾರತ-ಅಮೇರಿಕಾ ಅಣು ಒಪ್ಪಂದ ಭಾರತದ ಕೃಷಿ, ಕೈಗಾರಿಕೆ ಮೂಲಭೂತ ಸೌಲಭ್ಯ ವ್ಯಾಪಾರ, ಬ್ಯಾಂಕ್ ವ್ಯವಹಾರ, ಭೂಮಿ, ವಿಶೇಷ ಆರ್ಥಿಕ ವಲಯ, ಶಿಕ್ಷಣ, ಕಾನೂನು, ನ್ಯಾಯಾಲಯ ಎಲ್ಲವೂಗಳನ್ನು ಆವರಿಸುವ ಭಾರತ-ಅಮೇರಿಕಾ ಸಮಗ್ರ ಒಪ್ಪಂದದ ಒಂದು ಭಾಗವಾಗಿದೆ.

7. ಕೃಷಿ ಸಂಶೋಧನಾ ಸಂಸ್ಥೆಗಳ ಸಂಶೋಧನಾ ಯೋಜನೆ, ಕೃಷಿ ಶಿಕ್ಷಣದ ಪಠ್ಯ ಕ್ರಮ ಎಲ್ಲವನ್ನೂ ಮಾನ್ಸಾಂಟೋ- ವಾಲ್‌ಮಾರ್ಟ್‌ಗಳೂ ಇರುವ ಸಮಿತಿಯೊಂದು ಪುನರ್ರೂಪಿಸಬೇಕು. ಈ ಕಂಪನಿಗಳು ಭಾರತದ ಕೃಷಿ ವಿಶ್ವ ವಿದ್ಯಾನಿಲಯಗಳ ಜೊತೆ ಸೇರಿ ಸಂಶೋಧನೆ ಮಾಡಲು ನಂತರ ಈ ಸಂಶೋಧನೆಗಳ ಫಲಗಳನ್ನು ಪೇಟೆಂಟ್ ಮೂಲಕ

ವಶಪಡಿಸಿಕೊಳ್ಳಲು ಅವಕಾಶ ನೀಡಬೇಕು.

8. ಜೈವಿಕ ತಂತ್ರಜ್ಞಾನ, ಮತ್ತು ಅದರ ಫಲವಾದ ಮುಂದಿನ ತಲೆಮಾರಿನ ತಳಿಗಳು, ಕೃಷಿ ಪದ್ಧತಿಗಳನ್ನು ಪೇಟೆಂಟ್ ಪಡೆದ ಕಂಪನಿಗಳಿಗೆ ದುಬಾರಿ ಬೆಲೆ ನೀಡಿ ಭಾರತ ರೈತರು ಪಡೆಯಬೇಕು. ಕರಾರು ಕೃಷಿಯ ಮೂಲಕ ಭಾರತದ ಕೃಷಿ, ಆಹಾರ ಭದ್ರತೆ, ಕಾರ್ಪೊರೇಟ್ ಅಥವಾ ಕಂಪನಿ ಕೃಷಿ ಪದ್ಧತಿ ಸ್ಥಾಪಿಸಬೇಕು.

9. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶನೀಡಬೇಕು. ಖಾಸಗಿ ಬ್ಯಾಂಕ್‌ಗಳನ್ನು ವಿದೇಶಿ ಬ್ಯಾಂಕುಗಳು ಕೊಳ್ಳುವುದಕ್ಕೆ ಆಡಳಿತವನ್ನು ಪೂರ್ಣವಾಗಿ ವಶಪಡಿಸಿಕೊಳ್ಳುವುದಕ್ಕೆ ಇರುವ ಅಡ್ಡಿಗಳನ್ನು ಕಾನೂನು ತಿದ್ದುಪಡಿ ಮೂಲಕ ತೆಗೆದುಹಾಕಬೇಕು.

10. ವಿಶ್ವವಿದ್ಯಾಲಯಗಳ ಶಿಕ್ಷಣವನ್ನು, ಐಐಎಂ, ಐಐಟಿ ಬಿಟಿಗಳ ಶಿಕ್ಷಣವನ್ನು ಪುನರ್‌ರಚಿಸಲು ಅಮೇರಿಕಾದ ವಿಶ್ವವಿದ್ಯಾ ನಿಲಯಗಳ ಸಹಕಾರ ಪಡೆಯಬೇಕು. ವಿದೇಶಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಅವಕಾಶ ನೀಡಬೇಕು ಪತ್ರಿಕಾ ಮಾಧ್ಯಮದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಬೇಕು. ಉತ್ತಮ ಪುಸ್ತಕಗಳ ಪ್ರಬಂಧಗಳನ್ನು ಜೆರಾಕ್ಸ್ ಮಾಡಿಕೊಳ್ಳಲು ಅವಕಾಶ ನೀಡಬಾರದು.

11. ವಿದ್ಯುತ್, ಪೆಟ್ರೋಲಿಯಂ ವಸ್ತುಗಳಲ್ಲಿ ಸಹಾಯಧನ, ಕೆಲವರಿಗೆ ಕಡಿಮೆ ದರ ಇತ್ಯಾದಿಗಳನ್ನು ಕಿತ್ತು ಹಾಕಬೇಕು. ಪೂರ್ಣವಾಗಿ ಮಾರುಕಟ್ಟೆ ವ್ಯವಸ್ಥೆಯನ್ನು ರೂಪಿಸಬೇಕು. ರಸ್ತೆ, ಸೇತುವೆ ಇತ್ಯಾದಿ ಮೂಲಭೂತ ವ್ಯವಸ್ಥೆಗಳಲ್ಲಿಯೂ ಮಾರುಕಟ್ಟೆ ದರಗಳಿಗೆ ಅವಕಾಶ ನೀಡಬೇಕು. ಒಟ್ಟಿನಲ್ಲಿ ರಸ್ತೆ, ರೈಲು, ಪೆಟ್ರೋಲ್, ಗ್ಯಾಸ್, ಸೀಮೆಎಣ್ಣೆ, ವಿದ್ಯುತ್ ದರಗಳು ಏರಿಸಲು ಖಾಸಗಿ ಕಂಪನಿಗಳಿಗೆ ಮುಕ್ತ ಅವಕಾಶವಿರಬೇಕು. ಬಹುರಾಷ್ಟ್ರೀಯ ಕಂಪನಿಗಳು ಮುಕ್ತವಾಗಿ ವ್ಯವಹಾರ ಮಾಡಲು, ಅವರು ಹೂಡುವ ಬಂಡವಾಳಕ್ಕೆ ಸ್ವಾತಂತ್ರ್ಯ ನೀಡಲು ಭಾರತದ ಕಂಪನಿ ಕಾನೂನು, ಬ್ಯಾಂಕ್ ಕಾನೂನು, ಪೇಟೆಂಟ್ ಕಾನೂನು, ಕಾಮಿನರ್ ಕಾನೂನು ಇತ್ಯಾದಿಗಳ ತಿದ್ದುಪಡಿ ಮಾಡಬೇಕು. ವಿದೇಶಿ ಬಂಡವಾಳದ ಹೂಡಿಕೆಗಳಿಗಿರುವ ಮೇಲ್‌ಮಿತಿಗಳನ್ನು ತೆಗೆದು ಹಾಕಬೇಕು, ಸಡಲಿಸಬೇಕು.

12. ಪೇಟೆಂಟ್ ಬೌದ್ಧಿಕ ಹಕ್ಕುಗಳಿಗೆ ಸಂಬಂಧಿಸಿ ವಿಶೇಷ ನ್ಯಾಯಾಲಯ ವ್ಯವಸ್ಥೆ ರೂಪಿಸಬೇಕು. ಭೂಪಾಲ್ ಅನಿಲ ದುರಂತಗಳಂತಹ ಪ್ರಕರಣಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹಿತಕ್ಕೆ ಹಾನಿಯಾಗುವ ತೀರ್ಪು ನೀಡಿದಂತೆ ವ್ಯವಸ್ಥೆಯಾಗಬೇಕು. ಒಪ್ಪಂದಗಳು, ಬಂಡವಾಳಹೂಡಿಕೆಗಳು ಇವುಗಳ ಬಗ್ಗೆ ಬೇರೆಯೇ ಸಂಧಾನ ನ್ಯಾಯ ಮಂಡಳಿಗಳ ವ್ಯವಸ್ಥೆಯಾಗಬೇಕು. ಒಟ್ಟಿನಲ್ಲಿ ಕಾನೂನು ನ್ಯಾಯಾಲಯ ವ್ಯವಸ್ಥೆಯನ್ನೂ ಬದಲಾಯಿಸಬೇಕು.

13. ಇವು ಅಮೇರಿಕಾ ಭಾರತಗಳ ಕೈಗಾರಿಕಾ ಮುಖ್ಯಸ್ಥರ ಸಮಿತಿಯೊಂದನ್ನು ರೂಪಿಸಿ ಬಂದ ಶಿಫಾರಸ್ಸುಗಳು. ಈ ಶಿಫಾರಸ್ಸುಗಳನ್ನು ಜಾರಿ ಮಾಡಲು ಭಾರತದ ಯೋಜನಾ ಮಂಡಳಿ ಕೂಡಲೇ 24 ಸಮಿತಿಗಳನ್ನು ರಚಿಸಿ ಸರ್ಕಾರಕ್ಕೆ ವರದಿಗಳನ್ನು ರೂಪಿಸಿವೆ.

ಕೈಗಾರಿಕಾ ಮುಖ್ಯಸ್ಥರ ಸಮಿತಿಯಲ್ಲಿ ರತನ್‌ಟಾಟಾ, ಕಿರಣ್ ಮುಜುಂದಾರ್, ನಂದನ್ ನಿಲೇಕಣಿಯೂ ಇದ್ದಾರೆ. ಭಾರತ ಸರ್ಕಾರ, ಕಾಂಗ್ರೆಸ್ ಮುಖ್ಯಸ್ಥರು ಇದು ಕೇವಲ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದ್ದು ಎನ್ನುತ್ತಿರುವಾಗಲೇ ರತನ್‌ಟಾಟಾ, ನಿಲೇಕಣಿಗಳು ಅಷ್ಟೇ. ಈ ಒಪ್ಪಂದ ಮುರಿದು ಬಿದ್ದರೆ ಭಾರತಕ್ಕೆ ಅಮೇರಿಕಾದ ಬಂಡವಾಳ ಹರಿದು ಬರುವುದಕ್ಕೆ ಭಾರತದ ಕೈಗಾರಿಕೆಗಳಿಗೆ ಹಾನಿ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಅದು ಸಿಎನ್‌ಎನ್ ಎಂಬ ಅಮೇರಿಕಾದ ಮರಿ ಟಿ.ವಿ. ವಾಹಿನಿಯಲ್ಲಿ.

ಪರಮಾಣು ಒಪ್ಪಂದದ ಕುರಿತು ಹಲವು ಗೊಂದಲಗಳನ್ನು ಮೂಡಿಸಲಾಗಿದೆ. ವಾಸ್ತವವನ್ನು ಮರೆಮಾಚುವ ಹಲವು ಸಂಚುಗಳು ಇದರಲ್ಲಿವೆ. ಈ ಸಂಬಂಧದ ಅನುಮಾನಗಳಿಗೆ ಉತ್ತರ ಇಲ್ಲಿದೆ

123 ಪರಮಾಣು ಒಪ್ಪಂದ ಕೆಲವು ಪ್ರಶ್ನೆಗಳು



ಪ್ರಶ್ನೆ: 123 ಒಪ್ಪಂದ ಭಾರತದ ಪರಮಾಣು ಇಂಧನ ಪೂರೈಕೆ ಭದ್ರತೆ ಒದಗಿಸುತ್ತದೆ. ಅಲ್ಲದೆ ಅದಕ್ಕೆ ಸಂಬಂಧ ಪಟ್ಟ ಆಧುನಿಕ ತಂತ್ರಜ್ಞಾನ ಒದಗಿಸುತ್ತದೆ. ಮತ್ತು ಆ ಮೂಲಕ ವಿದ್ಯುತ್ ಶಕ್ತಿ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಒಪ್ಪಂದ ವಿರೋಧಿಸುವುದು ಬೆಳವಣಿಗೆ-ವಿರೋಧಿ ನೀತಿ ಅಲ್ಲವೆ ?

ಉತ್ತರ: ವಿದ್ಯುತ್ ಶಕ್ತಿ ಉತ್ಪಾದನೆಯಲ್ಲಿ ಪರಮಾಣು ಇಂಧನ ಆಧಾರಿತ ಉತ್ಪಾದನೆಯ ಪ್ರಮಾಣ ಬಹಳ ಕಡಿಮೆ - ಸುಮಾರು ಶೇ. 2.5. ಎಲ್ಲಾ ಸಾಧ್ಯತೆಗಳನ್ನು ಬಳಸಿದರೂ ಅದು ಶೇ. 7 (2015 ರ ವರಗೆ) ದಾಟುವ ಸಾಧ್ಯತೆ ಕಡಿಮೆ. ಅಲ್ಲದೆ ಇದು ಇತರ ವಿಧಾನ (ಜಲವಿದ್ಯುತ್, ಕಲ್ಲಿದ್ದಲು ಆಧಾರಿತ ಥರ್ಮಲ್) ಗಳಿಗೆ ಹೋಲಿಸಿದರೆ ಪರಮಾಣು ಇಂಧನ ಆಧಾರಿತ ವಿದ್ಯುತ್ ಶಕ್ತಿ ಉತ್ಪಾದನೆಯು ಅತಿ ದುಬಾರಿ ವಿಧಾನ.

ವಿದ್ಯುತ್ ಉತ್ಪಾದನೆಯ ವಿಧಾನಗಳ ವೈವಿಧ್ಯತೆ ಉಳಿಸಿಕೊಳ್ಳಬೇಕೆಂದು ಬಿಟ್ಟರೆ, ಇದಕ್ಕೆ ಒಟ್ಟಾರೆ ಬೆಳವಣಿಗೆ ದೃಷ್ಟಿಯಿಂದ ಹೆಚ್ಚಿನ ಆದ್ಯತೆ ಬೇಕಾಗಿಲ್ಲ.

ಪರಮಾಣು ಇಂಧನದ ಭದ್ರತೆ, ತಂತ್ರಜ್ಞಾನದ ಅಭಾವ ಇರುವ ತೊಡಕುಗಳು. ಇದನ್ನು 123 ಒಪ್ಪಂದ ಗಮನಾರ್ಹ ರೀತಿಯಲ್ಲಿ ನಿವಾರಿಸುವುದಿಲ್ಲ. ನಿರಂತರ ಇಂಧನ ಪೂರೈಕೆಯ ಭದ್ರತೆ ಬಹು ದೂರದ ಕನಸಿನ ಮಾತು. ನಿಗದಿತ ಸಣ್ಣ ಅವಧಿಯ (ಉದಾ: 1-2 ವರ್ಷಗಳು) ಗ್ಯಾರಂಟಿಯನ್ನೂ ಕೊಡುವುದಿಲ್ಲ. 123 ಒಪ್ಪಂದವನ್ನು ಹೈಡ್ ಕಾಯಿದೆ ಪ್ರಕಾರ ಯಾವಾಗ ಬೇಕಾದರೂ ರದ್ದು ಮಾಡಬಹುದು. ಒಪ್ಪಂದವನ್ನು ಯಾವುದೇ ರೀತಿಯಲ್ಲಿ ಭಾರತ ಉಲ್ಲಂಘಿಸದಿದ್ದರೂ, ಭಾರತ ತೆಗೆದುಕೊಳ್ಳುವ ವಿದೇಶ ನೀತಿ ನಿಲುವುಗಳ ಆಧಾರದ ಮೇಲೆ ಅಮೆರಿಕ ರದ್ದು ಮಾಡಬಹುದು. ಇಂತಹ ಸಂದರ್ಭದಲ್ಲಿ 45 ದೇಶಗಳ ಪರಮಾಣು ಪೂರೈಕೆದಾರರ ಗುಂಪಿನಿಂದಲೂ ಪೂರೈಕೆ ಸಾಧ್ಯ. ಇದಕ್ಕೆ ಒಪ್ಪಂದ ಅನುವು ಮಾಡಿಕೊಡುತ್ತದೆ ಎಂಬ ಸರಕಾರದ ಹೇಳಿಕೆ ಸಹ ಸತ್ಯಕ್ಕೆ ದೂರವಾದದ್ದು.

ಪುನಃ ಅಮೆರಿಕ 123 ಒಪ್ಪಂದ ರದ್ದು ಮಾಡಿದರೆ, ಹೈಡ್ ಕಾಯಿದೆ ಪ್ರಕಾರ ಇತರ ಧೇಶಗಳ ಮೇಲೂ ಅದೇ ರೀತಿ ಮಾಡುವಂತೆ ಒತ್ತಡ ಹೇರುವ ಅಧಿಕಾರ ಹೊಂದಿದೆ.

ಪರಮಾಣು ಇಂಧನದ 'ಪೂರ್ಣ ಜೀವನಾವಧಿ' ಯ ತಂತ್ರಜ್ಞಾನವನ್ನು ಭಾರತ ಪಡೆಯಲು ಸಾಧ್ಯವಾಗುತ್ತದೆ ಎಂಬ ಸರಕಾರದ ಭರವಸೆ ಹುಸಿಯಾಗಿದೆ. ಪರಮಾಣು ಇಂಧನದ ಭದ್ರತೆಗೆ ಪೂರಕವಾಗಬಹುದಾದ - 'ಶ್ರೀಮಂತೀಕರಣ', ಪುನಃ ಸಂಸ್ಕರಣ, 'ಫಾಸ್ಟ್-ಬ್ರೀಡರ್' ತಂತ್ರಜ್ಞಾನಗಳು ಈ ಒಪ್ಪಂದದ ಅಳವಿಗೆ ಬಂದಿಲ್ಲ. ಅಂದರೆ ಅದು ಭಾರತಕ್ಕೆ ಲಭ್ಯವಿರುವುದಿಲ್ಲ. ಈ ಎಲ್ಲಾ ಅಮೆರಿಕದ 'ಉಭಯ-ಬಳಕೆಯ' (ಅಂದರೆ ನಾಗರಿಕ ಮತ್ತು ಮಿಲಿಟರಿ ಎರಡೂ ಬಳಕೆಯ ಸಾಧ್ಯತೆ ಇರುವ) ತಂತ್ರಜ್ಞಾನದ ಅಳವಿಗೆ ಸಹ ಬರುವುದರಿಂದ ಅವುಗಳು ಭಾರತಕ್ಕೆ ಲಭ್ಯವಿರುವುದಿಲ್ಲ.



ಸಿಪಿಐ(ಎಂ) ಪ್ರ.ಕಾರ್ಯದರ್ಶಿ ಪ್ರಕಾಶ್ ಕಾರಟ್, ಸಿಪಿಐ ನಾಯಕ ಗುರುದಾಸ್ ಗುಪ್ತ, ಪ್ರಧಾನ ಕಾರ್ಯದರ್ಶಿ ಬರ್ದನ್ ಸಮಾಲೋಚನೆಯಲ್ಲಿ

ಹೀಗೆ 123 ಒಪ್ಪಂದ ಯಾವುದೇ ರೀತಿಯಲ್ಲಿ ಭಾರತದ ಬೆಳವಣಿಗೆ ಹಿತಾಸಕ್ತಿಗೆ ಪರವಾಗಿಲ್ಲ. ಬದಲಾಗಿ ಭಾರತ ಒಪ್ಪಂದಕ್ಕೆ ಬದ್ಧವಾದರೆ ದೇಶದ ಶಕ್ತಿಯ ವಿವಿಧ ಮೂಲಗಳ ಪೂರೈಕೆ ಭದ್ರತೆಗೆ ಧಕ್ಕೆ ಬರುವ ಸಾಧ್ಯತೆ ಇದೆ. ಇರಾನ್, ರಶ್ಯಾ ಜತೆ ಪೈಪ್ ಲೈನ್ ಮೂಲಕ ಪ್ರಾಕೃತಿಕ ಅನಿಲ ಪೂರೈಕೆಗೆ ಒಪ್ಪಂದ ಶಕ್ತಿಯ ಮೂಲಗಳ ಭದ್ರತೆ ಹೆಚ್ಚಿಸಬಲ್ಲುದು. ಈಗಾಗಲೇ ಅಮೆರಿಕ ಅದರ ಸ್ವ-ಹಿತಾಸಕ್ತಿ ಕಾರಣಗಳಿಗಾಗಿ, ಭಾರತ ಪೈಪ್ ಲೈನ್ ಒಪ್ಪಂದಕ್ಕೆ ಬರದಂತೆ ಒತ್ತಡ ಹಾಕುತ್ತಿದೆ. 123 ಒಪ್ಪಂದವಾದರೆ, ಈ ಪೈಪ್ ಲೈನ್ ಒಪ್ಪಂದ ಅಸಾಧ್ಯವಾಗುತ್ತದೆ.

123 ಒಪ್ಪಂದ ವಿರೋಧಿಸುವುದು ಭಾರತದ ಬೆಳವಣಿಗೆಗೆ ಅಗತ್ಯ ನೀತಿ ರೂಪಿಸುವ ಸಾರ್ವಭೌಮತೆ ಉಳಿಸಿಕೊಳ್ಳಲು. 123 ಒಪ್ಪಂದ ಬೆಳವಣಿಗೆ-ವಿರೋಧಿ ಎಂದು ಹೇಳಬಹುದು.

ಪ್ರಶ್ನೆ: 123 ಒಪ್ಪಂದಕ್ಕೆ ವಿರೋಧ ಎಡಪಕ್ಷಗಳ ಚೀನಾ-ಪರ ಕಾರ್ಯಕ್ರಮ. ಆದಕ್ಕೆ ಧೇಶದ ಹಿತಾಸಕ್ತಿ ಕಾಪಾಡುವ ಯಾವುದೇ ಉದ್ದೇಶಗಳಿಲ್ಲ. ಅಲ್ಲವೆ ?

ಉತ್ತರ: ಮೇಲೆ ವಿವರಿಸಿದ ಹಾಗೆ 123 ಒಪ್ಪಂದ ದೇಶದ ಹಿತಾಸಕ್ತಿ ಕಾಪಾಡುವ ಯಾವುದೇ ಅಂಶಗಳನ್ನು ಹೊಂದಿಲ್ಲ. ಬದಲಾಗಿ ಭಾರತದ ಭದ್ರತೆಗೆ ಅಪಾಯ ಒಡ್ಡುವ ಉದ್ದೇಶ ಹೊಂದಿದೆ. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅಣು ಶಸ್ತ್ರಾಸ್ತ್ರಗಳ ತಯಾರಿಕೆ, ಬಳಕೆಗೆ ವಿರೋಧವಾಗಿವೆ. ಸಾರ್ವತ್ರಿಕ ಅಣು ಶಸ್ತ್ರಾಸ್ತ್ರಗಳ ನಾಶ-ನಿಷೇಧದ ನೀತಿಗೆ ಬದ್ಧವಾಗಿವೆ. ಆದರೆ ಅಮೆರಿಕ ಮತ್ತು ಅದರ ಮಿತ್ರ ದೇಶಗಳು ಇತರ ದೇಶಗಳ ಅಣು ಶಸ್ತ್ರಾಸ್ತ್ರಗಳ ತಯಾರಿಕೆ ಮೇಲೆ ಮಾತ್ರ ನಿಷೇಧ ಹೇರಿ, ತಮ್ಮ ಅಧಿಪತ್ಯ ಶಾಶ್ವತಗೊಳ್ಳಿಸುವ ಹುನ್ನಾರ ಮಾಡುತ್ತಿವೆ. 123 ಒಪ್ಪಂದ ಇದರ ಭಾಗ. ಇಂತಹ ಸಂದರ್ಭದಲ್ಲಿ ಅಣು ಶಸ್ತ್ರಾಸ್ತ್ರಗಳ ತಯಾರಿಕೆಯ ಆಯ್ಕೆ ಉಳಿಸಿಕೊಳ್ಳುವುದು ದೇಶದ ಭದ್ರತೆಗೆ ಅಗತ್ಯ. 123 ಒಪ್ಪಂದಕ್ಕೆ ಬಧ್ಧವಾಗುವುದು ಎಂದರೆ ಈ ಆಯ್ಕೆಯನ್ನು ಅಡವಿಟ್ಟಂತೆ.

ಅಮೆರಿಕ ಸಾಮ್ರಾಜ್ಯಶಾಹಿ-ಪರ ಮತ್ತು ಭಾರತದ ಆಳುವ ವರ್ಗಗಳಿಗೆ ಚೀನಾ ಮೊದಲ ಶತ್ರು. ಅಮೆರಿಕ ಭಾರತದ ಪರಮ ಮಿತ್ರ. ಆದರೆ ಇದು ನಿಜವಲ್ಲ ಅಂತ ಆಧುನಿಕ ಭಾರತದ ಚರಿತ್ರೆ ಗೊತ್ತಿದ್ದವರಿಗೆ ತಿಳಿದಿದೆ. **ಅಮೆರಿಕ ಯಾವತ್ತೂ ವಿಶ್ವಸಂಸ್ಥೆಯಲ್ಲಾಗಲಿ, ಇತರ ಅಂತರ್‌ರಾಷ್ಟ್ರೀಯ ಸಂಘಟನೆಗಳಲ್ಲಾಗಲಿ ಭಾರತದ ನೀತಿಗಳಿಗೆ ಬೆಂಬಲ ನೀಡಿಲ್ಲ. ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ ಪಾಕಿಸ್ತಾನದ ಪರವಾಗಿ ಅಣು ದಾಳಿ ಮಾಡುವ ವರೆಗೂ ಹೋಗಿತ್ತು ಅಮೆರಿಕದ ಮಿತ್ರತ್ವ ! ಹಲವು ಬಾರಿ ಭಾರತದ ಕೈ ತಿರುಚಿದೆ. ಬೆದರಿಕೆ ಹಾಕಿದೆ.** ಅಮೆರಿಕ್ಕೂ ಅದರ ಏಕಮಾತ್ರ ಸೂಪರ್ ಪವರ್ ಪಟ್ಟ ಉಳಿಸಿಕೊಳ್ಳುವ ಪ್ರಯತ್ನದಲ್ಲಿ, ಚೀನಾವೇ ಪರಮ ಶತ್ರು. ಭಾರತವನ್ನು ಚೀನಾದ ವಿರುದ್ಧ ಬಳಸುವುದು ಅಮೆರಿಕದ ಉದ್ದೇಶ. 123 ಒಪ್ಪಂದದ ಮೂಲಕ ಭಾರತವನ್ನು ಮಣಿಸಿ ಚೀನಾದ ವಿರುದ್ಧ ಬಳಸುವುದು ಅದರ ಹವಣಿಕೆ. ಆದ್ದರಿಂದ 123 ಒಪ್ಪಂದದ ವಿರೋಧಿಗಳು ಅವರಿಗೆ ಚೀನಾ-ಪರವಾಗಿ ಕಂಡರೆ ಆಶ್ಚರ್ಯವಿಲ್ಲ.

ತಮಾಷೆಯ ವಿಷಯವೆಂದರೆ, ಎಡ ಪಕ್ಷಗಳು ಪೊಖ್ರಾನ್-2 (ಅಣು ಅಸ್ತ್ರ ತಯಾರಿಕೆ) ವಿರೋಧಿಸಿದಾಗಲೂ ಇದೇ ಆಪಾದನೆ ಬಂದಿತ್ತು. ಈಗ 123 ಒಪ್ಪಂದಕ್ಕೆ ಬಿಜೆಪಿ ಸೇರಿದಂತೆ ಇತರ ಹಲವು ಪಕ್ಷಗಳೂ ವಿರೋಧ ವ್ಯಕ್ತಪಡಿಸಿವೆ. ಆದರೆ ಅವು ಚೀನಾ-ಪರ ಎಂದು ಆಪಾದಿಸಲಾಗಿಲ್ಲ. ಇದರ ಅರ್ಥ ಏನು ? ಸಾಮ್ರಾಜ್ಯಶಾಹಿ-ಪರ ಮತ್ತು



ಜನಶಕ್ತಿ ಕನ್ನಡ ವಾರಪತ್ರಿಕೆ ಸೆಪ್ಟೆಂಬರ್ 2, 2007



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



'ಸರಕಾರ ಬಡವರದಲ್ಲ ತಿಳ್ಕೊಳ್ರಿ ಅಮೇರಿಕಾ ಮಾತ ಕೇಳ್ತದ. ಬಡುರ ಶಕ್ತಿ ಹೀರ್ತದ. ಸಾವ್ಕಾರರೆಲ್ಲ ಜಗತ್ತಿನಾಗ ಒಂದಾಗಿದ್ದಕ ನಮ್ಮಂಥ ಗರೀಬ ಮಂದಿಗೆ ಕಾರ್ಡಿಲ್ಲ, ನೌಕರಿಯಿಲ್ಲ. ಈ ಸರಕಾರದ ಚಾಲ್ ತಿಳಿದು ನಾವನೂ ಗಟ್ಟಿ ಸಂಘ ಕಟ್ಟಿ ಎದರ್ಸಬೇಕಾಕ್ತದ'. ಕಗ್ಗ ಹಳ್ಳೀಯ ಗಮಾರಳಂತೆ ಕಾಣುವ ಅಜ್ಜಿಯೊಬ್ಬಳು "ಬದುಕುವ ಹಕ್ಕಿಗಾಗಿ ಜಾಗತೀಕರಣಕ್ಕೊಂದು ಸವಾಲು" ಘೋಷಣೆಗೆ ವ್ಯಾಖ್ಯೆ ಬರೆಯುತ್ತಿದ್ದಳು.

ಬೆಳಕ ಬಾವುಟವೆತ್ತಿ

ಥಳ ಥಳ ಹೊಳೆದ ಆಕಾಶದಂಗಳದಲ್ಲಿ ಮೋಡಗಳು ಮುಚ್ಚಾಟವಾಡುತ್ತಿದ್ದವು. ಮೋಡ ಕರಗಿ ಮಳೆ ಹನಿದು ಮೆರವಣಿಗೆಗೆ ತೊಂದರೆ ಕೊಡದಿರಿ ಎಂದು ಎಚ್ಚರಿಸುವಂತೆ ಆರು ಬಣ್ಣಬಣ್ಣದ ಛತ್ರಿಗಳು, ಆರು ಶ್ವೇತ ಬಾವುಟಗಳು ಮುಗಿಲೆತ್ತರಕ್ಕೆ ತಲೆಯೆತ್ತಿ ಸಾಗುತ್ತಿದ್ದವು. ಬೀದರಿನ ಕೆಂಪು ನೆಲದ ಮೇಲೆ ಸಾವಿರಾರು ಹೆಂಗಸರ ಪಾದಗಳು ಸ್ವಾಭಿಮಾನದ ಛಾಪು ಮೂಡಿಸುತ್ತಿದ್ದವು. 180 ಗ್ರಾಮಗಳಿಂದ ಬಂದ ಅನಕ್ಷರಸ್ಥ, ಅಕ್ಷರಸ್ಥ, ನೌಕರಸ್ಥ (ದುಡಿಮೆಗಾರ) ಮಹಿಳೆಯರ ಮೆರವಣಿಗೆಯ ಸಾಲು ಸ್ವಯಂ ಶಿಸ್ತಿಗೆ ಹೇಳಿ ಮಾಡಿಸಿದಂತಿತ್ತು. "ಅಪಮಾನದ ವರದಕ್ಷಿಣೆ ಬೇಡ ಸ್ವಾಭಿಮಾನದ ಆಸ್ತಿ ಕೊಡಿ" ಘೋಷಣೆಗಳು ಪಾಳೇಗಾರಿ ಕೋಟೆಗೆ ಅಪ್ಪಳಿಸಿ ಅನುರಣಗೊಳ್ಳುತ್ತಿದ್ದವು. ಬೀದರಿನ ನೆಲಕ್ಕೆಲ್ಲ ಹಕ್ಕುಗಳ ಬರವಣಿಗೆ ಬರೆದು ಗಣೇಶ ಮೈದಾನದಲ್ಲಿ ಮಹಿಳೆಯರು ಸಮಾವೇಶಗೊಂಡು ಇನ್ನೇನು ಬಹಿರಂಗ ಸಭೆ ಮೊದಲುಗೊಂಡು "ನಾವು ಬೆವರನ್ನು ಸುರಿಸಿ ದುಡಿಯುವ ಜನ. ನಮ್ಮ ಬೆವರಿನ ಪಾಲನು ಕೇಳುವೆವು" ಎಂಬ ಕ್ರಾಂತಿಗೀತೆ ಎಲ್ಲರ ಎದೆಯಲ್ಲಿ ಕ್ರಾಂತಿಯ, ಸ್ಫೂರ್ತಿಯ ಸಿಂಚನಗೈದು, ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಸಿದ್ಧರಾಮ ಶರಣ ಬೆಲ್ದಾಳರು ಎಲ್ಲರನ್ನು ಸ್ವಾಗತಿಸಲು ಎದ್ದುನಿಂತ ಕೂಡಲೇ ಮಳೆ ಧೋಗರೆಯತೊಡಗಿತು. ಬಂದ ಹೆಂಗಳೆಯರು ಮಳೆಗೆ ಹೆದರಿ ಚೆಲ್ಲಾಪಿಲ್ಲಿಯಾಗಬಹುದು ಎಂದುಕೊಂಡಿದ್ದೆವು. ಹಾಗಾಗಲಿಲ್ಲ. "ಹೊಲ್ದಾಗ ಹುಲ್ಲ್ನ ಕಿತ್ತಾಗ ಮಳಿ ಬಂದಿಲ್ಲೇನೂ? ತೋಯ್ಸಿಕೊಂಡೆ ಕೆಲ್ಸ ಮಾಡಿಲ್ಲೇನು? ಇದು ನಮ್ಮ ಸಭಾ ಆದಾ, ಕುಂದರ್ರೇ" ಅಂತ ಹೆಣ್ಣುಮಕ್ಕಳು ತಲೆಗೆ ಸೆರಗೆಳೆದು ಮಾತು ಆಲಿಸತೊಡಗಿದರು. ಕೆಲವರು ಪ್ಲಾಸ್ಟಿಕ್ ಹೊದಿಕೆಗೆ ತಲೆ ಸೇರಿಸಿ ಸಭೆಗೆ ಕಿವಿಯಾದರು. ಸಾವಿರಾರು ಹೆಂಗಸರು ಮಳೆಗೆ ಮೈಯೊಡ್ಡಿ ತೊಯ್ದು ತೊಪ್ಪೆಯಾಗುವಾಗ ವೇದಿಕೆ ಮೇಲಿರುವವರೂ ಕೆಳಗಿಳಿದು ಎಲ್ಲರೊಗಳಗೊಂದಾದರು. ಬಿಟ್ಟುಬಿಟ್ಟು ಹನಿವ ಮಳೆ, ನೆಮ್ಮದಿ ಬದುಕು ಕಟ್ಟಿಕೊಳ್ಳಲು ನಡೆಸಬೇಕಾದ ಸಂಘರ್ಷದ ಕರೆ ಹೀಗೆ ಈ ಜುಗಲ್ ಬಂದಿಯಲ್ಲಿ ಅಭೂತಪೂರ್ವ ತೆರದಿ ಬಹಿರಂಗ ಸಭೆ ಯಶಸ್ವಿಗೊಂಡಿತು.

ಪ್ರತಿನಿಧಿ ಅಧಿವೇಶನದ ಅಧ್ಯಕ್ಷೀಯ ಮಂಡಳಿಯಲ್ಲಿ ಕೂತಾಗ ಮೆರವಣಿಗೆ, ಬಹಿರಂಗ ಸಭೆ, ಹೆಂಗಸರ ಸ್ಥೈರ್ಯದ ಘೋಷಣೆಗಳ ಶಬ್ದಗಳು ಮನಪಟಲದಲ್ಲಿ ಸರಿದು ಕಣ್ಣ ಕೊನೆಯಲ್ಲಿ ಖುಷಿಯ ಹನಿ ಮುತ್ತುಗಟ್ಟಿ ಹೊಳೆಯುತ್ತಿತ್ತು. ಇನ್ನೇನು ರಾಜ್ಯದಾದ್ಯಂತ ನಾಯಕತ್ವ ಕೊಡಬೇಕಾದ ಪ್ರತಿನಿಧಿಗಳು ವರದಿ ಮೇಲೆ ಮಾತಾಡಬೇಕು. ನಾನು ಕೆಲಸಗಳ ಒತ್ತಡದಲ್ಲೂ ಎಲ್ಲರ ಮಾತುಗಳನ್ನು ಎದೆಯೊಳಗಿಸಿಕೊಳ್ಳಲು ಹೆಣಗುತ್ತಿದ್ದೆ.

ವರದಿಯ ಮೇಲೆ ಮಾತಾಡಲು ಒಬ್ಬೊಬ್ಬರೆ ವೇದಿಕೆ ಹತ್ತಿಬರುತ್ತಿದ್ದರು. ನಡೆದು ಬರುವವರ ಹೆಜ್ಜೆಯ ಗತ್ತಿನೊಳಗೂ ಅನಿಸಿಕೆಗಳು ಪ್ರತಿಫಲನಗೊಳ್ಳುತ್ತಿದ್ದವು. ಅಷ್ಟರಲ್ಲಿಯೇ ಇಳಿವಯಸ್ಸಿನ ಸಾಧಾರಣ ಸೀರೆ ಕಣದ ಕುಬ್ಬಸ ತೊಟ್ಟ - ಒಂದು ನೋಟದಲ್ಲೇ ಕಗ್ಗ ಹಳ್ಳೀಯ ಗಮಾರನಂತೆ ಕಾಣುವ ಅಜ್ಜಿಯೊಬ್ಬಳು ವೇದಿಕೆಯತ್ತ ನಡೆದುಬಂದಳು. ಓಹ್, ಇನ್ನೇನು "ರೇಷನ್ ಕಾರ್ಡ್ ಕೊಡಸ್ರೀ ಮನಿ ಇಲ್ಲ" ಅಂತೆಲ್ಲ ವೈಯಕ್ತಿಕ ನೆಲೆಯಲ್ಲಿ ಅಲವತ್ತುಕೊಳ್ಳಬಹುದೆಂದು ಭಾವಿಸಿದೆ. ಅವಳು ಎರಡು ಕೈಯೆತ್ತಿ "ನಮಸ್ಕಾರರ್ರೀ" ಅಂದಳು. ಆನಂತರ ಕಂಚಿನ ಕಂಠದಿಂದ ಎತ್ತರಿಸಿ ಮಾತಾಡತೊಡಗಿದಳು. ಸರಕಾರ ಬಡವರದಲ್ಲ ತಿಳ್ಕೊಳ್ರಿ ಅಮೇರಿಕಾ ಮಾತ ಕೇಳ್ತದ. ಬಡುರ ಶಕ್ತಿ ಹೀರ್ತದ. ಸಾವ್ಕಾರರೆಲ್ಲ ಜಗತ್ತಿನಾಗ ಒಂದಾಗಿದ್ದಕ ನಮ್ಮಂಥ ಗರೀಬ ಮಂದಿಗೆ ಕಾರ್ಡಿಲ್ಲ, ನೌಕರಿಯಿಲ್ಲ. ಈ ಸರಕಾರದ ಚಾಲ್ ತಿಳಿದು ನಾವನೂ ಗಟ್ಟಿ ಸಂಘ ಕಟ್ಟಿ ಎದರ್ಸಬೇಕಾಕ್ತದ. ಇಲ್ಲಂದ್ರ ಬಡವ್ರಿಗೆ ಹೊಸಕಿ ಹಾಕಲಾಕ ಪೊಲೀಸ್‌ಗ ಬಳಸ್ತಾರ"... ಅವಳ ಮಾತುಗಳು ಮುನ್ನುಗ್ಗುತ್ತಲೇ ಇದ್ದವು.

"ಬದುಕುವ ಹಕ್ಕಿಗಾಗಿ ಜಾಗತೀಕರಣಕ್ಕೊಂದು ಸವಾಲು" ಘೋಷಣೆಗೆ ವ್ಯಾಖ್ಯೆ ಬರೆಯುತ್ತಿದ್ದಳು ಮುದುಕಿ. ಈ ಪರಿಯ ಅರಿವಿನ ಒರತೆ ಎಲ್ಲಿದೆ? ಯಾರಿವಳು? ಸಾಮ್ರಾಜ್ಯಶಾಹಿಯ ಹುಟ್ಟಡಗಿಸಲು ಹೋರಾಟವೊಂದೇ ದಾರಿ ಎಂಬ ಸೂತ್ರ ಮನದಟ್ಟಾಗಿಸುವ ಈ 75ರ ಇವಳು ಯಾರು? ತತ್ವಪದ ಹೇಳತೊಡಗಿದಳು. 'ಅಂತಿಂಥ ಸರಕಾರ ಇದಲ್ಲ...." ಹಾಡಿನ ಪದದೊಳಗೆ ಸರಕಾರದ ಕ್ರೌರ್ಯ ಬಿಚ್ಚಿಡುತ್ತಿದ್ದಳು. ಕೊಟ್ಟ ಅವಧಿಯಲ್ಲಿ ಮಾತು ಮುಗಿಸಿ ನಡೆದಳು.

ಸಾಯಂಕಾಲ ಸಾಂಸ್ಕೃತಿಕ ಸಂಜೆ. ಹೋರಾಟದ ಹಾಡುಗಳು, ಸೌಹಾರ್ದ ನಾಟಕ. "ತಂಗಿ ಗೌರವ್ವ ನಿಂಗೇನಾಯ್ತವ್ವ ಮೇಲಕೆ ಏಳವ್ವ..." ಹಾಡಿಗೆ ತಕ್ಕಂತೆ ತಾಳ ಹಾಕುತ ಹೆಜ್ಜೆಗೆ ಗತ್ತು ಜೋಡಿಸುತ ಮತ್ತೆ ಅವಳು ಬಂದಳು. ಈಗ ಅಚ್ಚರಿಪಡುವ ಸರದಿ ನಮ್ಮದ್ರೇ. ಹೌದು ಅವಳೇ. ನೆರೆದ ಜನರ ಮೈಯಲ್ಲಿ ಉಲ್ಲಾಸದ ಸಂಚಾರ. "ದಣಿವರಿಯದ ಜನವಾದಿ" ಜನಸ್ತೋಮ ಮಾತಾಡುತ್ತಿತ್ತು.

ಯಾರೀಕೆ? ಮತ್ತೆ ಹುಡುಕ ಹೊರಟೆ ಸುರೇಖಾಗೆ ಫೋನಾಯಿಸಿದೆ. ಒಂದೊಂದೇ ಮಾಹಿತಿಗಳು ಸಿಗತೊಡಗಿದವು.

ಸಂಗವ್ವ ಹೀರೇಮಠ. ಗುಲಬರ್ಗಾ ಜಿಲ್ಲೆ ತವರೂರಾದರೆ ಬಿಜಾಪುರ ಗಂಡನೂರು. ಮದುವೆ ಹೊಸದರಲ್ಲಿ ವಿಭೂತಿ ಮಾರಿ ಬದುಕು ನಡೆಸುವ ದಂಪತಿಗಳಿಗೊಬ್ಬ ಮಗ ಹುಟ್ಟಿದ ಕ್ರಮೇಣ ಬೆಲ್ಲ ದುಂಡೆ ಮಾಡುತ ಜಾತ್ರೆಯಿಂದ ಜಾತ್ರೆಗೆ, ಊರಿಂದೂರಿಗೆ ಪಯಣ. ಈ ಪಯಣವೆಂಬುದು ಸುಮ್ಮನಲ್ಲ. ಅರಿವಿನ ಬೆಳಕು ಧಾರೆಯೆರೆದು ಕೊಡುತ್ತದೆ. ತತ್ವ ಪದಕಾರರೊಂದಿಗೆ ಸಂಗವ್ವ ಊರೂರು ಸುತ್ತಿದಳು. ಮನುಷ್ಯನ ಬದುಕು ನಿಂತ ನೀರಾಗಬಾರದೆಂಬ ಸತ್ಯ ಅರಿತಳು. **ಸಮಷ್ಟಿ ಹಿತದಲ್ಲಿಯೇ ಸ್ವಂತ ಹಿತ ಅಡಗಿರುವ ನಿಜವನ್ನು ಗ್ರಹಿಸಿದಳು.** ಸ್ವಭಾವತಃ ಹರಿವ ನೀರಂಥ ಚೈತನ್ಯವುಳ್ಳ ಸಂಗವ್ವಗೆ ಭೇಟಿಯಾದದ್ದು ಕಮ್ಯೂನಿಸ್ಟ್ ಹೋರಾಟಗಾರರಾದ ಎನ್.ಕೆ. ಉಪಾಧ್ಯಾಯ, ಕಾಂ.ಬೀಮಸಿ ಕಲಾದಗಿ. ಸರಿ, ಸಂಗವ್ವ ರೈತ ಸಂಘಕ್ಕೆ ಸೇರಿದಳು. ಪಂಚನದಿಗಳ ನಾಡು ಬೀಜಾಪುರದ ಜನತೆಗೆ ನೀರು ಬೇಕೆಂದು ಹೋರಾಟದಲ್ಲಿ ಭಾಗಿಯಾದಳು. 'ಆವತ್ತು ಬ್ರಿಟೀಷರು ದೇಶ ಲೂಟಿ ಮಾಡಿ ಹ್ವಾದರು. ಇವತ್ತು ನೀವು ನಮ್ಮವರೇ ಗೆದ್ದು ಬಂದು, ನಮ್ಮ ಬೆನ್ನಿಗೆ ಚೂರಿ ಹಾಕೂದು ಅಂದ್ರೇನು?' ಅನ್ನುವಾಗ ಸಂಗವ್ವಗ ಖಂಡಿತ ಇತಿಹಾಸದ ಅರಿವಿರುವುದು ಗೊತ್ತಾಗುತ್ತದೆ. ಆಗಸ್ಟ್ 9ರ ಜೇಲ ಭರೋ ಆಂದೋಲನದಲ್ಲಿ ಎನ್.ಕೆ. ಯವರೊಂದಿಗೆ ಸಂಗವ್ವ ಜೇಲು ಕಂಡಿದ್ದಾಳೆ. ಜನವಿರೋಧಿ ಪ್ರಭುತ್ವ ಪಲ್ಲಟಗೊಳಿಸದೆ ಜನರ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಸ್ಪಷ್ಟೀಕರಿಸುತ್ತಾಳೆ.

ಹಾಗೆ ನೋಡಿದರೆ ಸಂಗವ್ವ ಅಪ್ಪಟ ಕಾಯಕಜೀವಿ. ಶೇಂಗಾ ಬೆಲ್ಲದುಂಡೆ ಮಾಡಿ ಮಾರಿ ಬಂದ ಹಣದಲ್ಲಿ ಹೊಟ್ಟೆತುಂಬ ಉಂಡು ಕೈಗೆ ಸಂಘದ ಬಾವುಟ ಎತ್ತಿ ಹೊರಟಳೆಂದರೆ ಅಂದಿನ ದಿನ ಸಾಗಿಸಿದಂತೆಯೇ. "ನುಡಿಯೊಳಗಾಗಿ ನಡೆಯುದಿದ್ದಡೆ ಹಿಡಿದಿಪ ಲಿಂಗ ಘಟಕಸರ್ಪವಾಗದೇ" ಎಂದ ಶರಣರ ನುಡಿ ನೆನಪಾಗುತ್ತದೆ. ಇದ್ದೊಬ್ಬ ಮಗ ಆಟೋ ಓಡಿಸುತ್ತಾನೆ. ಮಗನ ಕುಟುಂಬದ ಸ್ವಾತಂತ್ರ್ಯಕ್ಕೆ ಧಕ್ಕೆ ತರದೆ, ಈ ಬದುಕ ಸಂಜೆಯಲ್ಲೂ ದುಡಿದುಣ್ಣುವ ಧೀಮಂತ ಅಜ್ಜಿ ಸಂಗವ್ವ ನಮ್ಮ ಪಾಲಿಗೆ ನಿಜ ಸಂಗಾತಿಯೇ ಹೌದು.

ಮಹಿಳೆಯರಲ್ಲಿ ರಾಜಕೀಯ ತಿಳುವಳಿಕೆ ತರದೆ, ಅಸ್ಮಿತತೆಯ ಅರಿವು ಬರಗೊಡದೆ, ಸ್ವಾಭಿಮಾನದ ಒರತೆ ಚಿಮ್ಮಿಸದೆ ಅವರನ್ನು ಕಣ್ಮುಚ್ಚಿ ಸಂಘಟಿಸುವ ಓಟ್ ಬ್ಯಾಂಕಾಗಿಸಿಕೊಳ್ಳುವ ಆಳುವ ವರ್ಗದ ಹಿಕ್ಮತ್ತು ನಾವು ನೋಡುತ್ತಿದ್ದೇವೆ. ಮಹಿಳೆ 'ಎಲ್ಲಾದರೂ ಎಂತಾದರೂ ಬಳಕೆಗೆಳೆವ ದುಷ್ಟ ಪಾಳೇಗಾರಿ ವ್ಯವಸ್ಥೆಯಲ್ಲಿ ಸಂಗವ್ವನ ರಾಜಕೀಯ ಅರಿವು, ಅಚ್ಚರಿ, ಮೆಚ್ಚುಗೆ ಹೆಮ್ಮೆ ಹುಟ್ಟಿಸುತ್ತದೆ. ಆದರೆ ಇಂಥ ತಿಳುವಳಿಕೆಗಳೆಲ್ಲವನ್ನು ಒಗ್ಗೂಡಿಸಿ ಸಂಘಟಿತ ಚಳುವಳಿ ಕಟ್ಟಲು ವಿಫಲರಾಗುತ್ತಿರುವುದೆಲ್ಲಿ? ಮಹಿಳಾ ಚಳುವಳಿ ರೈತ ಕಾರ್ಮಿಕ ಚಳುವಳಿ, ವಿದ್ಯಾರ್ಥಿ, ಯುವಜನ ಚಳುವಳಿಗೆ ಬಿಜಾಪುರವೆಂಬ ಸೂಫಿ ಸಂತರ ನೆಲ ಹಗಲಿಡಿ ಕಾಯುತ್ತಿದೆ. ಜನದ್ರೋಹಿ ಪ್ರಭುತ್ವವನ್ನು ಕಿತ್ತೊಗೆಯಲು ಕರೆ ಕೊಟ್ಟ ಸೂಫಿಯೊಬ್ಬನ ಶಿರ ತೆಗೆಯಿತು ರಾಜಪ್ರಭುತ್ವ. ಆದರೂ ನಿಲ್ಲದ ಚಳುವಳಿಯ ನಾಡು ಬಿಜಾಪುರ ಕಾಯಕ ಕ್ರಾಂತಿಯ ನಾಡಲ್ಲಿ ಸಂಗವ್ವನಂಥ ಬೆಳಕು ಕುಣುಕುಗಳು ಒಟ್ಟಾಗುವುದೇ?

123 .... ಕೆಲವು ಪ್ರಶ್ನೆಗಳು

ಪುಟ 9 ರಿಂದ

ಭಾರತದ ಆಳುವ ವರ್ಗಗಳ ಕುರುಡು ಚೀನಾ-ವಿರೋಧ, ಭಾರತದ ಸಾರ್ವಭೌಮತೆ ಎತ್ತಿಹಿಡಿಯುವವರು ಮತ್ತು 123 ಒಪ್ಪಂದ ಒಪ್ಪದವರೆಲ್ಲ ಚೀನಾ-ಪರ ಅಂತಲೇ ?

ಪ್ರಶ್ನೆ: 123 ಒಪ್ಪಂದಕ್ಕೆ ವಿರೋಧವಾಗಿರುವ ಬಿಜೆಪಿ ಮತ್ತು ಇತರ ವಿರೋಧ ಪಕ್ಷಗಳ ಜತೆ ಸೇರಿ ಸರಕಾರವನ್ನು ಮಣಿಸಲು ಎಡ ಪಕ್ಷಗಳು ಏಕೆ ಮುಂದಾಗುವುದಿಲ್ಲ ?

ಉತ್ತರ : 123 ಒಪ್ಪಂದಕ್ಕೆ ಬಿಜೆಪಿಯ ವಿರೋಧ ಭಾಗಶಃ ಹುಸಿ. ಯುಪಿಎ ಸರಕಾರವನ್ನು ಹೇಗಾದರೂ ಅಧಿಕಾರದಿಂದ ಇಳಿಸುವ ಸೀಮಿತ ಉದ್ದೇಶದ್ದು. ಬಿಜೆಪಿ ಸರಕಾರದ ವಿದೇಶ ಮಂತ್ರಿ ಜಸ್ವಂತ್ ಸಿಂಗ್ ಅಮೆರಿಕದ ಅಧಿಕಾರಿ ತಲ್‌ಬೊತ್ ಜತೆ ನಡೆಸಿದ ಗುಪ್ತ ಮಾತುಕತೆಗಳಲ್ಲಿ ಈ ಒಪ್ಪಂದ ಹುಟ್ಟಿದ್ದು ಎಂದು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಅಮೆರಿಕದ ಕಿರಿಯ ಪಾಲುದಾರ - ಜೂನಿಯರ್ ಪಾರ್ಟನರ್ ಆಗುವ ವಿದೇಶ ನೀತಿಯು ಬಿಜೆಪಿಯ ಕೂಸು. ಇದು ಅದರ ಮುಂದುವರಿಕೆಯ ಭಾಗ. 123 ಒಪ್ಪಂದ ಸಹಿ ಹಾಕಲು ತಾನು ಅಧಿಕಾರದಲ್ಲಿಲ್ಲವಲ್ಲ ಅಂತ ಅದಕ್ಕೆ ಹೊಟ್ಟೆಕಿಚ್ಚು. ಆ ವಿದೇಶ ನೀತಿಯನ್ನು ಬೆಂಬಲಿಸುತ್ತಾ 123 ಒಪ್ಪಂದದ ವಿರುದ್ಧ ಮಾತ್ರ ಶೂರತನದ ಪ್ರದರ್ಶನ ಬರಿಯ ಬೊಗಳೆ.

ಯುಪಿಎ ಸರಕಾರವನ್ನು ಉರುಳಿಸುವುದು ಎಡಪಕ್ಷಗಳ ಮುಖ್ಯ ಅಜೆಂಡಾ ಅಲ್ಲ. ದೇಶದ ಹಿತಾಸಕ್ತಿಗೆ ವಿರೋಧವಾದ 123 ಒಪ್ಪಂದ ಜಾರಿಯನ್ನು ತಡೆಯುವುದು, ಸ್ವತಂತ್ರ ವಿದೇಶ ನೀತಿ ಮತ್ತು ಸಾರ್ವಭೌಮತೆ ಉಳಿಸುವುದು ಎಡಪಕ್ಷಗಳ ಆದ್ಯತೆ. ಬಿಜೆಪಿ ಮತ್ತು ಇತರ ವಿರೋಧ ಪಕ್ಷಗಳ ಜತೆ ಸೇರುವುದು ಎಂದರೆ ಈ ಆದ್ಯತೆ ಬಲಿಕೊಟ್ಟು ಬಿಜೆಪಿ ಅಜೆಂಡಾಕ್ಕೆ ಬಲಿಯಾಗುವುದು.

ಜನವಾದಿ ಮಹಿಳಾ ಸಂಘಟನೆ ನೂತನ ಪದಾಧಿಕಾರಿಗಳು



ಕೆ.ನೀಲಾ



ಕೆ.ಎಸ್.ಲಕ್ಷ್ಮಿ

ರಾಜ್ಯ ಸಮ್ಮೇಳನದಲ್ಲಿ 41 ಸದಸ್ಯರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿದೆ. 16 ಸಂಗಾತಿಗಳು ಪದಾಧಿಕಾರಿಗಳಾಗಿದ್ದು, ಅಧ್ಯಕ್ಷರಾಗಿ ಕೆ.ನೀಲಾ ಪುನರಾಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಕೆ.ಎಸ್. ಲಕ್ಷ್ಮಿ ಖಜಾಂಚಿ ಸುನಂದಾ ಆಯ್ಕೆಯಾಗಿದ್ದಾರೆ.

ಮುಂದಿನ ದಿನಗಳಲ್ಲಿ ಈಗಿರುವ 47,600 ಸದಸ್ಯತ್ವದಿಂದ 2 ಲಕ್ಷ ಸದಸ್ಯತ್ವದ ಗುರಿ ಇರಿಸಲಾಗಿದೆ. ಚಳುವಳಿಯನ್ನು ವಿಸ್ತರಿಸಲು ಬಲಪಡಿಸಲು ನಿರ್ಣಯ ಕೈಗೊಳ್ಳಲಾಗಿದೆ.


ಜನವಾದಿ ಮಹಿಳಾ ಸಂಘಟನೆಯ 6ನೇ ರಾಜ್ಯ ಸಮ್ಮೇಳನ ಯಶಸ್ವಿಯಾಗಿ ಮುಗಿದಿದೆ. ಸಮ್ಮೇಳನದ ಬಹಿರಂಗಸಭೆ, ಚರ್ಚೆಯವ ವರದಿಗಳು, ಸ್ಫೂರ್ತಿಯುತವೂ, ಸ್ವಾರಸ್ಯಕರವೂ ಆಗಿವೆ.

ಬದುಕುವ ಹಕ್ಕು ಸ್ವಾಭಿಮಾನದ ರಕ್ಷಣೆಯ ಕೆಚ್ಚು ಮೂಡಿಸಿದ ಜನವಾದಿಯ 6ನೇ ರಾಜ್ಯ ಸಮ್ಮೇಳನ

...ನ್ನ ದಿನ ನನ್ನ ಜನ ಬೆಟ್ಟದಂತೆ ಬಂದರು ಎಂಬ ...ದ್ದಲಿಂಗಯ್ಯನವರ ಹೋರಾಟದ ಹಾಡಿನ ...ದಪದವು ಸಾಕಾರವಾಗುವಂತೆ ಮಹಿಳೆಯರು ...ರಿದುಬಂದಿದ್ದರು. ಕೆಂಪು ಅಂಚು, ಬಿಳಿ ಸೀರೆ, ...ಂಗುಣಿಸುವ ಬಳೆಗಳ ನಾದ, ಎಲ್ಲೆಂದರಲ್ಲಿ ದೃಷ್ಟಿ ...ರಿವತನಕ ಜನವಾದಿಯು ಬಾವುಟಗಳು, ...ಾಮಫಲಕ, ಸ್ಲೋಗನ್ ಎಐಡಿಡಬ್ಲ್ಯುಎ ಜಿಂದಾಬಾದ್, ಬಣ್ಣ ಬಣ್ಣದ ಆರು ಕೊಡೆಗಳು ...ರಡು ಸಾಲಾಗಿ ಶಿಸ್ತಿನ ಸಿಪಾಯಿಯಂತೆ ಹರಿದು ಬರುತ್ತಿರುವ ಮಹಿಳೆಯರ ಪಡೆ. ಹೌದು ಇದು ...ವಾದಿಯ 6ನೇ ರಾಜ್ಯಸಮ್ಮೇಳನದ ಮರವಣಿಗೆಯ ಮನಮೋಹಕ ದೃಶ್ಯವಾಗಿತ್ತು. ಅಂಗೈಯಷ್ಟು ಅಗಲವಿರುವ ಬೀದರಿನ ಪಟ್ಟಣದುದ್ದಕ್ಕೂ ಅಂದು 20.08.2007ರಂದು ಮುಂಜಾನೆ 8 ಗಂಟೆಯಿಂದಲೇ ದೂರದ ಉತ್ತರ ಕನ್ನಡ, ಮಂಗಳೂರು, ಮಂಡ್ಯ ಮೈಸೂರುಗಳಿಂದ ಅಲ್ಲದೆ ಸಮೀಪದ ಕಾಡವಾದ ಚಂದನಹಳ್ಳಿ, ಹುಮನಾಬಾದ ಮುಂತಾಗಿ ವಿವಿಧ ತಾಲ್ಲೂಕುಗಳಿಂದ ತರಹೇವಾರಿ ಸೀರೆಯುಟ್ಟ ಮಹಿಳೆಯರು ಅಂಬೇಡ್ಕರ್ ವೃತ್ತದಲ್ಲಿ ಬಂದು ಜಮಾಯಿಸತೊಡಗಿದರು.

ಎಲ್ಲೆಲ್ಲೂ ಜನವಾದಿ - ಮಯ

ಬೀದರ್ ಪಟ್ಟಣವೆಂಬ ಪಟ್ಟಣ ಹೊಸ ಮದುಮಗಳಂತೆ ಸಿಂಗರಗೊಂಡಿತ್ತು. ಹೆಣ್ಣುಗೂಸು ಉಳಿಸಿ, ಮಾನವ ಕುಲ ರಕ್ಷಿಸಿ, ಅಪಮಾನದ ವರದಕ್ಷಿಣೆ ನಿಲ್ಲಲಿ, ಸ್ವಾಭಿಮಾನದ ಆಸ್ತಿಹಕ್ಕು ಬೇಕೇ ಬೇಕು ಎಂಬಿತ್ಯಾದಿ ಘೋಷಣೆಗಳಿಂದ



ಶ್ವೇತ ಪತಾಕೆಗಳೇ ಮುನ್ನಡೆಗೆ ಸ್ಫೂರ್ತಿ

ಗೋಡೆಬರಹಗಳು ಉದ್ದಕ್ಕೂ ರಾರಾಜಿಸುತ್ತಿದ್ದವು. ಅಸಂಖ್ಯ ಬಾವುಟಗಳು, ತೋರಣ, ಪೋಸ್ಟರ್, ಬ್ಯಾನರ್, ದೊಡ್ಡ ದೊಡ್ಡ ಕಟೌಟ್ ಒಂದೇ ಎರಡೇ ಭರಪೂರ ಪ್ರಚಾರ ಸಾಮಗ್ರಿಯಿಂದಾಗಿ ಊರೆಂಬ ಊರು ಜನವಾದಿಮಯವಾಗಿತ್ತು. ಪೂರ್ವಭಾವಿಯಾಗಿ ಗುಲ್ಬರ್ಗಾದ ಡಿವೈಎಫ್ಐ ಕಾಶಿನಾಥ, ಪ್ರಕಾಶ, ರಾಯಚೂರಿನ ಸಿದ್ದಲಿಂಗಯ್ಯ, ಗುಲ್ಬರ್ಗಾ, ಬೀದರ್ ಎಸ್ಎಫ್ಐ ಸಂಗಾತಿಗಳು ಹಗಲು ರಾತ್ರಿಯನ್ನು ಒಂದು ಮಾಡಿ ಈ ಪರಿ ಸಿಂಗರಿಸಿದ್ದರು. ಎತ್ತೆತ್ತರಕ್ಕೆ ಏರಿ ಬಾವುಟ, ಬ್ಯಾನರ್ ಕಟ್ಟುವಲ್ಲಿ ಅವರು ತೆಗೆದುಕೊಂಡ ರಿಸ್ಕು ನಮ್ಮನ್ನು ಗಾಬರಿಗೊಳಿಸಿದ್ದವು. ಅಷ್ಟು ಎತ್ತರ ಏರಬ್ಯಾಡ್ರಪ್ಪಾ ಬಿದ್ದು ಏನಾದ್ರೂ ಆದೀತು ಜೋಕೆ ತಮ್ಮಂದಿರೇ ಎಂದರೆ ಅದಕ್ಕೆ ಅವರು ಹೇಳಿದ್ದು ಏನು ಗೊತ್ತೇ? 'ಅಕ್ಕೋರೆ ಬಿದ್ದು ಸತ್ರು ಹರಕತ್ತ ಇಲ್ರಿ. ಆದ್ರ ಸತ್ತಾಗ ಕೆಂಪು ಝುಂಡಾ ಹಾಕತಿರೆಲ್ಲಾ ಅಷ್ಟು ಸಾಕ್ರಿ' ಅನಬೇಕೇ? ಆ ಹುಡುಗರ ಕಣ್ಣುಗಳಲ್ಲಿ ಭಗತ್‌ಸಿಂಗ್, ರಾಜಗುರು ಮುಂತಾದವರ ಬಿಂಬಗಳು ಪ್ರತಿಫಲಿತವಾಗುತ್ತಿವೆ ಎನಿಸುತ್ತಿದ್ದವು. ಸಮ್ಮೇಳನದ ಬಹಿರಂಗ ಸಭೆ ನಡೆಯಲಿರುವ ಗಣೇಶ ಮೈದಾನಕ್ಕೆ ಸಾಲುಗಟ್ಟಿ ಬರುತ್ತಿರುವ ಮಹಿಳೆಯರನ್ನು ಕಂಡು ಬೀದರ್ ಜನತೆಗೆ ಒಂದೆಡೆ ಆಶ್ಚರ್ಯ, ಇನ್ನೊಂದೆಡೆ ಖುಷಿ. ಏಕಕಾಲಕ್ಕೆ ಹದಗೊಂಡಿದ್ದವು. ಏಕೆಂದರೆ ಮನೆಬಿಟ್ಟು ಹೊರಬರಲು ಇವತ್ತಿಗೂ ಸಂಕೋಚಪಟ್ಟುಕೊಳ್ಳುವ ಬಯಲುಸೀಮೆಯ ಮಹಿಳೆಯರು ಇಂದು ತಾವಾಗಿಯೇ ಸ್ವಯಂಪ್ರೇರಿತರಾಗಿ ಸಂಘದ ಶಿಸ್ತಿನ ಸಿಪಾಯಿಯಂತೆ ಹರಿದು ಬಂದಿದ್ದರು.

ಮಾತು-ಮಳೆಯ ಜುಗಲ್‌ಬಂದಿ

ಸರಿಯಾಗಿ ಮುಂಜಾನೆ 11.30ಕ್ಕೆ ಮೆರವಣಿಗೆ ಅಂಬೇಡ್ಕರ್ ವೃತ್ತದಿಂದ ಪ್ರಾರಂಭವಾಗಿ ಚೌಬಾರಾ, ಬಸವೇಶ್ವರ ವೃತ್ತ, ಭಗತ್‌ಸಿಂಗ್ ಸರ್ಕಲ್, ಶಿವಾಜಿವೃತ್ತ ಮಾರ್ಗ ಗಣೇಶ ಮೈದಾನಕ್ಕೆ ಬಂದು ತಲುಪುವಾಗ ಮಧ್ಯಾಹ್ನ 1.30 ಗಂಟೆಯಾಗಿತ್ತು. ಹಾಕಿದ ಆಸನ, ಜಮಖಾನೆಗಳು ಸಾಲದಂತಾಗಿ ಸ್ತ್ರೀಯರು ನೆಲವನ್ನು ಆಶ್ರಯಿಸಿದರು. ಸಮುದಾಯ ಸಂಗಾತಿಗಳ "ನಾವು ಬೆವರನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನು ಕೇಳುವೆವು" ಎಂಬ ಕ್ರಾಂತಿಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಸಿದ್ಧರಾಮ ಶರಣರು ಬೆಲ್ದಾಳ ಇವರಿಂದ ಸ್ವಾಗತಭಾಷಣ ವಾಗುವಷ್ಟರಲ್ಲಿ ಮಳೆ ಎಲ್ಲಿಂದಲೊ ಅಪ್ಪಳಿಸಿ ಬಂದು ಧೋ ಧೋ ಎಂದು ಸುರಿಯತೊಡಗಿತು.

ನೆಲದ ಮೇಲೆ ಮುಖ್ಯ ಅತಿಥಿಗಳಾಗಿದ್ದ ಮಲ್ಲು ಸ್ವರಾಜ್ಯಂರವರ ಮಾತಿನ ಮಳೆ ಸುರಿಯತೊಡಗಿದರೆ ಆಕಾಶದ ಮೇಲಿಂದ ಕಪ್ಪನೆಯ ಮೋಡಗಳ ಜಲಧಾರೆ ಒಂದೇ ಸಮಕ್ಕೆ ಸುರಿಯತೊಡಗಿತ್ತು. ತೆಲಂಗಾಣ ಹೋರಾಟದ ನಾಯಕಿ ಮಲ್ಲು ಸ್ವರಾಜ್ಯಂರವರು ಭೂಮಿ ಹೋರಾಟಕ್ಕೆ ಬೇಕಾದ ಛಲ, ತ್ಯಾಗ, ಬಲಿದಾನ ಕೆಚ್ಚಿನ ಗಾಥೆ ವಿವರಿಸುತ್ತಿದ್ದರೆ ಮಹಿಳೆಯರು ಮಳೆಯನ್ನು ಧಿಕ್ಕರಿಸಿ ಕುಳಿತ ಕುರ್ಚಿಗಳನ್ನೇ ಕೊಡೆ ಮಾಡಿಕೊಂಡು ಮಾತು ಆಲಿಸತೊಡಗಿದರು. ಒಂದೆಡೆ "ಮಳೆ" ಇನ್ನೊಂದೆಡೆ "ಮಾತು" ಜಿದ್ದಾಜಿದ್ದಿಗೆ ಬಿದ್ದಂತೆ ಮುಖಾಮುಖಿ ವಾಗಿ ಜುಗಲ್‌ಬಂದಿ ನಡೆಸಿದ್ದು ಐತಿಹಾಸಿಕ ದಾಖಲೆಯನ್ನೇ ನಿರ್ಮಿಸಿತ್ತು. ಜನವಾದಿಯ ರಾಷ್ಟ್ರ ಪ್ರಧಾನ ಕಾರ್ಯದರ್ಶಿಯಾಗಿರುವ ಸುಧಾ ಸುಂದರರಾಮನ್ ಅವರು ಜಾಗತೀಕರಣದ ವಿರುದ್ಧ ಮಹಿಳೆಯರು ಸಿಡಿದು ನಿಲ್ಲಬೇಕಾದ ಪರಿಯನ್ನು ಘೋಷಿಸಿದರು. ಜಾಗತೀಕರಣ ಇಂದು ಮಹಿಳೆಯರ ಬದುಕುವ ಹಕ್ಕನ್ನು, ಸ್ವಾಭಿಮಾನಿ ಬದುಕಿನ ಅವಕಾಶಗಳನ್ನು ಕಿತ್ತುಕೊಂಡು ಅವರನ್ನು ಅಕ್ಷರಶಃ ಬಿಕರಿ ವಸ್ತುವಾಗಿ ಮಾಡಿದೆ. ಉದ್ಯೋಗ, ಅಕ್ಷರ, ಆರೋಗ್ಯ, ಅರಿವು ಎಲ್ಲವನ್ನೂ ಕಿತ್ತುಕೊಂಡು ಮಹಿಳೆಯರನ್ನು ಗ್ರಾಹಕರ ಸರಕಾಗಿ ಮಾಡಿದೆ. ಆದರೆ ನಾವು ಮಹಿಳೆಯರು ಇದಕ್ಕೆ ಬಗ್ಗಲಾರೆವು. ನಮಗಾಗಿ ನಾವು ಜಾಗತಿಕರಣಕ್ಕೆ ಸವಾಲು ಒಡ್ಡುತ್ತ ಪರ್ಯಾಯ ಬದುಕನ್ನು ರೂಪಿಸಿಕೊಳ್ಳುತ್ತೇವೆ. ಪರ್ಯಾಯ ಬದುಕಿನ ಸಾಧ್ಯತೆ ಕುರಿತು ಜನವಾದಿ ಮಹಿಳಾ ಸಂಘಟನೆ 6ನೇ ಸಮ್ಮೇಳನದ ರೂಪುರೇಷೆಗಳನ್ನು ಸಿದ್ಧಪಡಿಸಲಿದೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನೆರೆದಿರುವ ಜನವಾದಿ ಮಹಿಳೆಯರು ಈ ಕಾರ್ಯಕ್ರಮಗಳನ್ನು ತೆಗೆದುಕೊಂಡು ಮುಂದಿನ ದಿನಗಳಲ್ಲಿ ಜನತೆಯ ಮಧ್ಯೆ ನುಗ್ಗಲಿದ್ದಾರೆ ಎಂದು ವಿವರಿಸಿದರು.

ರಾಜ್ಯಾಧ್ಯಕ್ಷೆ ಕೆ.ನೀಲಾ ಅವರು ಬಿಸಿಯೂಟ, ಉದ್ಯೋಗ ಖಾತ್ರಿ ಅಂಗನವಾಡಿ, ಸ್ತ್ರೀಶಕ್ತಿ ಸಂಘ, ಸ್ವಸಹಾಯ ಗುಂಪು, ಕೃಷಿ ಕೂಲಿ ಕಾರ್ಮಿಕ ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳನ್ನು ವಿವರಿಸಿ ಈ ಎಲ್ಲರ ನಿರ್ದಿಷ್ಟ ಅಂಶಗಳನ್ನು ಎತ್ತಿಕೊಂಡು ಹೋರಾಟ ಮಾಡುವಲ್ಲಿ ಜನವಾದಿ ಮುಖ್ಯ ಹೆಜ್ಜೆಗಳನ್ನು ಇಡಲಿದೆ ಎಂದರು. ಸುರಿಯುತ್ತಿರುವ ಮಳೆಯಲ್ಲಿಯೇ ಮುಖಂಡರು ಮಾತಾಡುತ್ತಿದ್ದರೆ, ಜನರು ಅಷ್ಟೇ ಪ್ರೀತಿ ಮತ್ತು ಛಲದಿಂದ ಮಾತು ಕೇಳುತ್ತಿದ್ದರು. ಮಳೆಯನ್ನು ಲೆಕ್ಕಿಸದೇ ಅವರು ಮಾತಿಗೆ ಕಾತರಿಸುತ್ತಿದ್ದದ್ದು ನಿಜಕ್ಕೂ ಹೆಮ್ಮೆ ಮೂಡಿಸಿತ್ತು. ಭಾಷಣ ಸಾಕು, ನೀವೆಲ್ಲ ಆಸರೆಗೆ ಹೋಗಿರಿ ಎಂದರೆ ಜನರು ಕೇಳುತ್ತಿಲ್ಲ. ಉಹೂಂ, ಊಹುಂ ಮೇಡಂ ಮಾತಾಡ್ರಿ. ನಾವು ಮಾತು ಕೇಳಲೆಂದು ಬಂದಿದ್ದೇವೆ ಎನ್ನುತ್ತಿದ್ದರು. ಅಂತೂ ಅವಸರವಿಲ್ಲದೆ ಬಹಿರಂಗ ಸಭೆ ಮುಗಿದು ಎಂ.ಎಸ್.ಪಾಟೀಲ ಫಂಕ್ಷನ್ ಹಾಲ್‌ನಲ್ಲಿ ಸಮ್ಮೇಳನದ ಧ್ವಜಾರೋಹಣ, ಹುತಾತ್ಮರಿಗೆ ಗೌರವ ಸಲ್ಲಿಸುವ ಮೂಲಕ ಅಧಿವೇಶನ ಪ್ರಾರಂಭವಾಯಿತು.



ಎಪಾ ಎಲ್ಲಿಂದ ಬಂದ್ರಲಾ, ಇಷ್ಟೊಂದು ಹೆಣ್ಮಕ್ಕಳು

ಬಹಿರಂಗ ಸಭೆಗೆ ಅಪೂರ್ವ ಜನಸ್ಪಂದನ

ಅನುಭವಗಳ ಮಥನ

ಕರಡು ವರದಿಯನ್ನು ಪ್ರ.ಕಾರ್ಯದರ್ಶಿ ವಿಮಲಾ ಮಂಡಿಸಿದರು. ಜನವಾದಿಯ 6ನೇ ಸಮ್ಮೇಳನದ ಚರ್ಚೆಯ ಜಾಡು ಪ್ರಾರಂಭವಾಗಿ ಗಣೇಶ ಮೈದಾನದಲ್ಲಿ ಮುಂದಿನ ಎರಡು ದಿನ ನಗರದ ಎಂ.ಎಸ್.ಪಾಟೀಲ್ ಸಭಾಂಗಣದಲ್ಲಿ ಅದೇ ನೆಲೆಯಲ್ಲಿಯೇ ಚರ್ಚೆ ಮುಂದುವರೆಯಿತು.

ರಾಜ್ಯದ 12 ಜಿಲ್ಲೆಗಳಿಂದ ಬಂದ 270 ಪ್ರತಿನಿಧಿಗಳಲ್ಲಿ 43 ಜನ ವರದಿಯ ಮೇಲೆ ಮಾತನಾಡಿದ್ದು- ಹೆಚ್ಚಿನ ಮಾತುಗಳು ಗೇಣು ಹೊಟ್ಟೆಗೆ ತುತ್ತು ಕೂಳು ಕೊಡಬಲ್ಲ ರೇಷನ್ ಕಾರ್ಡ್‌ಗಾಗಿ ಸರ್ಕಾರದ ಪೊಳ್ಳು ಭರವಸೆಯ ಮಾತಿಗೆ ಮರುಳಾದ ಬಡಜನ ಎದುರಿಸುತ್ತಿರುವ ಬಗ್ಗಡದ ಬದುಕಿನ ಕುರಿತು ಮಹಿಳೆಯರು ಮಾತನಾಡುವಾಗ ಕಣ್ಣಾಲಿಗಳು ತುಂಬುತ್ತಿದ್ದವು. ವಿವಿಧ ಜಿಲ್ಲೆಗಳಲ್ಲಿ ಸಂಘಟನೆಯ ಅಡಿಯಲ್ಲಿ ನಡೆಸಿದ ಹೋರಾಟಗಳು, ಕೆಲವು ಕಡೆ ಪಡೆದ ಸವಲತ್ತುಗಳು ಸಭಾಂಗಣದಲ್ಲಿ ಕುಳಿತವರಿಗೆ ಸ್ಫೂರ್ತಿ ನೀಡುವಂತಿತ್ತು. ಮಂಡ್ಯದ ಪೊಲೀಸ್ ಲಾಠಿಯನ್ನೆದುರಿಸಿದ ಘಟನೆಯಿರಬಹುದು ಅಥವಾ ಅಫ್ಜಲ್‌ಪುರದಲ್ಲಿ ಜನವಾದಿ ಮಹಿಳೆಯರು ದೀರ್ಘ ಹೋರಾಟದಿಂದ ಶೌಚಾಲಯ ಪಡೆದ ಅನುಭವವಿರಬಹುದು. ಇಡೀ ರಾಜ್ಯಕ್ಕೆ ಮಾದರಿಯಾಗುವಂತಿತ್ತು. ಮುಸ್ಲಿಂ ಮಹಿಳೆಯರು ಎದುರಿಸುವ ಸಮಸ್ಯೆಗಳು ಹಾಡಿನ ರೂಪದಲ್ಲಿ ಹೊರಬಂದರೆ, ದಲಿತರ ಮೇಲಿನ ದೌರ್ಜನ್ಯಗಳು ಮನ ಕಲಕುವಂತೆ ವರದಿಯಾದವು.

ಬೆಳೆದ ಆತ್ಮವಿಶ್ವಾಸ

ದಕ್ಷಿಣ ಕನ್ನಡದ ಪ್ರತಿನಿಧಿಗಳು ಕೋಮುವಾದದ ಬೆಂಕಿ ಹೇಗೆ ಬದುಕನ್ನು ನಾಶ ಮಾಡುತ್ತಿದೆ ಎಂಬುದನ್ನು ವಿವರಿಸುವಾಗ ಜನವಾದಿ ಎತ್ತಿಕೊಳ್ಳಬೇಕಾದ ಮುಖ್ಯ ಅಂಶವಿದೆಯೆಂಬ ಭಾವನೆ ಎದ್ದುಕಾಣುತ್ತಿತ್ತು.

ಪ್ರಧಾನ ಕಾರ್ಯದರ್ಶಿಯವರ ವರದಿಗೆ ಚರ್ಚೆ ಇದಾದರೆ ಆಯೋಗದ ಸಂದರ್ಭದಲ್ಲಿ ಹೊರಬಂದ ಅಂಶಗಳು ಮೂಲಭೂತವಾದ ಹೆಡೆ ಎತ್ತಿದಲ್ಲಿ ಹಸಿರು ಬೆಳೆಯದೆಂಬ ಭಾವ ದಕ್ಷಿಣ ಕನ್ನಡದ ಗೆಳತಿಯೊಬ್ಬರು ಹಂಚಿಕೊಂಡಿದ್ದು ಹೀಗೆ.


ಹಿಂದೊಮ್ಮೆ ಗಲಭೆಯಾದಾಗ ನಮ್ಮ ಯುವಜನ ಸಂಗಾತಿಗಳ ರಕ್ಷಣೆಗೆ ನಾವು ಓಡಿದ್ದೆವು. ಆದರೆ ಈ ಬಾರಿ. ಅವರ ಅಂಗಡಿ, ಮನೆಗಳು ಸುಟ್ಟು ಬೂದಿಯಾಗಿದ್ದವು. ನಮ್ಮ ಮಕ್ಕಳು ಕೋಮುವಾದಿಗಳ ಜೊತೆಯೇ ಬೆರೆಯುವ ಪರಿಸ್ಥಿತಿಯಿದೆ. ನಮಗೆ ಭಯ. ಮನೆಯ ಒಳಗೆ ವಿದ್ಯುತ್ ದೀಪ ಉರಿಸಲೂ ಸಾಧ್ಯವಿಲ್ಲ. ಚಿಮಣಿ ದೀಪದಲ್ಲಿ ಉಳಿಯುವ ಪರಿಸ್ಥಿತಿ. ನಮಗೆ ಅಲ್ಲಿ ಪರ್ಯಾಯ ಬೇಕು.

ಯಾರು ಮಾದರಿ?

ಈ ಪ್ರಶ್ನೆಗಳಿಗೆಲ್ಲ ಅವರೇ ಕೊಟ್ಟುಕೊಂಡ ಉತ್ತರ ಸಂಘ ಕಟ್ತೇವಿ. ಹೋರಾಟ ಮಾಡ್ತೇವಿ. ಇದಕ್ಕೆಲ್ಲ ಪುಟ ವಿಟ್ಟಂತೆ. ಇಡೀ ಸಭಾಂಗಣ ಹ್ಞಾಂ! ಎಂಬ ಉದ್ಗಾರವೆತ್ತಿದ ಸಂದರ್ಭ 21.8.07ರಂದು ಕಾಯಕ ಕ್ರಾಂತಿಯ ನಾಡಿನಲ್ಲಿ 12ನೇ ಶತಮಾನದಲ್ಲಿಯೇ ಮಹಿಳಾ ಸಮಾನತೆಯ ಕುಸುಮಗಳನ್ನಿತ್ತ ವಚನಕಾರ್ತಿಯರ ಮಹಿಳಾಪರ "ಬಯಲಿಲ್ಲದ ಬಯಲು" ವಚನ ಸಂಗ್ರಹ ಬಿಡುಗಡೆಯ ಸಂದರ್ಭದಲ್ಲಿ "ಈ ಸಮಾಜ ಯಾರನ್ನು ಮಾದರಿಗಳಾಗಿ ನಿಮಗೆ ತೋರಿಸುತ್ತದೆ. ತುಂಬಿದ ಗರ್ಭಿಣಿಯನ್ನು ಕಾಡಿಗೆ ಅಟ್ಟಿದ ರಾಮ, ಹೆಂಡತಿಯನ್ನು ಬಜಾರಿನಲ್ಲಿ ಮಾರಾಟಕ್ಕಿಟ್ಟ ಹರಿಶ್ಚಂದ್ರ, ದ್ರೌಪದಿಯನ್ನು ಜೂಜಿಗೆ ಒತ್ತೆಯಿಟ್ಟ ಪಾಂಡವರು..... ಇವರ್ಯಾರೂ ಮಾದರಿಗಳಲ್ಲ. ಮಹಿಳಾ ಸಮಾನತೆಯನ್ನು ಗೌರವಿಸುವ ಯಾರೂ ಈ ಮೇಲಿನ ಯಾವುದೇ ಘಟನೆಯನ್ನು ಒಪ್ಪುವುದಿಲ್ಲ". ಮಹಿಳೆಯರಲ್ಲಿರುವ ಸ್ವಾಭಿಮಾನವನ್ನು ಬಡಿದೆಬ್ಬಿಸುವ ಈ ಮಾತುಗಳು ಬಂದಿದ್ದು ಶರಣ-ಬೆಲ್ದಾಳರಿಂದ ಇಡೀ ಸಭಾಂಗಣ ಮೈಯೆಲ್ಲಾ ಕಿವಿಯಾಗಿಸಿ ಅವರ ಮಾತು ಕೇಳಿದಾಗ ಆಗುತ್ತಿದ್ದ ರೋಮಾಂಚನ, ಬೆಳೆಯುತ್ತಿದ್ದ ವಿಶ್ವಾಸ ಅವರ ಮುಖದ ಮೇಲೆ ಎದ್ದುಕಾಣುತ್ತಿತ್ತು. ಸಾಮಾನ್ಯವಾಗಿ ಇಂತಹ ಮಾತುಗಳನ್ನು ಒಂದು ವರ್ಗದಿಂದ ಮಾತ್ರ ಕೇಳಿ ಅಭ್ಯಾಸವಿದ್ದ ಜನವಾದಿಯ ಗೆಳತಿಯರಿಗೆ ಬಹುಶಃ 12ನೆಯ ಶತಮಾನದಲ್ಲಿ ಪ್ರಾರಂಭವಾದ ಕ್ರಾಂತಿಯ ಕಿಡಿ ಕರ್ನಾಟಕದ ಒಂದು ಭಾಗದ ಆಸ್ತಿಯಾಗಿ ಅಲ್ಲಿಯೇ ಬೂದಿಯ

ಪುಟ 12 ಕ್ಕೆ

ವೇದಿಕೆಯಲ್ಲಿ ವಿಮಲಾ, ಮಲ್ಲು ಸ್ವರಾಜ್ಯಂ, ಸುಧಾ, ನೀಲಾ, ಮೀನಾಕ್ಷಿ ಬಾಳಿ



ಜನವಾದಿ ಸಮ್ಮೇಳನ...

ಪುಟ 11 ರಿಂದ

[illegible] ಎನಿಸಿದರೆ ಅಚ್ಚರಿಯಿಲ್ಲ. ಎಡಸಿದ್ಧಾಂತದ [illegible] ವೈಚಾರಿಕ ನೆಲೆಯಲ್ಲಿ ಮುನ್ನಡೆಯುವ ಜನವಾದಿಯಂತಹ ಸಂಘಟನೆಯ ಕಾರ್ಯಕರ್ತರಿಗೆ ಸಿದ್ರಾಮ ಶರಣರ ಮಾತುಗಳು ಇನ್ನಷ್ಟು ಸೈದ್ಧಾಂತಿಕ ಗಟ್ಟಿತನವನ್ನು ಕಟ್ಟಿಕೊಂಟ್ಟಿತೆಂದರೆ ಉತ್ಪ್ರೇಕ್ಷೆಯಲ್ಲ. ಕರ್ನಾಟಕದಲ್ಲಿ ನೆಲೆಯೂರಬಯಸುತ್ತಿರುವಾಗ ಕೋಮುವಾದಿಗಳನ್ನು ಸದೆಬಡಿಯಲು ನಾವು ನಮ್ಮ ಹರಹನ್ನು ವಿಸ್ತಾರಗೊಳಿಸಬೇಕಾದ ಅಗತ್ಯವಿದೆ ಮತ್ತು ಆ ಹರಹಿನೊಳಗೆ ನಿಶ್ಚಿತವಾಗಿ ಒಳಗೊಳ್ಳಬೇಕಾದ ಸಮೂಹ ಇಂತಹ ವ್ಯಕ್ತಿತ್ವಗಳೆಂದು ಕೆಲವರಿಗಾದರೂ ಅನ್ನಿಸಿದೆ.

ಹೀಗೆ ನಡೆದ ಸಮ್ಮೇಳನಕ್ಕೆ ಕಳೆಕೊಟ್ಟ ಮತ್ತೊಂದು ಕಾರ್ಯಕ್ರಮ "ರಸ ಸಂಜೆ". ಮಹಿಳೆಯರಲ್ಲಿರುವ ಹಿಂಜರಿತದ ಮನೋಭಾವದಿಂದ ಹೊರತರಲು ಜನವಾದಿ ಪ್ರಜ್ಞಾ ಪೂರ್ವಕವಾಗಿ ಕೆಲವು ಪ್ರಯತ್ನಗಳನ್ನು ಮಾಡುತ್ತಿದೆ. ಅದೆಂದರೆ ಮನ: ಪೂರ್ವಕವಾಗಿ ನಕ್ಕು ಮೈ ಛಳಿ ಬಿಟ್ಟು ಹಾಡು, ಕುಣಿತಗಳಲ್ಲಿ ಪಾಲ್ಗೊಳಿಸುವುದು. ಅಂತಹ ಒಂದು ಪ್ರಯತ್ನ ಈ ಸಮ್ಮೇಳನದಲ್ಲಿಯೂ ಮಾಡಲಾಯಿತು. ವೇದಿಕೆಯಿಂದ ಮೂಡಿಬಂದ ಹಾಡುಗಳಿಗೆ ಪ್ರಾರಂಭದಲ್ಲಿ ತಲೆದೂಗಿ, ತಾಳ ಹಾಕಿ, ಧ್ವನಿ ಕೂಡಿಸಿದ ಮಹಿಳೆಯರು ಕೊನೆಯ ಹಂತದಲ್ಲಿ ಕುಳಿತಿರಲಾರದೆ ಎದ್ದು ಬಂದು ಹೆಜ್ಜೆ ಹಾಕಿದ ಸಂದರ್ಭ. ರಾತ್ರಿಯ 12.30ಕ್ಕೂ ಕಾರ್ಯಕ್ರಮ ಮುಗಿಸಲೊಲ್ಲದ ಮನಸ್ಸು. "ಮೇಡಮ್ಮಾರೆ ನಾವೆಲ್ಲ ಹರೇದ ಹುಡಿಗೀರಾಗೀವ್ರಿ. ಬೆಳ್‌ತನ ಹಾಡೋಣು ಬರ್‍ರಿ. ನಮಗೆಲ್ಲ ಇಂತ ಅವಕಾಸ ಸಿಗತದೆಲ್ಲಿ" ಇದು ಬಿಜಾಪುರದ ಗೆಳತಿಯೊಬ್ಬಳ ಮಾತು.

ಒಟ್ಟಿನಲ್ಲಿ-ಕರ್ನಾಟಕದಲ್ಲಿ ಜನವಾದಿಗೆ ಮತ್ತು ಜನವಾದಿಯಿಂದ ಕರ್ನಾಟಕಕ್ಕೆ ಭವಿಷ್ಯವಿದೆ.

○ ಕೆ.ನೀಲಾ, ಕೆ.ಎಸ್.ವಿಮಲಾ

ಆಯೋಗದ ಚರ್ಚೆ - ನಿರ್ಣಯಗಳು

ಮಹಿಳೆಯ ಬದುಕುವ ಹಕ್ಕಿಗಾಗಿ ಜಾಗತೀಕರಣಕ್ಕೊಂದು ಸವಾಲು ಎಂಬ ಘೋಷಣೆಯಡಿ ನಡೆದ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 6ನೇ ರಾಜ್ಯ ಸಮ್ಮೇಳನದಲ್ಲಿ ನಡೆದ ಮಹಿಳೆಗೆ ಸಂಬಂಧಿಸಿದ ಆರು ಆಯೋಗಗಳ ಚರ್ಚೆ, ಆ ಮೂಲಕ ಬಂದ ಬೇಡಿಕೆಗಳು, ಪರ್ಯಾಯಗಳು ಮಂಡಿಸಿದ್ದು ಬೊಗಸೆಯಷ್ಟು, ಹರಿದು ಬಂದದು ಆಕಾಶದಷ್ಟು ಮಹಿಳೆ ಮತ್ತು ಕೋಮುವಾದ, ಅಲ್ಪಸಂಖ್ಯಾತ ಮಹಿಳೆಯ ಸ್ಥಿತಿಗತಿ, ಸ್ವಸಹಾಯ ಸಂಘಗಳ ಕಾರ್ಯಾಚರಣೆ, ಆರೋಗ್ಯ ಮತ್ತು ಶಿಕ್ಷಣ ವರದಕ್ಷಿಣೆ ಸ್ತ್ರೀ ಭ್ರೂಣಹತ್ಯೆ ತಡೆ ಕುರಿತ ಆರು ನಡುವೆ ಮಂಡಿಸಲಾಯಿತು.

ಚರ್ಚೆಗೆ ವಯಸ್ಸು, ಶಿಕ್ಷಣ, ಭಾಷೆ, ಮಿತಿಯಿರಲಿಲ್ಲ ಅತ್ಯಂತ ಕೆಳಸ್ತರದಿಂದ ಬಂದಂತಹ ಹೆಣ್ಣು ಮಕ್ಕಳು ಅವರ ಬದುಕಿನ ಬವಣೆಗಳನ್ನು ಮಂಡಿಸಿದ ವಿಷಯದೊಂದಿಗೆ ಅನ್ವಯಿಸಿಕೊಂಡು ಮಾತನಾಡುವಾಗ ಅಪಾರ ನೋವಿತ್ತು. ಆಕ್ರೋಶವಿತ್ತು. ಆ ಮೂಲಕ ಭರವಸೆಯ ಬದುಕಿಗಾಗಿ ಈ ಎಲ್ಲಾ ಸಮಸ್ಯೆಗಳ ಆಧಾರದಲ್ಲಿ ಸಂಘಟನೆಯನ್ನು ಬಲಪಡಿಸಬೇಕೆಂಬ ಛಲವೂ ಇತ್ತು. ನಿರೀಕ್ಷಿಸಲಾಗದ ಉತ್ತಮ ಸಲಹೆ, ಸೂಚನೆ, ಅಭಿಪ್ರಾಯಗಳು ಹರಿದು ಬಂದು ಆಯೋಗಗಳು ಚರ್ಚೆಯನ್ನು ಶ್ರೀಮಂತಗೊಳಿಸಿದ್ದಷ್ಟೇ ಅಲ್ಲಾ... ಮಹಿಳಾ ಚಳುವಳಿಯನ್ನು ಮುನ್ನಡೆಸಲು ದಿಕ್ಸೂಚಿಗಳಾದವು.

ಸಮ್ಮೇಳನದ ನಿರ್ಣಯಗಳು : 1. ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಬಲಪಡಿಸಬೇಕು ಹಾಗೂ ಎಲ್ಲ ಬಡವರಿಗೂ ಬಿಪಿಎಲ್ ರೇಷನ್ ಕಾರ್ಡ್ ನೀಡಬೇಕು.

2. ಕರ್ನಾಟಕ ದೇವದಾಸಿ ಮಹಿಳೆಯರ ಬೇಡಿಕೆಗಳನ್ನು ಈಡೇರಿಸಿ, ಪರಿಹಾರ ಕಾರ್ಯಕ್ರಮಗಳನ್ನು ರೂಪಿಸಲು ಒತ್ತಾಯಿಸಿ ನಿರ್ಣಯ ಕೈಗೊಳ್ಳಲಾಯಿತು.
3. ಕೌಟುಂಬಿಕ ದೌರ್ಜನ್ಯ ಹಿಂಸೆ ತಡೆ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಒತ್ತಾಯಿಸಿ ನಿರ್ಣಯ.
4. ದಲಿತ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಗಂಭೀರ ಗಮನ ನೀಡುವಂತೆ ನಿರ್ಣಯ.
5. ಸಮರ್ಪಕ ನೀರು ಪೂರೈಕೆಗೆ ಆಗ್ರಹ.
6. ಆ್ಯಸಿಡ್ ದಾಳಿಗೆ ಸಂಬಂಧಿಸಿ ಸರ್ಕಾರದ ಮೃದು ಧೋರಣೆ ಖಂಡಿಸಿ, ಅಸುನೀಗಿದ ಫಾತಿಮಾಗೆ ಶ್ರದ್ಧಾಂಜಲಿ ನಿರ್ಣಯ.

- ಕೆ.ಎಸ್.ಲಕ್ಷ್ಮಿ

ಚುಚ್ಚುಮದ್ದು

ಐ.ಟಿ.ಗೆ ಭವಿಷ್ಯ ಇಲ್ಲ?

'ಇಂದು ಭಾರಿ ಪ್ರಮಾಣದಲ್ಲಿ ಸಂಪತ್ತನ್ನು ತಂದುಕೊಡುತ್ತಿರುವ ಮಾಹಿತಿ ತಂತ್ರಜ್ಞಾನಕ್ಕೆ ಖಂಡಿತ ಭವಿಷ್ಯವಿಲ್ಲ. ಅದರ ವಿಜೃಂಭಣೆ ಇನ್ನು ಐದಾರು ವರ್ಷ ನಡೆಯಬಹುದು. ವಿಜ್ಞಾನ ಸಂಶೋಧನೆಗೆ ಮಾತ್ರ ಈ ಜಗತ್ತಿನಲ್ಲಿ ಮುಪ್ಪಿಲ್ಲ'

ವಿಜ್ಞಾನಿ ಡಾ. ಸಿ.ಎನ್. ಆರ್. ರಾವ್

➤ ನಮ್ಮ ಆಳೋರಿಗೆ ಅರ್ಥ ಆಗಬೇಕಲ್ಲ ಸರ್.

★

'ಅರಮನೆ ನಮ್ಮ ಖಾಸಗಿ ಆಸ್ತಿ'

ಅರಮನೆ ಮೈದಾನವು ನಮ್ಮ ಖಾಸಗಿ ಆಸ್ತಿ. ಅದನ್ನು ಸರ್ಕಾರವು ಬಲವಂತವಾಗಿ ಸ್ವಾಧೀನ ಪಡಿಸಿಕೊಳ್ಳಲು ಸಾಧ್ಯವಿಲ್ಲ!

ಶ್ರೀಕಂಠದತ್ತನರಸಿಂಹ ರಾಜ ಒಡೆಯರ್

➤ ಹೌದು ಹೌದು . ಪಾಪ ಇಂಥ ಆಸ್ತಿ ಸಂಪಾದನೆ ಮಾಡೋದಕ್ಕೆ ಜೀವನವಿಡೀ ದುಡಿದು ದುಡಿದು ಎಷ್ಟು ಸಣ್ಣ ಆಗಿದ್ದಾರಲ್ಲಪ್ಪ ನಮ್ಮ ಮಹಾರಾಜರು.

★

ಅಧಿಕಾರದ ಆಸೆ ಇಲ್ಲ

'ಆಕ್ಟೋಬರ್ 3 ರಂದು ಅಧಿಕಾರ ಹಸ್ತಾಂತರದ ನಂತರ ಜನಸೇವೆ ಮಾಡುವ ಮಾರ್ಗ ತಮಗೆ ಗೊತ್ತಿದೆ. ಅಧಿಕಾರಕ್ಕಾಗಿ ಅಂಟಿ ಕೂರುವ ದುರಾಸೆ ನನಗಿಲ್ಲ. ಅಧಿಕಾರ ಅನುಭವಿಸುವ ಆಸೆಯಿಂದ ಮುಖ್ಯಮಂತ್ರಿ ಪದವಿಗೆ ನಾನು ಬಂದವನೂ ಅಲ್ಲ.'

- ಎಚ್.ಡಿ. ಕುಮಾರಸ್ವಾಮಿ.

➤ ನಿಜ, ನಿಜ ತಮಗೆ ಅಂಥಾ ಯಾವ ಆಸೆಯೂ ಇಲ್ಲ ಅನ್ನೋದು ನಮ್ಮ ಜನಕ್ಕೆ ಚೆನ್ನಾಗಿ ಗೊತ್ತಿದೆ.

★

ನಾನೇ ಮುಖ್ಯಮಂತ್ರಿ

'ಒಪ್ಪಂದದಂತೆ ಕುಮಾರ ಸ್ವಾಮಿ ಅಧಿಕಾರ ನೀಡಿದರೂ ಅಥವಾ ನೀಡದಿದ್ದರೂ ಮುಂದಿನ ಮುಖ್ಯಮಂತ್ರಿ ನಾನೇ.'

- ಬಿ.ಎಸ್. ಯಡಿಯೂರಪ್ಪ

➤ ಯಪ್ಪಾ, ಈ ಯಪ್ಪನ್ನ ಸಿ.ಎಂ. ಮಾಡದೇ ಹೋದರೆ ನಿಮಾನ್ಸಗೆ ದಾಖಲಾಗೋದು ಗ್ಯಾರಂಟಿ.

★

ಪಕ್ಷಕ್ಕೆ ಕಳಂಕ

'ಪಕ್ಷಕ್ಕೆ, ಕುಟುಂಬಕ್ಕೆ ಅಂಟಿರುವ ಕಳಂಕ ಹೋಗಲಾಡಿಸಲು ಯಾವುದೇ ತೀರ್ಮಾನ ತೆಗೆದುಕೊಳ್ಳುವ ಸಂದರ್ಭ ಬರಬಹುದು. ಬಿ.ಜೆ.ಪಿ. ಜತೆಗಿನ ಮೈತ್ರಿಯಿಂದ ಜೆ.ಡಿ.ಎಸ್.ನ ಸಿದ್ಧಾಂತಕ್ಕೆ ಧಕ್ಕೆಯಾಗಿದೆ ಮತ್ತು ಅಲ್ಪಸಂಖ್ಯಾತರು ಪಕ್ಷದಿಂದ ದೂರವಾಗುತ್ತಿದ್ದಾರೆ-ಎಂಬ ಅಭಿಪ್ರಾಯ ಕೇಳಿ ಬರುತ್ತಿದೆ. ಈ ವಿಷಯದಲ್ಲಿ ನಾನು ಪಕ್ಷದ ಮುಖಂಡರೊಂದಿಗೆ ಚರ್ಚಿಸುತ್ತೇನೆ'

ಎಚ್.ಡಿ. ಕುಮಾರಸ್ವಾಮಿ

➤ ಓ ಹೋ ಪರವಾಗಿಲ್ಲವೆ! ಪಕ್ಷದ ಹೆಸರಿನೊಳಗೊಂದು ಸಿದ್ಧಾಂತ ಇದೆ ಅನ್ನೋದು ಈಗಲಾದ್ರೂ ನೆನಪಾಗಿದೆ!

★

ತಲೆ ಇಲ್ಲದ ಕೋಳಿಗಳು

'ಅಮೆರಿಕ ಭಾರತ ಅಣು ಒಪ್ಪಂದವನ್ನು ವಿರೋಧಿಸುವವರು ತಲೆ ಇಲ್ಲದ ಕೋಳಿಗಳು!'

ರೋನೆನ್ ಸೇನ್,
ಅಮೆರಿಕದಲ್ಲಿನ ಭಾರತದ ರಾಯಭಾರಿ

➤ 'ಅವರೇನು ಭಾರತದ ರಾಯಭಾರಿಯೋ, ಅಥವಾ ಬುಷ್‌ನ ರಾಯಭಾರಿಯೋ'

ಪ್ರಕಾಶ್ ಕಾರಟ್
ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಗುಂಪಿಗೆ ಸೇರದ ಪದವನ್ನು ಪ್ರತ್ಯೇಕಿಸಿ

ಹಿಂದೂ ರಾಷ್ಟ್ರ ನಿರ್ಮಾಣದ ದೀರ್ಘ ಆಂದೋಲನದ ಕೆಲವೇ ಕೆಲವು ಹೆಜ್ಜೆ ಗುರುತುಗಳನ್ನಷ್ಟೇ ನಾವು ಇಲ್ಲಿಯವರೆಗೆ ಈ ಅಂಕಣದಲ್ಲಿ ಪರಿಚಯಿಸಿಕೊಂಡಿದ್ದೇವೆ. ಇನ್ನು ನಾವು ಅರಿಯಬೇಕಾದದ್ದು ಬಹಳ ಇದೆ. ಅಂಥ ಒಂದು ಕಿರು ಪ್ರಯತ್ನ ಇದು. ಉತ್ತರಿಸಲು ಪ್ರಯತ್ನಿಸಿ.

ಈ ಕೆಳಗೆ ಹಲವು ಸಾಧನ ಸಲಕರಣೆಗಳ ಪಟ್ಟಿಯನ್ನು ನೀಡಲಾಗಿದೆ. ಮಹಾನ್ ಹಿಂದೂರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬಳಸಲ್ಪಟ್ಟ ಸಾಧನಗಳಿವು. ಇದರಲ್ಲಿ ಕೆಲವು ಈ ಗುಂಪಿಗೆ ಸೇರದ ಸಾಧನಗಳಿರಬಹುದೇ? ಪರಿಶೀಲಿಸಿ, ಇದ್ದರೆ ಅವನ್ನು ಗುರುತಿಸಿ ಪ್ರತ್ಯೇಕಿಸಿ.

ಪಟ್ಟಿ 1 : ಸಾಧನ ಸಲಕರಣೆಗಳು

ತ್ರಿಶೂಲ	ಚೂರಿ	ಚಮಚ
ಈಟಿ	ಕೊಳ್ಳಿ	ಸೂಜಿ
ಕೊಡಲಿ	ಹಾರೆ	ಗ್ಯಾಸ್‌ಸಿಲಿಂಡರ್
ಪಿಕಾಸಿ	ಗುದ್ದಲಿ	ಹಗ್ಗ
ಚೈನು	ಸೋಡಾ ಬಾಟಲಿ	ಬಂದೂಕು

ಹಿಂದೂ ರಾಷ್ಟ್ರ ನಿರ್ಮಾಣ ಹೋರಾಟ ಎಂತಹ ಘನವಾದ ಹೋರಾಟ ಎಂಬುದು ತಮಗೆಲ್ಲಾ ತಿಳಿದಿರಬಹುದು. ಇದಕ್ಕೆ ಸಂಬಂಧಿಸಿದ ಕೆಲವು ಕೈಂಕರ್ಯಗಳ ಕೆಲವು ಪಟ್ಟಿ ಇಲ್ಲಿದೆ. ಅದರಲ್ಲಿ ಹಿಂದೂ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಸಂಬಂಧಿಸದ ಕೆಲವು ಚಟುವಟಿಕೆಗಳು ಸೇರಿಕೊಂಡಿವೆ. ಅವುಗಳನ್ನು ಗುರುತಿಸಿ, ಪ್ರತ್ಯೇಕಿಸಿ :

ಪಟ್ಟಿ 2 : ಮಹಾನ್ ಕೈಂಕರ್ಯಗಳು

- *ತುಂಬು ಗರ್ಭಿಣಿಯ ಹೊಟ್ಟೆಗೆ ತ್ರಿಶೂಲದಿಂದ ಚುಚ್ಚಿ ಸೀಳಿ ಮಗುವನ್ನು ಹೊರತೆಗೆದು ಪೆಟ್ರೋಲ್ ಹಾಕಿ ಸುಡುವುದು.*
- *ಕ್ರೈಸ್ತ ಸನ್ಯಾಸಿಯರ ಮೇಲೆ ಅತ್ಯಾಚಾರವೆಸಗಿ ಅದನ್ನು ಬಹಿರಂಗವಾಗಿ ಸಮರ್ಥಿಸುವುದು.*
- *ಕುಗ್ರಾಮಗಳಲ್ಲಿನ ಕುಷ್ಟ ರೋಗಿಗಳಿಗೆ ನಡುರಾತ್ರಿವರೆಗೆ ಸೇವೆ, ಚಿಕಿತ್ಸೆ ಮಾಡಿ ದಣಿದು ಬಂದು ಜೀಪಿನಲ್ಲಿ ನಿದ್ರಿಸುತ್ತಿದ್ದ ಸಮಾಜ ಸೇವಕರನ್ನು ಆತನ ಎರಡು ಎಳೆಯ ಮಕ್ಕಳ ಸಹಿತ ಅವರಿದ್ದ ಜೀಪಿಗೆ ಬೆಂಕಿ ಇಟ್ಟು ಸುಡುವುದು.*
- *ಕೃಷಿಗೆ ಹೆಚ್ಚು ಹಣ ನೀಡಿ ರೈತರ ಆತ್ಮಹತ್ಯೆ ತಪ್ಪಿಸಿ ಎಂದು ಆಗ್ರಹಿಸಿ ಚಳುವಳಿ ನಡೆಸುವುದು.*
- *ಕೋಮು ಗಲಭೆಗೆ ಹೆದರಿ ಜನರು ಆಶ್ರಯ ಪಡೆದಿದ್ದ ಮನೆಗೆ ಹೊರಗಿನಿಂದ ಬೀಗಹಾಕಿ ಬೆಂಕಿ ಹಚ್ಚಿ, ಒಳಕ್ಕೆ ಗ್ಯಾಸ್ ಸಿಲಿಂಡರ್ ಎಸೆಯುವುದು.*
- *ಸತ್ತ ದನಗಳ ಚರ್ಮ ಸುಲಿಯುತ್ತಿದ್ದ ದಲಿತರೈವರನ್ನು ನಡುಬೀದಿಯಲ್ಲಿ ಕಟ್ಟಿಹಾಕಿ ಕಲ್ಲು ಹೊಡೆದು ಕೊಲ್ಲುವುದು.*
- *ಸತ್ತ ಗಂಡನ ಉರಿಯುವ ಚಿತೆಗೆ ಹೆಂಡತಿಯನ್ನು ನೂಕುವುದು. ಈ 'ಸತಿ'ಗೊಂದು ಸುಂದರ ದೇವಾಲಯ ಕಟ್ಟುವುದು.*
- *ದಲಿತರಿಗೆ ದೇವಾಲಯ ಪ್ರದೇಶದ ಹಕ್ಕು ಕೊಡುವುದು.*
- *ಮುಸ್ಲಿಮರ, ಕ್ರಿಶ್ಚಿಯನ್ನರ ಗೋರಿಗಳನ್ನು ಅಗೆದು ಹಾಕುವುದು.*
- *ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮಸೀದಿ ಧ್ವಂಸ ಮಾಡುವುದು.*
- *ಜಾತೀಯತೆ, ಅಸ್ಪೃಶ್ಯತೆಯಿಂದ ರೋಸಿಹೋಗಿ ಮತಾಂತರ ಆಗುವವರನ್ನು ಹಿಡಿದು ಬಡಿಯುವುದು.*
- *ಅಂತರ್ಜಾತೀಯ ಮತ್ತು ವಿಧವಾ ವಿವಾಹಗಳನ್ನು ಸಂಘಟಿಸುವುದು.*
- *ಅಲ್ಪಸಂಖ್ಯಾತರಿಗೆ ಸೇರಿದ ಕಾರ್ಖಾನೆ, ಕಛೇರಿ, ಅಂಗಡಿ, ಹೋಟೆಲು, ವಾಹನ, ಇತ್ಯಾದಿಗಳನ್ನು ಗುರುತಿಸಿ ಪಟ್ಟಿ ಮಾಡಿಕೊಂಡು ಅಗ್ನಿದೇವನಿಗೆ ಸಮರ್ಪಿಸುವುದು.*

ಹ್ಹ...ಹ್ಹಾ...ಹ್ಹಾ...

ಓದುತ್ತಿಲ್ಲ

ಬಹಳ ದಿನಗಳ ನಂತರ ಭೇಟಿಯಾದ ಹಿರಿಯರಿಬ್ಬರು ಮಾತನಾಡಿಕೊಳ್ಳುತ್ತಿದ್ದರು.

ಒಬ್ಬರು: ಏನಯ್ಯಾ, ನಿನ್ನ ಮಗ ಗುಂಡ ಏನು ಓದುತ್ತಿದ್ದಾನೆ. ಯಾವ ಕಾಲೇಜು?

ಮತ್ತೊಬ್ಬರು : ಓ ಗುಂಡಾನಾ, ಅವನು ಏನೂ ಓದುತ್ತಿಲ್ಲ. ಅವನ ಕಾಲೇಜು ವಿದ್ಯಾಭೂಷಣ ಜ್ಞಾನ ಸಾಗರ ಮಹಾ ವಿದ್ಯಾಲಯ ಕಾಲೇಜು..

ಹಮಾಲಿಗಳ ಜೀವನದ ಸಂಕಷ್ಟಗಳನ್ನು ವಿವರಿಸುವ ಅಗತ್ಯವೇ ಇಲ್ಲ. ಅವರ ಕೆಲಸ ನೋಡಿದರೆ ಅದು ಅರ್ಥವಾಗಿ ಹೋಗುತ್ತದೆ. ಆದರೆ ಅದು ಸರ್ಕಾರಕ್ಕೆ ಅರ್ಥವಾಗುವುದೇ ಇಲ್ಲ. ಇವರನ್ನು ಸಂಘಟಿಸಿ ಹೋರಾಟಕ್ಕಿಳಿಸುವ ಕೆಲಸ ನಡೆದಿದೆ.

ಮೂಟೆ ಹೊರುವ ಬೆನ್ನ ಮೇಲೆ ಸಂಕಷ್ಟಗಳ ಭಾರ

ಕೆ. ಮಹಾಂತೇಶ್

ರಾಜ್ಯದ ಮೂಲೆ ಮೂಲೆಗಳಲ್ಲಿ ಸುಮಾರು 5 ಲಕ್ಷ ಹಮಾಲಿ ಕಾರ್ಮಿಕರು ನಿತ್ಯ ತಮ್ಮ ಶ್ರಮವನ್ನು ಮಾಡುತ್ತಾ ಬದುಕುತ್ತಿದ್ದಾರೆ. ಅಸಂಘಟಿತವಾಗಿರುವ ಈ ವಿಭಾಗವು ದಿನಪೂರ್ತಿ ದುಡಿದರೆ ಮಾತ್ರ ಆ ದಿನದ ಅನ್ನ ಎಂಬಂತಹ ಸ್ಥಿತಿಯಲ್ಲಿದ್ದಾರೆ. ಅಲ್ಲಲ್ಲಿ ಸ್ಥಳೀಯವಾಗಿ ಸಂಘಗಳನ್ನು ಕಟ್ಟಿಕೊಂಡು ಅಲ್ಪ-ಸ್ವಲ್ಪ ಪ್ರಮಾಣ ಕೂಲಿದರಗಳನ್ನು ಹೆಚ್ಚಿಸಿಕೊಂಡಿದ್ದಾರೆ. ಇತ್ತ ಸರ್ಕಾರದ ಕೆಲವು ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಅಷ್ಟುಬಿಟ್ಟರೆ ಬಹುತೇಕ ಹಮಾಲಿ ಕಾರ್ಮಿಕರು ಅತ್ಯಂತ ಕಷ್ಟದಲ್ಲೇ ದಿನಗಳನ್ನು ದೂಡುತ್ತಿದ್ದಾರೆ. ರಟ್ಟೆಯಲ್ಲಿ ಶಕ್ತಿ ಬರುವವರೆಗೆ ಮಾತ್ರ ದುಡಿಯುವ ಈ ಶ್ರಮಜೀವಿಗಳು ಆ ಶಕ್ತಿ ಕುಂದಿದಾಗ ಮುಂದೆ ಹೇಗೆ ಬದುಕು ಎಂಬ ಚಿಂತೆಯಲ್ಲಿ ದಿನ ಕಳೆಯುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ ಹಮಾಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಅವರಿಗೆ ನಿರಂತರ ಕೆಲಸ ಮತ್ತು ಅವರಿಗೆ ಕಾನೂನುಬದ್ಧವಾಗಿ ಸಿಗಬೇಕಾದ ಸವಲತ್ತುಗಳಿಗಾಗಿ ರಾಜ್ಯದ ಹಮಾಲಿ ಕಾರ್ಮಿಕರು ಕಳೆದ ಹಲವಾರು ವರ್ಷಗಳಿಂದ ಸಿಐಟಿಯು ನೇತೃತ್ವದಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಂಘಟಿಸುತ್ತಿದ್ದಾರೆ ಮತ್ತು ಹಾಗೇ ಸಂಘಟಿತರಾದ ಪರಿಣಾಮ ಹಾಗಿಯೇ, ಹಲವಾರು ಧಾಳಿ- ದಬ್ಬಾಳಿಕೆಗಳನ್ನು ಎದುರಿಸಿಯೂ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ.

ನೆರೆಯ ಕೇರಳ, ತಮಿಳುನಾಡು ರಾಜ್ಯಗಳಲ್ಲಿ ಹಮಾಲಿ ಕಾರ್ಮಿಕರು ಪ್ರಬಲರಾಗಿ ಸಂಘಟಿತರಾಗಿದ್ದರಿಂದ ಇ.ಎಸ್.ಐ, ಪಿ.ಎಫ್ ಹಾಗೂ ಪಿಂಚಣಿ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಅಲ್ಲಿನ ಸರ್ಕಾರಗಳು ಹಮಾಲಿ ಕಾರ್ಮಿಕರಿಗೆ ಹಲವು ಜನಕಲ್ಯಾಣ ಕಾರ್ಯಕ್ರಮಗಳನ್ನು ಘೋಷಿಸಿವೆ. ಆದರೆ ಕರ್ನಾಟಕದಲ್ಲಿ ಮಾತ್ರ ಈ ಬಹುದೊಡ್ಡ ವಿಭಾಗ ಇದರಿಂದ ವಂಚಿತವಾಗಿದೆ.

ಎಲ್ಲಿ ಸಣ್ಣ ಪ್ರಮಾಣದಲ್ಲಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರೋ ಅಲ್ಲಿ ಕೇವಲ ಸಣ್ಣಮಟ್ಟ ಲಾಭಗಳನ್ನು ಮಾತ್ರವೇ ಪಡೆಯಲು ಸಾಧ್ಯವಾಗಿದೆ. ಹೀಗಾಗಿ ಈ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡ ಸಿಐಟಿಯು ರಾಜ್ಯದಲ್ಲಿ - ಹಮಾಲಿ ಕಾರ್ಮಿಕರ ರಾಜ್ಯ ಫೆಡರೇಷನ್ ಮಾಡುವ ಸಲುವಾಗಿ ಕಳೆದ ಹಲವು ವರ್ಷಗಳಿಂದ ಶ್ರಮಿಸುತ್ತಿದೆ. ಹಲವು ರಾಜ್ಯ ಮಟ್ಟದ ಸಮಾವೇಶ, ಸಮ್ಮೇಳನ, ರ್‍ಯಾಲಿಗಳನ್ನು- ಜಾಥಾಗಳನ್ನು ನಡೆಸಿ ಸಾವಿರಾರು ಹಮಾಲಿ ಕಾರ್ಮಿಕರನ್ನು ಜಾಗೃತಿಗೊಳಿಸುವಲ್ಲಿ ಮತ್ತು ಸರ್ಕಾರದ ಮುಂದೆ ಬೇಡಿಕೆಗಳನ್ನು ಮಂಡಿಸುವಲ್ಲಿ ಪ್ರಯತ್ನಿಸಿದೆ.

ಕಾರ್ಮಿಕ ವರ್ಗದ ಚಳುವಳಿಗೆ ನಿರ್ಧಾರ

ಕಾರ್ಮಿಕ ವರ್ಗದ ಪ್ರಮುಖ ಜ್ವಲಂತ ಸಮಸ್ಯೆಗಳ ಇತ್ಯರ್ಥಕ್ಕೆ ಆಗ್ರಹಿಸಿ ದೇಶವ್ಯಾಪಿ ಚಳುವಳಿ ನಡೆಸಲು ಕಾರ್ಮಿಕ ಸಂಘಟನೆಗಳು ಮುಂದಾಗಿವೆ. ಇತ್ತೀಚಿಗೆ ದೆಹಲಿಯಲ್ಲಿ ಸೇರಿದ್ದ ಸ್ಪಾನ್ಸರಿಂಗ್ ಕಮಿಟಿ ಆಫ್ ಟ್ರೇಡ್ ಯೂನಿಯನ್ಸ್ (ರಾಜ್ಯದಲ್ಲಿ ಜೆಎಫ್) ಎಲ್ಲಾ ರಾಜ್ಯಗಳಲ್ಲಿ ಜಂಟಿ ಸಮಾವೇಶಗಳನ್ನು ಮತ್ತು ನಂತರ ಜೈಲ್ ಭರೋ/ ಚಳುವಳಿ ನಡೆಸಲು ನಿರ್ಧರಿಸಿವೆ.

ಈ ಸಮಾವೇಶಗಳನ್ನು ನವೆಂಬರ್ ತಿಂಗಳಲ್ಲಿ ಸಂಘಟಿಸುವುದು, ನವೆಂಬರ್ 19 ರಂದು ಗುತ್ತಿಗೆ (ಕಂಟ್ರಾಕ್ಟ್) ಕಾರ್ಮಿಕರ ಅಖಿಲ ಭಾರತ ಸಮಾವೇಶ, ಡಿಸೆಂಬರ್ 4 ಮತ್ತು 5 ರಂದು ಎಲ್ಲಾ ಕಾಮಿಕ ಸಂಘಟನೆಗಳ ನೇತೃತ್ವದಲ್ಲಿ ಜೈಲ್ ಭರೋ ನಡೆಯಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಪ್ರಧಾನವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಕನಿಷ್ಠ ಕೂಲಿ, ಭವಿಷ್ಯ ನಿಧಿ ಇಲ್ಲವೇ ಇಲ್ಲದ ಗಿರಣಿ/ಮಿಲ್/ಗೋಡೌನ್ ಹಮಾಲಿ ಕಾರ್ಮಿಕರು

ರಾಜ್ಯದಲ್ಲಿರುವ ಅಕ್ಕಿ, ಎಣ್ಣೆ, ರವೆ, ಹತ್ತಿ, ಗಿರಣಿ, ಮಿಲ್‌ಗಳಲ್ಲಿ/ಎಫ್‌ಸಿಐ, ಕೆಎಸ್‌ಎಫ್‌ಸಿ, ರೈಲ್ವೆ ಗೂಡ್‌ಶೆಡ್ ಮತ್ತಿತರೆ ಖಾಸಗಿ ಗೋಡೌನ್‌ಗಳಲ್ಲಿ ಸಾವಿರಾರು ಹಮಾಲಿ ಕಾರ್ಮಿಕರು ಹಗಲಿರುಳೆನ್ನದೆ ದುಡಿಯುತ್ತಿದ್ದಾರೆ. ಆದರೆ ನಿತ್ಯ ಕಷ್ಟ ಪಟ್ಟು ದುಡಿಯುತ್ತಿರುವ ಈ ಕಾರ್ಮಿಕರಿಗೆ ಕನಿಷ್ಠ ವೇತನವೇ ಇಲ್ಲವಾಗಿದೆ.

ಕನಿಷ್ಠ ಕೂಲಿ, ಬೋನಸ್, ಪಿಂಚಣಿ ಸೌಲಭ್ಯ ಹಾಗೂ ಭವಿಷ್ಯ ನಿಧಿಗಾಗಿ ಈ ಕಾರ್ಮಿಕರು ಸಂಘ ಕಟ್ಟಿಕೊಂಡು ಹೋರಾಡುತ್ತಿದ್ದರೂ, ಸರ್ಕಾರದ ನಿರ್ಲಕ್ಷ್ಯ ಹಾಗೂ ಮಾಲೀಕರ ಕಿರುಕುಳದಿಂದಾಗಿ ಅವು ದೊರೆತಿಲ್ಲ. ಅದಾಗ್ಯೂ ರಾಜ್ಯದ ಸಿರುಗುಪ್ಪ, ಹೊಸಪೇಟೆ, ಬಳ್ಳಾರಿ, ಗಂಗಾವತಿ, ಚಳ್ಳಕೆರೆ ಮೊದಲಾದ ಕಡೆಗಳಲ್ಲಿ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಸಂಘಟಿತರಾಗಿ ಸಮರಶೀಲ ಚಳುವಳಿಗಳನ್ನು ನಡೆಸಿದ ಪರಿಣಾಮ ಹಲವು ಸವಲತ್ತುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.


"ರಟ್ಟೆಯ ಬಿಟ್ಟರೇ ಬೇರೆ ಆಸ್ತಿಯೇ ಇಲ್ಲದ" ಈ ಬಡ ಹಮಾಲಿ ಕಾರ್ಮಿಕರು ನಿತ್ಯ ಬದುಕಿಗಾಗಿ ಹೋರಾಡಬೇಕಾದ ಸ್ಥಿತಿ ರಾಜ್ಯದಲ್ಲಿ ಇದೆ.

ಈ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ, ಕಾರ್ಖಾನೆ ಕಾನೂನು ಅಂಗಡಿಗಳ ಮತ್ತು ವ್ಯಾಪಾರ ಸಂಸ್ಥೆಗಳ ಕಾನೂನು, ಭವಿಷ್ಯ ನಿಧಿ ಕಾನೂನು, ಕಾರ್ಮಿಕ ವಿಮೆ, ಗ್ರಾಚ್ಯೂಟಿ ಕಾನೂನು ಕೈಗಾರಿಕಾ ವಿವಾದಗಳ ಕಾನೂನು, ಅನ್ವಯವಾಗಬೇಕು ಆದರೆ ಸರ್ಕಾರ ಮತ್ತು ಕಾರ್ಮಿಕ ಇಲಾಖೆ ಈ ದಿಶೆಯಲ್ಲಿ ಗಮನ ನೀಡಿಲ್ಲ.

ಹೊಟ್ಟೆ ತುಂಬಿಸಲು ಪರದಾಟ ಇದು ಟೌನ್/ಬಜಾರ್ ಮತ್ತು ಗ್ರಾಮೀಣ ಹಮಾಲಿ ಕಾರ್ಮಿಕರ ನಿತ್ಯ ಕಥೆ

ಲಾರಿ ಮತ್ತು ವಾಹನಗಳಲ್ಲಿ ಲೋಡಿಂಗ್ ಅನ್ ಲೋಡಿಂಗ್ ಮಾಡುತ್ತಾ ಎತ್ತಿನ ಗಾಡಿ, ತಳ್ಳುವಗಾಡಿ, ಬಸ್ ಮತ್ತು ರೈಲ್ವೆ ನಿಲ್ದಾಣಗಳಲ್ಲಿ ಈ ಹಮಾಲಿಗಳು ದುಡಿಯುತ್ತಿದ್ದಾರೆ. ಅಲ್ಲದೆ, ಗ್ರಾಮೀಣ ಪ್ರದೇಶಗಳಲ್ಲಿ ತೂಕ ಮಾಡುವುದು, ತೂಕ, ಲೋಡಿಂಗ್ ಮಾಡುವ ಕಾಯಕದಲ್ಲಿ ಇವರು ನಿರತರಾಗಿದ್ದಾರೆ.

ರಾಜ್ಯದಲ್ಲಿ ಪ್ರತಿವರ್ಷ ನಡೆಯುತ್ತಿರುವ ಸಾವಿರಾರು ಕೋಟಿ ಆರ್ಥಿಕ ವಹಿವಾಟಿಗೆ, ರಾಜ್ಯದ ಖಜಾನೆಗೆ ತಮ್ಮ ಬೆವರಿನ ಮೂಲಕ ಭಾರೀ ಪ್ರಮಾಣದ ಆದಾಯವನ್ನು ನೀಡುತ್ತಿದ್ದರೂ, ಈ ಬಡ ಹಮಾಲಿ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ಮಾತ್ರ ಶೂನ್ಯ. ತಮ್ಮ ಶ್ರಮವನ್ನು ಮಾರಿ ಬದುಕುತ್ತಿರುವ ಈ ಕಾರ್ಮಿಕರಿಗೆ ಪಿಂಚಣಿ, ಆರೋಗ್ಯ ಸವಲತ್ತುಗಳಿಲ್ಲ. ವಸತಿ, ರೇಷನ್‌ಕಾರ್ಡ್‌ಗಳಿಂದಲೂ ಈ ಕಾರ್ಮಿಕರು ವಂಚಿತರಾಗಿದ್ದಾರೆ. ಇಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರಿಗೆ ಸಮಾನ ಕೂಲಿ, ಹೆರಿಗೆ ಭತ್ಯೆ,



ಗುರುತಿನ ಚೀಟಿ ಸಿಗುತ್ತಿಲ್ಲ. ಅಲ್ಲದೆ ಹಲವು ಕಡೆಗಳಲ್ಲಿ ಲೈಂಗಿಕ ಕಿರುಕುಳಗಳು ನಡೆದಿವೆ.

ರಾಜ್ಯದಲ್ಲಿ ಅಧಿಕಾರ ನಡೆಸಿದ ಈ ಹಿಂದಿನ ಕಾಂಗ್ರೆಸ್ ಸರ್ಕಾರಕ್ಕೆ ಹಮಾಲಿ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಸಲ್ಲಿಸಿ ಪಿಂಚಣಿ ಮತ್ತಿತರೆ ಬೇಡಿಕೆಗಳ ಬಗ್ಗೆ ವಿವರಿಸಲಾಗಿತ್ತು. ಅಲ್ಲದೆ ಅಸಂಘಟಿತರ ಕಲ್ಯಾಣಕ್ಕಾಗಿ ಮಸೂದೆಯೊಂದನ್ನು ಜಾರಿಗೊಳಿಸಲು ಒತ್ತಡ ಹೇರಲಾಗಿತ್ತು. ಆದರೆ ನಂತರ ಅದು ನೆನೆಗುದಿಗೆ ಬಿತ್ತು. ಈಗಿರುವ ಜೆಡಿ(ಎಸ್)-ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಹಮಾಲಿ ಕಾರ್ಮಿಕರ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸುತ್ತಿಲ್ಲ. ಬದಲಾಗಿ ಕೇವಲ ಸುಳ್ಳು ಭರವಸೆಗಳನ್ನು ನೀಡುತ್ತಾ, ಗ್ರಾಮ ವಾಸ್ತವ್ಯ ಮಾಡುತ್ತಾ ಪ್ರಚಾರದಲ್ಲಿ ನಿರತವಾಗಿದೆ. ಮತ್ತೊಂದೆಡೆ ಜನಶ್ರೀ ಭೀಮಾ ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದರೂ ಅದಕ್ಕೆ ಹಮಾಲಿ ಕಾರ್ಮಿಕರೇ ಹಣ ನೀಡಬೇಕೆಂದು ಷರತ್ತು ವಿಧಿಸಲಾಗಿದೆ. ಅಲ್ಲದೆ ಆ ಸೌಲಭ್ಯ ಪಡೆದ ಹಮಾಲಿ ಕಾರ್ಮಿಕರ ಮಕ್ಕಳಿಗೆ ಕೇವಲ 4 ವರ್ಷಕ್ಕೆ ಮಾತ್ರ ವಿದ್ಯಾರ್ಥಿ ವೇತನ (9 ರಿಂದ 12 ತರಗತಿ) ಸೀಮಿತ ಗೊಳಿಸಲಾಗಿದೆ.

ಹೀಗಾಗಿ, ಜನಶ್ರೀ ವಿಮಾ ಕಂತಿನ ಹಣವನ್ನು ಸರ್ಕಾರವೇ ತುಂಬಬೇಕು ಮತ್ತು ಅವರ ಮಕ್ಕಳಿಗೆ ನೀಡುವ ವಿದ್ಯಾರ್ಥಿ ವೇತನ ಹೆಚ್ಚಿಸಬೇಕು ಮತ್ತು ಅದನ್ನು ಪ್ರಾಥಮಿಕ ತರಗತಿಯಿಂದಲೇ ನೀಡಬೇಕೆಂದು ಒತ್ತಡ ಹೇರಬೇಕಿದೆ.

ಎಪಿಎಂಸಿ ಹಮಾಲಿಗಳಿಗಿಲ್ಲ ನೆಮ್ಮದಿ ಬದುಕು....

ರಾಜ್ಯದ 483 ಕೃಷಿ ಉತ್ಪನ್ನ 141 ಪ್ರಮುಖ ಮಾರುಕಟ್ಟೆ ಹಾಗೂ ಉಪ ಮಾರುಕಟ್ಟೆಗಳಲ್ಲಿ ಹಗಲಿರುಳೆನ್ನದೆ ದುಡಿಯುತ್ತಿರುವ ಲಕ್ಷಾಂತರ ಹಮಾಲಿ ಕಾರ್ಮಿಕರ ಬದುಕು ಮೇಲೆ ವಿವರಿಸಿದ್ದಕ್ಕಿಂತ ಭಿನ್ನವಾಗಿಲ್ಲ.

ನಿತ್ಯ ತಮ್ಮ ಶ್ರಮವನ್ನೇ ಮಾರಿಕೊಳ್ಳುತ್ತಾ ಶ್ರೀಮಂತರಿಗೆ ಮತ್ತು ಸರ್ಕಾರಕ್ಕೆ ಕೋಟಿ-ಕೋಟಿ ದುಡಿದು ಕೊಟ್ಟರೂ ಅವರ ತುತ್ತಿನ ಚೀಲ ತುಂಬಿಸಲು ಮಾತ್ರ ಹೆಣಗಾಡ ಬೇಕಾಗಿರುವುದು ದುರಂತದ ಸಂಗತಿ.

ಇದಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಿರುವ ಎಪಿಎಂಸಿ ಕಾನೂನಿಗೆ ತಿದ್ದುಪಡಿ ತಂದು ಇಡೀ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನೇ ನಾಶಪಡಿಸಲು ಟೊಂಕಕಟ್ಟಿ ನಿಂತಿವೆ. ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಿ, ಅಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಬದಲು, ಸುಧಾರಣೆಯ ನೆಪದಲ್ಲಿ ಕೃಷಿ ಮಾರುಕಟ್ಟೆಗಳನ್ನೇ ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳ ಕೈಗಿಡುವ ಹುನ್ನಾರ ನಡೆಸಿವೆ.

ಈ ಹಿನ್ನೆಲೆಯಲ್ಲಿ ಕೇಂದ್ರ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಎಪಿಎಂಸಿ ಕಾನೂನು ತಿದ್ದುಪಡಿಯನ್ನು ಪುನರ್ ಪರಿಶೀಲಿಸಲು ಒತ್ತಾಯಿಸಿ ಹೋರಾಟ ಬಲಗೊಳಿಸಬೇಕಾಗಿದೆ.

ಸೆಪ್ಟೆಂಬರ್ 5 ರಂದು ಹುಬ್ಬಳ್ಳಿಯಲ್ಲಿ ಸಮಾವೇಶದ ಆರಂಭ

ಈ ಹಿನ್ನೆಲೆಯಲ್ಲಿ ವಿವಿಧ ವಿಭಾಗಗಳಲ್ಲಿ ಹಂಚಿ ಕಾರ್ಯನಿರತವಾಗಿರುವ ಈ ಹಮಾಲಿಗಳನ್ನು ಸಂಘಟಿಸಲು ಫೆಡರೇಷನ್ ತೀರ್ಮಾನಿಸಿ ಕೆಲಸಕ್ಕಿಳಿದಿದೆ. ಆದರ ಭಾಗವಾಗಿ ರಾಜ್ಯದ 141 ಪ್ರಮುಖ ಹಾಗೂ 483 ಉಪ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಕೆಲಸ ಮಾಡುತ್ತಿರುವ ಎಪಿಎಂಸಿ ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶಗಳನ್ನು ಸೆಪ್ಟೆಂಬರ್ 5ರಂದು ಹುಬ್ಬಳ್ಳಿಯಲ್ಲಿ, ಅಕ್ಕಿ-ಎಣ್ಣೆ, ಬೇಳೆ ಮಿಲ್‌ಗಳಲ್ಲಿ ಕೆಲಸ ಮಾಡುತ್ತಿರುವ ಗಿರಣಿ ಹಮಾಲಿ ಕಾರ್ಮಿಕರ ಸಮಾವೇಶವನ್ನು ಸೆಪ್ಟೆಂಬರ್ 13ರಂದು ಬಳ್ಳಾರಿ ಜಿಲ್ಲೆಯ ಸಿರಗುಪ್ಪದಲ್ಲಿ, ಹಾಗೂ ಟೌನ್ ಬಜಾರ್ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರ ರಾಜ್ಯ ಸಮಾವೇಶಗಳನ್ನು ಸೆಪ್ಟೆಂಬರ್ 27ರಂದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ನಡೆಸಲಾಗುತ್ತಿದೆ.

ನಾಲ್ಕು ದಿಕ್ಕಿನಿಂದ ಕೆಲಸ

ರಾಜ್ಯದ 141 ಪ್ರಮುಖ ಕೃಷಿ ಉತ್ಪನ್ನ ಮಾರುಕಟ್ಟೆಗಳು ನಾಲ್ಕು ವಿಭಾಗಕ್ಕೆ ಒಳಪಡುತ್ತವೆ. ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲಬರ್ಗಾ ವಿಭಾಗಗಳಲ್ಲಿ ಈ ಮಾರುಕಟ್ಟೆಗಳು ಕೆಲಸ ಮಾಡುತ್ತಿವೆ.

ಹಾಗಾಗಿಯೇ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ ರಾಜ್ಯದ ನಾಲ್ಕು ನಿಟ್ಟಿನಿಂದಲೂ ಓಡಾಡಿ, ಯಾವುದೇ ಹಮಾಲಿ ಸಂಘವನ್ನು ಸ್ಥಾಪಿಸಿಕೊಂಡಿದ್ದರೂ ಯಾವುದೇ ಸಂಘಟನೆ ಜೊತೆ ಗುರ್ತಿಸಿಕೊಂಡಿದ್ದರೂ ಹಮಾಲಿ ಕಾರ್ಮಿಕರ ಪ್ರಶ್ನೆಯಲ್ಲಿ ಎಲ್ಲರನ್ನು ಒಂದುಗೂಡಿಸುವ ಭಾಗವಾಗಿ ಈ ಮೂರು ವಿಭಾಗಗಳ ಸಮಾವೇಶವನ್ನು ನಡೆಸಲು ಮುಂದಾಗಿದೆ. ರಾಜ್ಯದ ಪದಾಧಿಕಾರಿಗಳು ಈ ಸಂಬಂಧ ಪ್ರವಾಸ ಮಾಡಿ ಸಿದ್ಧತೆ ನಡೆಸಿದ್ದಾರೆ.ಈ ಸಮಾವೇಶಗಳು ಪ್ರಬಲ ಚಳವಳಿಯನ್ನು ರೂಪಿಸಲಿವೆ ಎಂದು ಹೇಳುತ್ತಾರೆ ಸಂಘದ ರಾಜ್ಯ ಅಧ್ಯಕ್ಷರಾದ ಎಸ್.ಪ್ರಸನ್ನಕುಮಾರ್, ಪ್ರಧಾನ ಕಾರ್ಯದರ್ಶಿ ಡಿ.ವೆಂಕಟರಮಣರವರು.

○

ಬಾಳು

ಈ ಬಾಳು ಹಾಳಲ್ಲ ಹೇಳುವೆನು ತಾಳು
ಮೌಢ್ಯವೇ ಎಲ್ಲವನು ಮಾಡುವುದು ಹಾಳು
ನಿನ್ನ ಮೌಢ್ಯವ ಬಳಸಿ ಕಪಟಿಗಳು ಕೇಳು
ಕದಿಯುತ್ತ ಬಂದಿಹರು ನೀನುಂಬ ಕೂಳು

- ವಿಡಂಬಾರಿ

ಚೀನಾ - ಭಾರತ : ಕೆಲವು ಸಮಾನಾಂತರ ಸತ್ಯಗಳು
ಅವರಿಂದ ನಾವೇನು ಕಲಿಯಬಹುದು?

ಅನು: ಕೆ.ಆರ್.ಹೆಗ್ಡೆ

ಚೀನಾ ಪತ್ರ

ಇದು ಚೀನಾದ ಶಾಂಘಾಯ್‌ಯಲ್ಲಿರುವ ಬೃಹತ್ 'ಫಾರ್ಚ್ಯೂನ್ ಫಿಫ್ಟಿ' ಗುಂಪಿನ ಉನ್ನತ ಕಂಪನಿಯೊಂದರ ಮಾರುಕಟ್ಟೆ ನಿರ್ದೇಶಕರೊಬ್ಬರಾದ **ಮಿಲಿಂಡ್ ಯೆಡ್ಕರ್** ಎಂಬುವರು ಬರೆದಿರುವ ಪತ್ರ (ಇಕನಾಮಿಕ್ ಟೈಮ್ಸ್, ಜೂನ್ 15) ನಮ್ಮ ಮುಂದಿರುವ ಪ್ರಶ್ನೆ ಭಾರತ ಚೀನಾವನ್ನು ಮೀರಿಸಬಹುದೇ ಎಂದಲ್ಲ, ಬದಲಾಗಿ ಅದರಿಂದ ಏನನ್ನು ಕಲಿಯಬಹುದು ಎಂಬುದು ಎನ್ನುತ್ತಾರೆ

ಅದು 1937ನೇ ಇಸವಿ; ಯುದ್ಧಪೀಡಿತ ಚೀನಾವು ಬಿಕ್ಕಟ್ಟನ್ನು ಎದುರಿಸುತ್ತಿತ್ತು. ರೋಗರುಜಿನಗಳು ಹರಡಿದ್ದವು; ವೈದ್ಯರುಗಳ ತೀವ್ರ ಕೊರತೆ ಇತ್ತು. ಜನತಾ ವಿಮೋಚನಾ ಸೇನೆ (ಪೀಪಲ್ಸ್ ಲಿಬರೇಷನ್ ಆರ್ಮಿ)ಯ ಜನರಲ್ ಝೂಡೆ ಸಹಾಯಕ್ಕಾಗಿ ಭಾರತದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರುರವರಿಗೆ ಮನವಿ ಮಾಡಿದರು. ಆಗ ಇಂಡಿಯನ್ ಮೆಡಿಕಲ್ ಮಿಷನ್ ಹುಟ್ಟಿಕೊಂಡಿತು. ಡಾ.ಕೊಟ್ನೀಸ್‌ರನ್ನೊಳಗೊಂಡ ಆರು ಸದಸ್ಯರ ತಂಡವು ಚೀನಾವನ್ನು ತಲುಪಿತು. ಇಂದಿಗೆ ಚೀನಾದಲ್ಲಿ ವೈದ್ಯರುಗಳ ಸಂಖ್ಯೆ ಹಾಗೂ ಜನರ ಆಯುಷ್ಯದ ಪ್ರಮಾಣವು ಭಾರತಕ್ಕಿಂತ ಹೆಚ್ಚಾಗಿದೆ.

> **ಭಾರತ ಮತ್ತು ಚೀನಾದ ನಡುವಣ ಸ್ಪರ್ಧೆಯನ್ನು ಮರೆಯೋಣ ಈ ಎರಡೂ ದೇಶಗಳು ಪರಸ್ಪರ ಅರಿತುಕೊಳ್ಳುವುದರಿಂದ ಹೆಚ್ಚಿನದನ್ನು ಸಾಧಿಸಬಹುದಾಗಿದೆ.**

"ಯಾರು ಗೆಲ್ಲುತ್ತಾರೆ: ಭಾರತ ಅಥವಾ ಚೀನಾ?", "ಭಾರತ ಚೀನಾವನ್ನು ಮೀರಿಸಬಲ್ಲುದೇ?, "ಚೀನಾದ ವಿರುದ್ಧ ಭಾರತ" ಯಾವುದೇ ಮ್ಯಾಗಜಿನ್‌ನ್ನು ಎತ್ತಿಕೊಳ್ಳಿರಿ. ಇಂತಹ ಶೀರ್ಷಿಕೆಯು ನಿಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಕೆಲವರು ಭಾರತದ ಮಂದಗತಿಯ ಅಭಿವೃದ್ಧಿ ಬಗ್ಗೆ ಅಳಲು ವ್ಯಕ್ತಪಡಿಸಿದರೆ, ಇನ್ನು ಕೆಲವರು 'ಚೀನಾದ ಕೆಳಮಟ್ಟದ ಮಾನವ ಹಕ್ಕುಗಳ ದಾಖಲೆ' ಬಗ್ಗೆ ಹುಬ್ಬುಗಂಟಿಕ್ಕುತ್ತಾರೆ. ಇನ್ನು ಇತರರು ಚೀನಾವು ಮಿಲಿಯಾಂತರ ಜನರನ್ನು ಬಡತನದ ಕೂಪದಿಂದ ಮೇಲಕ್ಕೆತ್ತಿದ ವೇಗದ ಬಗ್ಗೆ ಕೊಂಡಾಡುತ್ತಾರೆ. ಇಂತಹ ಲೇಖನಗಳು ಹೇಗೆ ಕೊನೆಗೊಂಡರೂ ಅವು ಕುದುರೆ ರೇಸಿಗೆ ಜೂಜುಕಟ್ಟುವ ತಂಡಗಳು ಗೆಲ್ಲುವ ಕುದುರೆಯನ್ನು ಆರಿಸಿಕೊಳ್ಳುತ್ತಿದ್ದಾರೋ ಎಂಬಂತೆ ಅಥವಾ ಫಾರ್ಮುಲಾ 1 ಕಾರ್ ಸ್ಪರ್ಧೆಯಲ್ಲಿ ಭಾರತ ಮತ್ತು ಚೀನಾ ಪರಸ್ಪರ ತೀಕ್ಷ್ಣ ಸ್ಪರ್ಧೆಯಲ್ಲಿವೆಯೋ ಎಂಬ ಭಾವನೆ ಮೂಡಿಸುವಂತಿರುತ್ತವೆ.

ಇಂತಹ ಗೊಂದಲಕ್ಕೆ ಧುಮುಕುವ ಮೊದಲು, ಯಾತಕ್ಕಾಗಿ ಈ ಸ್ಪರ್ಧೆ ಮತ್ತು ಇದರ ಉದ್ದೇಶಗಳೇನು ಎಂಬುದನ್ನು ನಾವು ನಮ್ಮೊಳಗೆ ಪ್ರಶ್ನಿಸುವುದು ಉಪಯುಕ್ತ ವಾಗಿದೆ. ಇಲ್ಲಿ ಸಾಮಾನ್ಯವಾಗಿ ಆರ್ಥಿಕ ಸಮೃದ್ಧಿಯ ಬಗ್ಗೆ ಮಾತಾಡುತ್ತಾರೆ. ತನ್ನ ಜನತೆಗೆ ಅರ್ಥಪೂರ್ಣವಾದ ಅಸ್ತಿತ್ವವನ್ನು ಒದಗಿಸುವುದೇ ಮಾನವ ಸಮಾಜದ ಪ್ರಮುಖ ಗುರಿಯಾಗಿರುತ್ತದೆ. ಈ ಕಣ್ಣೋಟದಿಂದ ನೋಡಿದರೆ ಇದು ಖಂಡಿತವಾಗಿಯೂ ಸ್ಪರ್ಧೆಯಲ್ಲ, ಬದಲಾಗಿ ಒಂದು ಪ್ರಯಾಸದ ಪಯಣವಾಗಿ ಕಾಣುತ್ತದೆ. ಎರಡೂ ದೇಶಗಳಲ್ಲಿಯೂ ಹಲವು ಶತಮಾನಗಳ ಹಿಂದಿನ ನಾಗರೀಕತೆಗಳಿವೆ ಹಾಗೂ ಅವುಗಳ ಆಧುನಿಕ ಅನುಭವಗಳು, ವಸಾಹತುಶಾಹಿ ನೊಗದಿಂದ ಹೊರಬಂದಾಗಿನಿಂದ ಸುಮಾರು 60 ವರ್ಷಗಳಿಂದ ಸಮಾನವಾಗಿವೆ. ನಿಜವಾಗಿಯೂ ಈ ಎರಡೂ ದೇಶಗಳು ಪರಸ್ಪರವಾಗಿ ಏನನ್ನಾದರೂ ತಿಳಿದುಕೊಳ್ಳಲು ಸಾಧ್ಯವಿದೆ. ಈ ಲೇಖನದಲ್ಲಿ ನಾನು ನನ್ನ ಸುತ್ತ ನೋಡುತ್ತಿರುವ ಮೂರು ವಿಷಯಗಳ ಬಗ್ಗೆ ಬೆಳಕು ಚೆಲ್ಲಲು ಇಚ್ಚಿಸುತ್ತೇನೆ. ಭಾರತದಲ್ಲಿನ ನೀತಿ ನಿರ್ಧಾರಕರು ಮುಖ್ಯವಾಗಿ ಶಿಕ್ಷಣ, ಸಾರ್ವಜನಿಕ ಆರೋಗ್ಯ ಮತ್ತು ಭದ್ರತೆ ಬಗ್ಗೆ ಗಮನ ಕೊಡಲು ಸಾಧ್ಯವಿದೆ.

ಶಿಕ್ಷಣದ ಪ್ರಶ್ನೆ

ಭಾರತ ಮತ್ತು ಚೀನಾ ಶಿಕ್ಷಣಕ್ಕಾಗಿ ಖರ್ಚು ಮಾಡುವ ಹಣ ಆಯಾಯ ದೇಶಗಳ ಜಿಎನ್‌ಪಿಯ ಶೇಕಡಾವಾರು ಸುಮಾರಾಗಿ ಒಂದೇ ಪ್ರಮಾಣದಲ್ಲಿದೆ. ಆದರೆ ಈ ಸಮಾನತೆ ಇಲ್ಲಿಗೇ ಕೊನೆಗೊಳ್ಳುತ್ತದೆ. ಭಾರತವು ಉನ್ನತ ಶಿಕ್ಷಣಕ್ಕೆ ಸಬ್ಸಿಡಿ ಒದಗಿಸಿ ಇವುಗಳನ್ನು ಆಧುನಿಕ ಭಾರತದ "ದೇಗುಲಗಳೆನ್ನುತ್ತಾ ಆ ಬಗ್ಗೆ ಗಮನಹರಿಸಿದಂತೆ ಚೀನಾವು ಜನರ ಮಧ್ಯೆ ಸಾಕ್ಷರತೆಯನ್ನು ಹೆಚ್ಚಿಸುವತ್ತ ಗಮನ ಕೇಂದ್ರೀಕರಿಸಿತು. ಇದೊಂದು ಎದ್ದು ಕಾಣುವ ವ್ಯತ್ಯಾಸ. ಚೀನಾದಲ್ಲಿ ಮಹಿಳೆಯರ ಸಾಕ್ಷರತೆಯು ಶೇಕಡ 86ರಷ್ಟು ತಲುಪಿದ್ದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ಸೇರಿದೆ. ಇದಕ್ಕೆ ಪ್ರತಿಯಾಗಿ ಭಾರತ ಅರ್ಧಕ್ಕಿಂತಲು ಹೆಚ್ಚು ಅನಕ್ಷರಸ್ತ ಮಹಿಳೆಯರೊಂದಿಗೆ ಹಿಂದುಳಿದಿದೆ. "ಒದು ಮನುಷ್ಯನನ್ನು ಸೃಷ್ಟಿಸುತ್ತದೆ" ಎಂದಾದರೆ, ಭಾರತವು ತನ್ನ ಬಹಳಷ್ಟು ಮಹಿಳಾ ನಾಗರೀಕರನ್ನು ತಮ್ಮ ಬಾಲ್ಯಾವಸ್ಥೆಯಿಂದ ಮೇಲೇರಿಸಲು ಸಾಧ್ಯವಾಗುತ್ತಿಲ್ಲ. ಚೀನಾವು ಎಲ್ಲಾ ನಾಗರೀಕರಿಗೆ ಕಡ್ಡಾಯವಾಗಿ ಒಂಬತ್ತು ವರ್ಷಗಳ ಮೂಲಭೂತ ಶಿಕ್ಷಣವನ್ನು ನೀಡುತ್ತಿದೆ. ಸಾಮೂಹಿಕ ಶಿಕ್ಷಣದ ಮೇಲೆ ವಿಶೇಷ ಗಮನ ವಿಶ್ವವ್ಯಾಪಿಯಾಗಿ ಕಮ್ಯೂನಿಸ್ಟ್ ಸಮಾಜಗಳಲ್ಲಿನ ಲಕ್ಷಣವಾಗಿದೆ. ಭಾರತದ ಮುಖಂಡರು ಭಾರೀ ಪ್ರಮಾಣದ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಹಣ ವಿನಿಯೋಗಿಸಲು ಹಿಂದೇಟು ಹಾಕುತ್ತಿರುವ ರೀತಿಯು ಅಚ್ಚರಿಯೆನಿಸುತ್ತದೆ. ಭಾರತದಲ್ಲಿ ಶಿಕ್ಷಣವು ರಾಜ್ಯಪಟ್ಟಿಯಲ್ಲಿದೆ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೇಂದ್ರ ಸರಕಾರವು ಮಾಡಬೇಕಾದ ಕೆಲಸಗಳಿಗೆ ಮಿತಿಗಳು ಇರುತ್ತವೆ ಎಂದರೆ ಅದರಿಂದೇನೂ ಉಪಯೋಗವಿಲ್ಲ. ಕೆಲವು ರಾಜ್ಯಗಳಲ್ಲಿ, ಪ್ರಮುಖವಾಗಿ ಕೇರಳದಲ್ಲಿ (ಮತ್ತೊಮ್ಮೆ ಕಮ್ಯೂನಿಸ್ಟ್ ಪ್ರಭಾವ) ಮಹಿಳಾ ಸಾಕ್ಷರತೆಯು ಶೇ.88ರಷ್ಟಿದ್ದು, ಉಳಿದ ಹಿಂದುಳಿದ ರಾಜ್ಯಗಳಲ್ಲಿನ ಅಂಕಿ ಅಂಶಗಳು ಸಹಾರಾ ಮರುಭೂಮಿ ಪ್ರದೇಶದ ಕೆಳಗಣ ತೀರಾ ಹಿಂದುಳಿದ ದೇಶಗಳಲ್ಲಿ ಇದ್ದಂತಿದೆ. ಭಾರತದಲ್ಲಿ ಅನಕ್ಷರಸ್ಥರ ಒಟ್ಟು ಜನಸಂಖ್ಯೆಯು ಬೆಳೆಯುತ್ತಲೇ ಇದ್ದು 450 ಮಿಲಿಯ ತಲುಪಿದೆ. ಇದನ್ನು ನಾವು ಬದಲಿಸದ ವಿನಹ ಇಪ್ಪತ್ತೊಂದನೆ ಶತಮಾನದಲ್ಲಿ ಪ್ರಜಾಪ್ರಭುತ್ವ ಮತ್ತು ಆರ್ಥಿಕ ಪ್ರಗತಿಯನ್ನು ನಿರೀಕ್ಷಿಸುವುದು ಕಷ್ಟಸಾಧ್ಯವಾಗುತ್ತದೆ. ಈ ಸವಾಲು ಗಳಿರುವಾಗ ದೇಶಾದ್ಯಂತ ಶಿಕ್ಷಣ ಮಂತ್ರಿಗಳು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸೀಟುಗಳ ಹಂಚಿಕೆಯ ಪ್ರಶ್ನೆಗಳಲ್ಲೇ ಮಗ್ನರಾಗಿದ್ದಾರೆ. ರೋಮ್ ಉರಿಯುತ್ತಿರುವಾಗ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದಂತೆ.

ಸಾಮಾಜಿಕ ಸುರಕ್ಷೆ

ಚೀನಾದುದ್ದಕ್ಕೂ ಪ್ರವಾಸ ಮಾಡಿದಾಗ ಟ್ಯಾಕ್ಸಿ ಮತ್ತು ಟ್ರಕ್ಕುಗಳನ್ನು ಚಲಿಸುವ ಪರಂಪರಾಗತ ಪುರುಷರ ಉದ್ಯೋಗಗಳಲ್ಲಿ ಮಹಿಳೆಯರು ನಿರತರಾಗಿರುವುದನ್ನು ನೀವು ಕಾಣುತ್ತೀರಿ. ಇಲ್ಲಿ ಲಿಂಗಗಳ ಮಧ್ಯೆ ಸಮಾನತೆ ಯೊಂದಿಗೆ ನಿಜವಾಗಿಯೂ ಕಮ್ಯೂನಿಸ್ಟ್ ಪರಂಪರೆಯೂ ಇದೆ. ಮಹಿಳೆಯು ರಾತ್ರಿ ಹೊತ್ತು ತಡವಾಗಿ ಟ್ಯಾಕ್ಸಿ



ಚಾಲನೆಯಲ್ಲಿ ರುವುದನ್ನು ನೀವು ನೋಡಿದಾಗ ಅಲ್ಲಿ ಅಸ್ತಿತ್ವದಲ್ಲಿರುವ ಸಾರ್ವಜನಿಕ ಭದ್ರತೆಯ ಬಗ್ಗೆ ಅರಿವಾಗುತ್ತದೆ. ಜಪಾನಿನಂತಹ ಸುರಕ್ಷಿತ ಸಮಾಜದಲ್ಲಿ ಕೂಡಾ ನೀವು ಇದನ್ನ ಕಾಣಲು ಸಾಧ್ಯವಿಲ್ಲ. ತನ್ನ ನಾಗರೀಕರಿಗೆ ಬಲಿಷ್ಟವಾದ ಭದ್ರತೆಯನ್ನೇ ಒದಗಿಸುವುದು ಕಮ್ಯೂನಿಸಂನ ಮೂಲ ತತ್ವವಾಗಿರುತ್ತದೆ. ಹಾಗೆಯೇ ಕಾನೂನುಬಾಹಿರ ಚಟುವಟಿಕೆಗಳನ್ನು ಹತ್ತಿಕ್ಕಲು ನಿಜವಾಗಿಯೂ ಸಾಕಷ್ಟು ಖರ್ಚು ಮಾಡಲಾಗುತ್ತದೆ. ಇದರಲ್ಲಿ ಅತ್ಯಂತ ಎದ್ದು ಕಾಣುತ್ತಿರುವ ದಾಖಲೆಯೆಂದರೆ ಗುರುತಿನ ಚೀಟಿ.

ಪ್ರತಿಯೊಬ್ಬರಿಗೂ ಗುರುತಿನ ಚೀಟಿ

ಪ್ರತಿಯೊಬ್ಬ ಚೀನಾದ ಪ್ರಜೆಯೂ ಎಲ್ಲಾ ಸಮಯದಲ್ಲಿ ಗುರುತಿನ ಚೀಟಿಯನ್ನು ಉಪಯೋಗಿಸುತ್ತಾರೆ. ಗುರುತಿನ ಚೀಟಿಯಿಲ್ಲದೆ ಯಾವುದೇ ಪ್ರಯಾಣ ಅಥವಾ ಹಣಕಾಸು ವ್ಯವಹಾರವು ಸಾಧ್ಯವಿಲ್ಲ. ಬಹುತೇಕ ಸಾರ್ವಜನಿಕ ಸ್ಥಳಗಳಲ್ಲಿ ವಿಡಿಯೋ ನಿರ್ವಹಣೆಯೂ ಇರುತ್ತದೆ. ಇದಕ್ಕೆ ತದ್ವಿರುದ್ಧವಾಗಿ, ಬ್ರಿಟೀಷ್ ಬಳುವಳಿಯಿಂದಾಗಿ ಭಾರತದಲ್ಲಿ ಗುರುತಿನ ಚೀಟಿಯ ವಿಚಾರವು ಅರ್ಥಹೀನವಾಗಿದೆ. ಎಂಬತ್ತರ ದಶಕದಲ್ಲಿನ ಉಗ್ರಗಾಮಿ ಚಟುವಟಿಕೆಯ ತೀವ್ರಗತಿಯ ಹೆಚ್ಚಳವು ಎಚ್ಚರಿಕೆಯ ಕರೆಯನ್ನು ನೀಡಿದೆ. ಆದಾಗ್ಯೂ ಪ್ರತೀ ಮಂತ್ರಾಲಯವು ತನ್ನದೇ ಆದ ಗುರುತಿನ ಚೀಟಿ ವ್ಯವಸ್ಥೆಯನ್ನು ಅಳವಡಿಸಲು ಇಚ್ಚಿಸುತ್ತದೆ. ಇದರ ಪರಿಣಾಮವಾಗಿ ಈಗ ನಾವು ಪಾಸ್‌ಪೋರ್ಟ್‌ಗಳು, ರೇಷನ್ ಕಾರ್ಡುಗಳು, ಮತದಾರರ ಗುರುತಿನ ಚೀಟಿಗಳು, ಆದಾಯ ತೆರಿಗೆ ಪ್ಯಾನ್ ಕಾರ್ಡುಗಳು ಮತ್ತು ಇತ್ತೀಚೆಗೆ ಮ್ಯೂಚುವಲ್ ಫಂಡ್ ಕಾರ್ಡುಗಳನ್ನು ಹೊಂದಿರುತ್ತೇವೆ. ಇದಕ್ಕೆ ಸಂಬಂಧಿಸಿದಂತೆ ಗುರುತಿನ ಎಲ್ಲಾ ವ್ಯವಹಾರಗಳನ್ನು ಜೋಡಿಸಲು ಮಾಹಿತಿ ತಂತ್ರಜ್ಞಾನ ಸೌಕರ್ಯಗಳು ಇರುವುದಿಲ್ಲ. ಸಾರ್ವಜನಿಕ ಭದ್ರತೆಯ ವ್ಯವಸ್ಥೆಯ ಮೇಲೆಯೇ ಒತ್ತಡ ಬಿದ್ದಿದೆ ಎಂದರೆ ಆಶ್ಚರ್ಯವಲ್ಲವೇ? ಘಟನೆಗೆ ಮುಂಚಿತವಾಗಿ ಕ್ರಿಮಿನಲ್‌ಗಳನ್ನು ಬಂಧಿಸಲು ಯಾವುದೇ ಸಾಮರ್ಥ್ಯ, ಉಪಾಯ ಇರುವುದಿಲ್ಲ. ಹಾಗೂ ಕ್ರೈಮ್ ನಂತರದ ವಿಚಾರಣೆಯ ಪ್ರಕ್ರಿಯೆಯು ಬ್ರಿಟಿಷ್ ಕಾಲದಿಂದಲೂ ಕಿಂಚಿತ್ತೂ ಬದಲಾಗಿಲ್ಲ.

ಶಿಶು ಮರಣ ದರ

ಚೀನಾದಲ್ಲಿ ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳಲ್ಲಿ ಹಣ ತೊಡಗಿಸುವುದರಿಂದ ಶಿಶುಗಳ ಸಾವಿನ ಸಂಖ್ಯೆಯಲ್ಲಿ ಭಾರತದಲ್ಲಿನ ಮಟ್ಟದ 3ರಷ್ಟು ಕೆಳಗೆ ಇಳಿದಿದೆ. ಅಂದರೆ ಅಂದಾಜು ಸ್ವಾತಂತ್ರ್ಯ ಸಂದರ್ಭದ ಪರಿಸ್ಥಿತಿಗಳನ್ನು ಹೋಲಿಸಿದಾಗ ಈ ಸಂಖ್ಯೆಗಳನ್ನು ಗಮನಿಸಿದಾಗ ನಮ್ಮ ದೇಶವೇ ತನ್ನ ನಾಗರೀಕರನ್ನು ಅರ್ಥಪೂರ್ಣ ಜೀವನದ ಹಕ್ಕಿನಿಂದ ಯಾವ ರೀತಿ ವಂಚಿಸುತ್ತಿದೆ ಎಂಬುದು ವ್ಯಕ್ತವಾಗುತ್ತದೆ. ಚೀನಾದಲ್ಲಿನ ಸಾರ್ವಜನಿಕ ಆರೋಗ್ಯ ಸೌಕರ್ಯಕ್ಕೆ ಭೇಟಿ ನೀಡಿದಾಗ ಅದು ಭಾರತಕ್ಕಿಂತ ಮೈಲಿಗಳಷ್ಟು ಮುಂದಿದೆ ಎಂದು ಕಂಡುಬರುತ್ತದೆ. ಪೋಲಿಯೋವನ್ನು ನಿರ್ಮೂಲನೆ ಮಾಡಲು ಯಶಸ್ವಿಯಾಗದ ಪ್ರಪಂಚದ ಕೇವಲ ಕೆಲವೇ ದೇಶಗಳಲ್ಲಿ ನಾವೂ ಸೇರಿದ್ದೇವೆ. ಕಡುಬಡತನ, ನಿರಕ್ಷರತೆ, ವಿಶಿಷ್ಟವಾದ ಹವಾಮಾನ ಮತ್ತು ಬಹುಪಾಲು ಸಂಖ್ಯೆಯ ಗ್ರಾಮೀಣ ಜನಸಂಖ್ಯೆಯಿಂದಾಗಿ ಈ ಕಾರ್ಯವು ಸುಲಭ ಸಾಧ್ಯವಾಗಿಲ್ಲ. ಆದಾಗ್ಯೂ ಅಭಿವೃದ್ಧಿ ಹೊಂದಿದ ದೇಶವಾಗಲು ಭಾರತ ಇದನ್ನು ಸಾಧಿಸಲೇಬೇಕು.

ವ್ಯಾಪಕವಾದ ಶಿಕ್ಷಣ, ಉತ್ತಮ ಸಾರ್ವಜನಿಕ ಆರೋಗ್ಯ ಮತ್ತು ಹೆಚ್ಚಿನ ಭದ್ರತೆಯು ದೃಢ ಮತ್ತು ಸಮೃದ್ಧಿ ಹೊಂದುತ್ತಿರುವ ಸಮಾಜದ ಅಡಿಪಾಯವಾಗಿದೆ. ಭಾರತವು ಬೆಳವಣಿಗೆಯ ಹೊಸ ಹಂತದಲ್ಲಿ ನಿಂತಿರುವುದರಿಂದ ನಾವು ಕೇಳಬೇಕಾದ ನಿಜವಾದ ಪ್ರಶ್ನೆಯು "ಭಾರತವು ಚೀನಾವನ್ನು ಮೀರಿಸಬಲ್ಲದೇ?" ಎಂದಲ್ಲ. ಬದಲಾಗಿ "ಭಾರತವು ಚೀನಾದಿಂದ ಏನನ್ನು ಕಲಿಯಬಹುದು" ಎಂದಾಗಿದೆ.

ನ್ಯಾಟೋ ಗೆ ಸವಾಲು ಹಾಕಿದ 'ಶಾಂತಿ ಮಿಶನ್-2007'

ರಶ್ಯಾದ ದಕ್ಷಿಣ ಭಾಗದಲ್ಲಿರುವ ಉರಲ್ ಪರ್ವತ ಪ್ರದೇಶದಲ್ಲಿ 'ಶಾಂಘಾಯ್ ಸಹಕಾರ ಸಂಘಟನೆ'ಯ ಮೊದಲ ಜಂಟಿ ಮಿಲಿಟರಿ ಕವಾಯಿತು ಇತ್ತೀಚೆಗೆ ನಡೆಯಿತು. ಇದು ಭಾರೀ ಮಹತ್ವ ಉಳ್ಳ ಅಂತರ್ರಾಷ್ಟ್ರೀಯ ಘಟನೆ. 'ಶಾಂತಿ ಮಿಶನ್ - 2007' ಎಂದು ಹೆಸರಿಸಲಾದ ಈ ಮಿಲಿಟರಿ ಕವಾಯಿತಿನಲ್ಲಿ ರಶ್ಯಾ, ಚೀನಾ ಅಲ್ಲದೆ ಮಧ್ಯ ಏಶ್ಯಾದ ನಾಲ್ಕು ದೇಶಗಳು ಭಾಗವಹಿಸುತ್ತಿವೆ. ಕಝಕಿಸ್ತಾನ್, ಉಝುಬೇಕಿಸ್ತಾನ್, ಕಿರ್ಗಿಸ್ತಾನ್ ಮತ್ತು ತಾಜಕಿಸ್ತಾನ್ ಮಧ್ಯ ಏಶ್ಯಾದ ಆ ನಾಲ್ಕು ದೇಶಗಳು. ಆರು ದೇಶದ ಆರು ಸಾವಿರಕ್ಕೂ ಹೆಚ್ಚು ಸೈನಿಕರಲ್ಲದೆ, ಟ್ಯಾಂಕುಗಳು, ಯುದ್ಧ ವಿಮಾನಗಳು, ಇದರಲ್ಲಿ ಭಾಗವಹಿಸಿದವು. ಭಯೋತ್ಪಾದಕ ಗುಂಪೊಂದು ವಶಪಡಿಸಿಕೊಂಡಿರುವ ಪಟ್ಟಣದ 'ಅಣಕ' ವಿಮೋಚನೆ ಕವಾಯಿತಿನ ಉದ್ದೇಶವಾಗಿತ್ತು. ರಶ್ಯನ್ ಟೀವಿಯಲ್ಲಿ ಕವಾಯಿತನ್ನು 'ಲೈವ್' ಆಗಿ ತೋರಿಸಲಾಯಿತು.

ರಶ್ಯ-ಚೀನಾದ ಅಧ್ಯಕ್ಷರುಗಳಾದ ಪುಟಿನ್ ಮತ್ತು ಹು ಮಧ್ಯ ಏಶ್ಯಾದ ಹಿರಿಯ ನಾಯಕರ ಜತೆ ಕವಾಯಿತನ್ನು ವೀಕ್ಷಿದರು. ಈ ಸಂದರ್ಭದಲ್ಲಿ 'ಶಾಂಘಾಯ್ ಸಹಕಾರ ಸಂಘಟನೆ' ಯ ಶೃಂಗಸಭೆಯೂ ನಡೆಯಿತು. ಶೃಂಗಸಭೆಯ ಹೇಳಿಕೆಗಳಲ್ಲಿ ಮಧ್ಯ ಏಶ್ಯಾದ ಭದ್ರತೆ ಮತ್ತು ಈ ಪ್ರದೇಶದಲ್ಲಿ ಭಯೋತ್ಪಾದನೆ ವಿರುದ್ಧ ಕ್ರಮ ಈ ಪ್ರದೇಶದ ದೇಶಗಳು ಜಂಟಿಯಾಗಿ ನಿರ್ವಹಿಸಬಲ್ಲವು. ಹೊರಗಣ ದೇಶಗಳ, ಶಕ್ತಿಗಳ ಅಗತ್ಯ ಇಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಇದು ಮಧ್ಯ ಏಶ್ಯಾದಲ್ಲಿ ಹಿಡಿತ ಸಾಧಿಸಲು ಪ್ರಯತ್ನಿಸುತ್ತಿರುವ ಅಮೆರಿಕ, ಯುರೋಪಿಯನ್ ಶಕ್ತಿಗಳು, ನ್ಯಾಟೋ ಕೂಟಕ್ಕೆ ಪರೋಕ್ಷ ಆದರೆ ಸ್ಪಷ್ಟ ಎಚ್ಚರಿಕೆ ಕೂಡ. ಇದು ವಿಶ್ವ ಶಾಂತಿ ಮತ್ತು ಭದ್ರತೆಗೆ ಸಹಾಯಕಾರಿ ಎಂದೂ ಸ್ಪಷ್ಟಪಡಿಸ ಲಾಯಿತು. ಕವಾಯಿತಿನ ನಾಯಕತ್ವ ವಹಿಸಿದ್ದ ರಶ್ಯನ್ ಜನರಲ್ ಇನ್ನೂ ಮುಂದೆ ಹೋಗಿ ಈ ಅನುಭವ 'ಅಂತರ್ರಾಷ್ಟ್ರೀಯ ಮತ್ತು ಆಂತರಿಕ ಭಯೋತ್ಪಾದಕರನ್ನು' ನಿಗ್ರಹಿಸಲು ಸಹಾಯ ಮಾಡುತ್ತದೆ ಎಂಬ ಹೇಳಿಕೆ ಅಂತರ್ರಾಷ್ಟ್ರೀಯ ಗಮನ ಸೆಳೆದಿದೆ.

\- ಶರತ್

ವಾರದ ಸಂದರ್ಶನ

ಭಯೋತ್ಪಾದನೆಯ ಭೀತಿಯಲ್ಲಿ ಮಣಿಪುರ

ಡಾ: ಆರ್.ಕೆ.ಸಂಜೋಬಾ ಸಂದರ್ಶನ ಸಂದರ್ಶಿಸಿದವರು: ಆರ್. ರಾಮಕೃಷ್ಣ

ಡಾ: ಆರ್.ಕೆ. ಸಂಜೋಬಾ ಅವರು ಮಣಿಪುರ ರಾಜ್ಯದ ಅಧ್ಯಯನಶೀಲ ವ್ಯಕ್ತಿ. ಕಾರ್ಯ ನಿಮಿತ್ತ ಅವರು ಇತ್ತೀಚಿಗೆ ಬೆಂಗಳೂರಿಗೆ ಬಂದಾಗ ಮಣಿಪುರ ರಾಜ್ಯದ ರಾಜಕೀಯ ಸಾಮಾಜಿಕ ಪರಿಸ್ಥಿತಿಯ ಕುರಿತು ನಡೆಸಲಾದ ಕಿರು ಸಂದರ್ಶನ ಇಲ್ಲಿದೆ.

ಜನಶಕ್ತಿ: ಮಣಿಪುರ ರಾಜ್ಯದ ರಾಜಕೀಯ ಪರಿಸ್ಥಿತಿ ಹೇಗಿದೆ?

ಕಾಂಗ್ರೆಸ್ ನೇತೃತ್ವದ ಸಮ್ಮಿಶ್ರ ಸರ್ಕಾರ ಮಣಿಪುರದಲ್ಲಿ ಅಧಿಕಾರದಲ್ಲಿದೆ. ಸರ್ಕಾರದ ನೀತಿ ಜನವಿರೋಧಿಯಾಗಿದೆ. ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಈ ಸರ್ಕಾರದಲ್ಲಿ ಮಣಿಪುರಿ ಜನರು ಆರ್ಥಿಕವಾಗಿ ರಾಜಕೀಯವಾಗಿಯೂ, ಆಡಳಿತಾತ್ಮಕ ವಾಗಿಯೂ ಸಮಸ್ಯೆ ಎದುರಿಸುತ್ತಿದ್ದಾರೆ.

ಮಣಿಪುರದಲ್ಲಿ ಗುಡ್ಡಗಾಡು ಪ್ರದೇಶದ ಜನರು ಮತ್ತು ಕಣಿವೆ ಪ್ರದೇಶದ ಜನರ ನಡುವೆ ಆಳವಾದ ಬಿಕ್ಕಟ್ಟಿದೆ. NSCN(IM) (ನ್ಯಾಷನಲ್ ಸೋಷಿಯಲಿಸ್ಟ್ ಕೌನ್ಸಿಲ್ ಆಫ್ ನಾಗಾಲ್ಯಾಂಡ್) ಒಂದು ತೀವ್ರಗಾಮಿ ಸಂಘಟನೆಯಾಗಿದೆ.

ಮೊದಲಿಗೆ 'NSCN' ಎಂಬ ಒಂದು ಸಂಘಟನೆ ಮಾತ್ರ ಇತ್ತು. ನಂತರ ಅದು NSCN(K) NSCN(IM) ಎಂದು ವಿಭಜನೆಗೊಂಡಿತು. NSCN ಸಂಘಟನೆಯು ವಿಭಜನೆಗೆ ಮುಂಚೆ 'ನ್ಯಾಗಾಲ್ಯಾಂಡ್' ಎಂಬ ಪ್ರತ್ಯೇಕ ದೇಶದ ಬೇಡಿಕೆ ಇಟ್ಟಿತ್ತು.

'ನ್ಯಾಗಾಲ್ಯಾಂಡ್' ಅಂದರೆ ಅಸ್ಸಾಂ, ಮಣಿಪುರ, ಅರುಣಾಚಲ ಪ್ರದೇಶಗಳಲ್ಲಿನ ನಾಗ ಬುಡಕಟ್ಟು ಜನರಿರುವ ಪ್ರದೇಶಗಳನ್ನೊಳಗೊಂಡು ರಚಿಸಲು ಉದ್ದೇಶಿಸಿದ್ದ ಪ್ರತ್ಯೇಕ ರಾಷ್ಟ್ರ.

ಸಂಘಟನೆಯ ವಿಭಜನೆ ನಂತರ NSCN(IM) ಬಲಶಾಲಿಯಾಗಿ ಉಳಿಯಿತು. ಈ ಸಂಘಟನೆಗೆ ದೇಶ ವಿಭಜನೆ ಸಾಧ್ಯವಿಲ್ಲ ಎಂದು ಮನವರಿಕೆಯಾಯಿತು. ಹೀಗಾಗಿ ಭಾರತ ಸರ್ಕಾರದೊಂದಿಗೆ ಮಾತುಕತೆಗೆ ಮುಂದಾಯಿತು. ಅವರು ಎರಡು ಬಗೆಯ ಪರಿಹಾರಗಳನ್ನು ಸೂಚಿಸಿದ್ದಾರೆ. ಒಂದು ಗ್ರೇಟರ್ ನಾಗಾಲ್ಯಾಂಡ್ (ವಿಶಾಲ ನಾಗಲ್ಯಾಂಡ್) ಅಂದರೆ ಮೇಲೆ ಪ್ರಸ್ತಾಪಿಸಲಾದ ಮೂರು ರಾಜ್ಯಗಳೊಳಗೆ ನಾಗ ಜನರು ಹರಡಿಕೊಂಡಿರುವ ಪ್ರದೇಶಗಳನ್ನು ಸೇರಿಸಿ ಭಾರತದ ಸಮಗ್ರತೆಯ ಚೌಕಟ್ಟಿನೊಳಗೆ ಒಂದು ಪ್ರತ್ಯೇಕ ರಾಜ್ಯ ರಚಿಸುವುದು.

ಇಲ್ಲವೆ, ಮಣಿಪುರ ರಾಜ್ಯದೊಳಗೆ ನಾಗ ಜನರು ಹರಡಿಕೊಂಡಿರುವ ಪ್ರದೇಶವನ್ನಾಧರಿಸಿ ಪ್ರತ್ಯೇಕ ರಾಜ್ಯವನ್ನು ರಚಿಸುವುದು. ಈ ನಿಟ್ಟಿನಲ್ಲಿ ಕೆಲವು ವರ್ಷಗಳ ಕಾಲ ಮಾತುಕತೆ ನಡೆಸಿತು. 2001ರಲ್ಲಿ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರವು ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ತಾತ್ವಿಕವಾಗಿ ಒಪ್ಪಿತು. ತೀವ್ರಗಾಮಿಗಳು ಹಾಗೂ ಸರ್ಕಾರದ ನಡುವೆ ಕದನ ವಿರಾಮದ ಒಪ್ಪಂದ ಮಾರ್ಪಟ್ಟಿತು. ಆದರೆ ಈ ಕದನ ವಿರಾಮದ ಅವಧಿಯಲ್ಲಿ ಗಲಭೆಗಳು ನಡೆದು18 ಜನ ಮುಗ್ಧರು ಕೊಲ್ಲಲ್ಪಟ್ಟರು. ಮಣಿಪುರದ ಜನತೆ ಇದನ್ನು ತೀವ್ರವಾಗಿ ಪ್ರತಿಭಟಿಸಿದರು.

ಎಡಪಕ್ಷಗಳ ನಾಯಕರು ಮಣಿಪುರಕ್ಕೆ ಭೇಟಿ ನೀಡಿದರು. ಈ .ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಿದರು. ಪರಿಣಾಮವಾಗಿ ಈ ಒಪ್ಪಂದವು ರದ್ದಾಯಿತು. NSCN ಎರಡೂ ಬಣಗಳೂ ಭಯೋತ್ಪಾದಕ ಸಂಘಟನೆಗಳು. ಪರಿಸ್ಥಿತಿ ಈಗಲೂ ಬಿಗುವಿನಿಂದ ಕೂಡಿದೆ.

ಜನಶಕ್ತಿ: ರಾಜಕೀಯ ಪಕ್ಷಗಳ ಬಲಾಬಲ ಹೇಗಿದೆ?

ಮಣಿಪುರದಲ್ಲಿ ಈಗ ಕಾಂಗ್ರೆಸ್ ನೇತೃತ್ವದ ಸರಕಾರವಿದೆ. 4 ಜನ ಶಾಸಕರನ್ನು ಹೊಂದಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಕೂಡ ಸರ್ಕಾರದಲ್ಲಿದೆ. ಮಣಿಪುರ ಪೀಪಲ್ಸ್ ಪಾರ್ಟಿ(ಎಂ.ಪಿ.ಪಿ) ಮುಖ್ಯ ವಿರೋಧ ಪಕ್ಷ, ಆರ್‌ಜೆಡಿ ಮೂರು ಶಾಸಕರನ್ನು ಹೊಂದಿದೆ. ಈಗ ಸಿಪಿಐ(ಎಂ) ಪಕ್ಷಕ್ಕೆ ಶಾಸಕರಿಲ್ಲ. 1980ರಲ್ಲಿ ಒಬ್ಬ ಶಾಸಕರು ಗೆದ್ದಿದ್ದರು.

ಜನಶಕ್ತಿ : ಮಣಿಪುರದ ಸಾಮಾಜಿಕ ಪರಿಸ್ಥಿತಿ ಹೇಗಿದೆ.

ಮಣಿಪುರದಲ್ಲಿ ಸಾಕ್ಷರತೆ ಶೇ.50 ಕ್ಕಿಂತ ಹೆಚ್ಚಿದೆ. ಮಹಿಳೆಯರ ಸ್ಥಾನ ಉತ್ತಮವಾಗಿದೆ. ಅವರು ಆರ್ಥಿಕತೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತಾರೆ. ಐತಿಹಾಸಿಕವಾಗಿಯೂ ರಾಜ್ಯದಲ್ಲಿ ಮಹಿಳೆಯರು ಪ್ರಜಾಪ್ರಭುತ್ವ ಚಳುವಳಿಯಲ್ಲಿ ದೊಡ್ಡ ಪಾತ್ರವಹಿಸಿದ್ದಾರೆ. ಮಣಿಪುರದ ಅಕ್ಕಿಯನ್ನು ಹೊರಕ್ಕೆ ರಫ್ತು ಮಾಡುವುದರ ವಿರುದ್ಧ 1939ರ ಡಿಸೆಂಬರ್‌ನಲ್ಲಿ ನಡೆದ 'ನುಪಿಲಾಲ್' (ಅಂದರೆ ಮಹಿಳಾ ಯುದ್ಧ) ಒಂದು ಐತಿಹಾಸಿಕ ಹೋರಾಟ. ಅಕ್ಕಿ ಮಣಿಪುರದ ಒಂದು ಪ್ರಮುಖ ಬೆಳೆ.

ಜನಶಕ್ತಿ: ರಾಜ್ಯ ವರದಕ್ಷಿಣೆ ಸಮಸ್ಯೆ ಇದೆಯೇ?

ಇಲ್ಲ. ವರದಕ್ಷಿಣೆ ಸಮಸ್ಯೆ ರಾಜ್ಯದಲ್ಲಿಲ್ಲ. ಅದಕ್ಕಾಗಿ ಮಹಿಳೆಯರನ್ನು ಸುಡುವುದು, ಕೊಲ್ಲುವುದಂತೂ ಇಲ್ಲವೇ ಇಲ್ಲ. ವಿಧವೆಯವರಿಗೆ ಮರು ವಿವಾಹಕ್ಕೆ ನಿರ್ಬಂಧವೂ ಇಲ್ಲ. ಮಣಿಪುರದಲ್ಲಿ ಹೆಚ್ಚಾಗಿ ಕಣಿವೆ ಪ್ರದೇಶದಲ್ಲಿರುವ ಮೈತ್ರೈ (MEITEI) ಜನರು ರಾಜ್ಯದ ಒಂದು ಪ್ರಮುಖ ಸಮುದಾಯ. ಹಿಂದೂಗಳು ಬಹುಸಂಖ್ಯಾತರು. ಸನಮಹಿ ಎಂಬುದು ಇಲ್ಲಿನ ಒಂದು ಅಲ್ಪಸಂಖ್ಯಾತ ಧರ್ಮ. ಮುಸ್ಲಿಮರು ಸಹ ಇದ್ದಾರೆ. ಬೆಟ್ಟ ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟು ಜನರು ಬಹುತೇಕ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದಾರೆ.

ಮಣಿಪುರದಲ್ಲಿ ಒಟ್ಟಾರೆ ಅಧಿಕೃತವಾಗಿ ಗುರುತಿಸಲ್ಪಟ್ಟ 33 ಬುಡಕಟ್ಟುಗಳಿವೆ.

ಜನಶಕ್ತಿ: ಮಣಿಪುರದ ವಿವಿಧ ರಾಜಕೀಯ ಪಕ್ಷಗಳ ಕಾರ್ಯ ವಿಧಾನ ಹೇಗಿದೆ?

ಹಿಂದೊಮ್ಮೆ ಬಿಜೆಪಿಗೆ 4 ಜನ ಶಾಸಕರಿದ್ದರು. ಈಗ ಯಾವುದೇ ಶಾಸಕರಿಲ್ಲ. ಕೋಮುವಾದಿ ಪ್ರಶ್ನೆಗಳೆನ್ನೆತ್ತಲು, ಸಂಘ ಪರಿವಾರಕ್ಕಿರುವ ಅವಕಾಶ ಮಣಿಪುರದಲ್ಲಿ ಕಡಿಮೆ.

ಆಳುವ ಕಾಂಗ್ರೆಸ್ ಪಕ್ಷ ಸೇರಿದಂತೆ ಇತರ ಹಲವು ಪಕ್ಷಗಳು ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿವೆ.

ಫೆಡರಲ್ ಪಾರ್ಟಿ ಆಫ್ ಮಣಿಪುರ (FPM), ಮಣಿಪುರ ಪೀಪಲ್ಸ್ ಪಾರ್ಟಿ (MPP), ಡೆಮಾಕ್ರೆಟಿಕ್ ರೆವಲ್ಯೂನರಿನರಿ ಪೀಪಲ್ಸ್ ಪಾರ್ಟಿ(DRPP) ಈ ಮೂರು ರಾಜಕೀಯ


ಡಾ. ಸಂಜೋಬಾ ಹಾಗೂ ಅವರ ಪತ್ನಿ

ಪಕ್ಷಗಳು ಜಂಟಿ ಸಮಾವೇಶ ನಡೆಸಿ (MPP) ಯಲ್ಲಿ ಒಂದಾದವು. ಇದು ಸಹ ಭೂಗತ ಸಂಘಟನೆಗಳೊಂದಿಗೆ ಇದು ಸಂಪರ್ಕ ಹೊಂದಿದೆ. ಮೂರು ಪಕ್ಷಗಳು ಒಂದುಗೂಡಿದರೂ ಕಳೆದ ಚುನಾವಣೆಯಲ್ಲಿ (MPP) ಅಷ್ಟೇನೂ ಯಶಸ್ಸುಗಳಿಸಲಿಲ್ಲ.

ನಾಗ ಬುಡಕಟ್ಟು ಜನರು ಮತ್ತು ಕುಕಿ ಜನರ ನಡುವೆ ತಿಕ್ಕಾಟಗಳಿವೆ. 1993 ಕುಕಿ ಮತ್ತು ನಾಗ ಗುಂಪುಗಳ ನಡುವೆ ತೀವ್ರ ಘರ್ಷಣೆಗಳು ನಡೆದವು. NSCN-(IM) ಗಲಭೆ ಯೋಜಿಸಿತು. ಸುಮಾರು ನೂರಕ್ಕೂ ಹೆಚ್ಚು ಜನರು ಹತ್ಯೆಯಾದರು.

ಜನಶಕ್ತಿ: ರಾಜ್ಯ ರಾಜಕಾರಣದಲ್ಲಿ ಪ್ರಮುಖ ಎಡಪಕ್ಷವಾದ ಸಿಪಿಐ(ಎಂ) ಪಾತ್ರ, ಚಳುವಳಿ ಹೇಗಿದೆ?

ಈಗಾಗಲೇ ಪ್ರಸ್ತಾಪಿಸಿದ ಐತಿಹಾಸಿಕ ನುಪಿಲಾಲ್ ಚಳುವಳಿಗೆ ಮಾರ್ಗದರ್ಶನ ಮಾಡಿದವರು ಕಮ್ಯುನಿಸ್ಟರೇ. ಇರಾವಟ್ ಎಂಬ ಹಿರಿಯ ಕಮ್ಯುನಿಸ್ಟ್ ನೇತಾರರು ಈ ಹೋರಾಟಕ್ಕೆ ಸತತ ಮಾರ್ಗದರ್ಶನ, ಸ್ಫೂರ್ತಿ ನೀಡಿದರು. ಮಣಿಪುರ ಆಗ ಪ್ರಿನ್ಸಿ ಸ್ಟೇಟ್ ಆಗಿತ್ತು. ಬ್ರಿಟಿಷರ ಹಿಡಿತದಲ್ಲಿತ್ತು. ಬ್ರಿಟಿಷ್ ವಿರೋಧಿ ಹೋರಾಟಗಳನ್ನು ಸಂಘಟಿಸುತ್ತಿದ್ದ ಕಾಂ: ಇರಾವಟ್ ಅವರನ್ನು 1939ರಲ್ಲಿ ಬಂಧಿಸಲಾಯಿತು. ಅವರು ಅಸ್ಸಾಂನ ಕಾಸಾರ್ (CACHAR) ಜಿಲ್ಲೆಯಲ್ಲಿದ್ದುಕೊಂಡು ನುಪಿಲಾಲ್ ಚಳುವಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಅವರನ್ನು ಬಂಧಿಸಿ ಜೈಲಿಗಟ್ಟಲಾಯಿತು. ಈಗಿನ ಬಾಂಗ್ಲಾದೇಶದ ಸೈಲ್ಹೆಟ್ ಜೈಲಿನಲ್ಲಿ ಇವರು ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದರು. ಜೈಲಿನಲ್ಲೇ ಮಾರ್ಕ್ಸ್‌ವಾದ ಅಧ್ಯಯನ ಮಾಡಿ ಮಾರ್ಕ್ಸ್‌ವಾದಿಯಾದರು. ಅವರು ಬಿಡುಗಡೆಗೊಂಡು ಹೊರ ಬಂದಾಗ ಸರ್ಕಾರ ಅವರು ಮಣಿಪುರವನ್ನು ಪ್ರವೇಶಿಸಲು ಬಿಡಲಿಲ್ಲ.

ಹೀಗಾಗಿ ಅವರು ಕಾಸಾರ್‌ನಲ್ಲಿ 3 ವರ್ಷ ಇದ್ದರು. ಆ ದಿನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಸಹಾಯದೊಂದಿಗೆ ಅದರಲ್ಲೂ ಬಂಗಾಳ ಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಸಹಾಯದೊಂದಿಗೆ ಅವರು ರೈತರ ನಡುವೆ ಕೆಲಸ ಮಾಡಿದರು. ಹಲವು ರೈತ ಆಂದೋಲನಗಳಿಗೆ ನೇತೃತ್ವದ ನೀಡಿದ ಅವರು ಸುರ್ಮಾ ವ್ಯಾಲಿ ಕಿಸಾನ್ ಸಭಾದ ಅಧ್ಯಕ್ಷರಾದರು.

ಜನಶಕ್ತಿ: ಇತ್ತೀಚಿನ ಅವಧಿಯಲ್ಲಿ ಪ್ರಮುಖ ಪ್ರಜಾಸತ್ತಾತ್ಮಕ ಸಂಘಟನೆಗಳ ಹೋರಾಟಗಳೇನು? ಬೆಳವಣಿಗೆ ಹೇಗಿದೆ?

ರಾಜ್ಯದಲ್ಲಿ ಕಾರ್ಮಿಕರ ನಡುವೆ ಸಿಐಟಿಯು ಅಷ್ಟಾಗಿ ಬೆಳೆದಿಲ್ಲ. ವಿದ್ಯಾರ್ಥಿಗಳ ನಡುವೆ ಎಸ್‌ಎಫ್‌ಐ, ರೈತರ ನಡುವೆ ಕಿಸಾನ್ ಸಭಾ ಬೆಳೆಯುತ್ತಿವೆ.

ಮಣಿಪುರದ ರಾಜಕೀಯದಲ್ಲಿ ಸಿಪಿಐ(ಎಂ) ಒಂದು ಸಣ್ಣ ಪಕ್ಷ. ತನ್ನದೇ ಆದ ಮಿತಿಯೊಂದಿಗೆ ಅದು ಕೆಲಸ ಮಾಡುತ್ತಿದೆ. 2001ರಲ್ಲಿ ನಾಗಾ ಪ್ರದೇಶದಲ್ಲಿ ಜಾರಿಗೊಳಿಸಲಾದ ಕದನ ವಿರಾಮದ ವಿರುದ್ಧ ವ್ಯಾಪಕ ಚಳುವಳಿ ಸಂಘಟಿಸಿತು.

ಬಡತನದ ಉದಾರೀಕರಣ



ಆರ್ಥಿಕದ ಉದಾರೀಕರಣದ ನಿಜವಾದ ಪರಿಣಾಮ ಏನೆಂದರೆ ಬಡತನದ ಉದಾರೀಕರಣವಾಗಿರುವುದು. ಯಾಕೆಂದರೆ ಭಾರತದ ತುಂಬ ಬಡ ಜನರ ಸಂಖ್ಯೆ ಹೆಚ್ಚಾಗಿದೆ.

ಸರ್ಕಾರಿ ಬೆಂಬಲಿತ ಅಧ್ಯಯನವೊಂದರ ಪ್ರಕಾರ ದುಡಿವ ಭಾರತೀಯರ ಶೇ.86 ರಷ್ಟು ಜನ ದಿನಕ್ಕೆ ಬರೀ 20 ರೂಪಾಯಿ ಆದಾಯ ಗಳಿಸುತ್ತಿದ್ದಾರಂತೆ. ಅಮೇರಿಕಾದ ಡಾಲರ್ ಲೆಕ್ಕದಲ್ಲಿ ಹೇಳುವುದಾದರೆ ದಿನದ ಆದಾಯ ಅರ್ಧ ಡಾಲರ್‌ಗಿಂತ ಕಮ್ಮಿ.

ಈ ಅಧ್ಯಯನದ ಪ್ರಕಾರ ದೇಶದಲ್ಲಿ 45.7 ಕೋಟಿ ದುಡಿವ ಜನರಿದ್ದರೆ 39.5 ಕೋಟಿ ಜನರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅಸಂಘಟಿತ ವಲಯ ಎಂದರೆ ಕೃಷಿ, ಕಟ್ಟಡ ಕೆಲಸ, ನೇಯ್ಗೆ, ಮೀನುಗಾರಿಕೆ ಇತ್ಯಾದಿ ಕೆಲಸಗಳ ವಲಯ.

ಈ 39.5 ಕೋಟಿ ಜನರಲ್ಲಿ ಬರೀ ಶೇ.0.4 ರಷ್ಟು ಜನರಿಗೆ ಮಾತ್ರ ಸಾಮಾಜಿಕ ಭದ್ರತೆಯ ಲಭ್ಯತೆಯಿದೆ. ಶೇ.79ರಷ್ಟು ಕೆಲಸಗಾರರು ಅತ್ಯಂತ ಹೀನ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಸಾಮಾಜಿಕ ಭದ್ರತೆಯ ಕೊರತೆ, ಹೀನ ಕೆಲಸದ ಪರಿಸ್ಥಿತಿ, ಕಿತ್ತು ತಿನ್ನುವ ಬಡತನ, ಶಿಕ್ಷಣವಿಲ್ಲದಿರುವಿಕೆ, ಮಹಿಳೆಯ ಶೋಷಣೆ, ಕಾನೂನುಗಳ ಅನುಷ್ಠಾನ ಇಲ್ಲದೇ ಇರುವುದು ಇದು ಭಾರತೀಯ ಕೆಲಸಗಾರರು ಜೀವಿಸುವ ಪರಿ.

ಇಂತಹ ಪರಿಸ್ಥಿತಿಗಳತ್ತ ಆಗಾಗ ಗಮನ ಸೆಳೆಯುತ್ತ ಇದನ್ನು ಬದಲಿಸಬೇಕೆಂದು ಮಾತನಾಡುತ್ತಾರೆ ನಮ್ಮ ಇಂದಿನ ಪ್ರಧಾನಿ ಡಾ: ಮನಮೋಹನಸಿಂಗ್. ಭಾರತದಲ್ಲಿ ಆರ್ಥಿಕ ಬೆಳವಣಿಗೆಯ ಲಾಭ ಹನಿ ಹನಿಯಾಗಿ ಕೆಳಗಿನ ಸ್ತರಗಳಿಗೆ ಇಳಿಯಬೇಕೆಂದು ಅವರು ಹಲಬುತ್ತಾರೆ.

1991ರ ನಂತರದ ದಿನಗಳಲ್ಲಿ ಆರ್ಥಿಕ ಉದಾರೀಕರಣದ ಕ್ರಮಗಳನ್ನು ಜಾರಿಗೆ ತಂದವರೇ ಈ ಮಹಾಶಯರು. ಇಂದು ಇಂತಹ ಪರಿಸ್ಥಿತಿ ಅವರ ಪ್ರಧಾನ ಮಂತ್ರಿತ್ವದ ದಿನಗಳಲ್ಲೇ ಕಾಣ ಸಿಗುತ್ತಿದೆ. ಅಂದು (ಅಂದರೆ 1991ರಲ್ಲಿ) ಅವರು ಹಣಕಾಸು ಸಚಿವರಾಗಿದ್ದರು.

ಉದಾರೀಕರಣದ ಸಮರ್ಥನೆ ಮಾಡುತ್ತಾ ಅವರು ದೇಶವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವ ಕನಸುಗಳ ಸರಮಾಲೆಯನ್ನು ಹೆಣೆದಿದ್ದರು. ಇಂದು ದೇಶ ಪ್ರಗತಿ ಪಥದಲ್ಲಿದೆ. ಅಪಾರ ಬೆಳವಣಿಗೆ ಆಗುತ್ತದೆ ಎಂದೆಲ್ಲ ಮಾಧ್ಯಮಗಳ ತುಂಬ ಬಿಂಬಿಸಲಾಗುತ್ತಿದೆ. ಆದರೆ ನಿಜದಲ್ಲಿ ಈ ಬೆಳವಣಿಗೆಯ ಲಾಭ ಯಾರಿಗೆ ಆಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆಯಲ್ಲವೇ?

ಇದು ಬಡತನದ ಉದಾರೀ ಕರಣವಲ್ಲದೆ ಮತ್ತಿನ್ನೇನು?



ಜಾಗತೀಕರಣ ಎದುರಿಸಲು 'ಮಲ್ಲಿಗೆಯ ಹಾದಿ

ನಾಗತಿಹಳ್ಳಿ ಚಂದ್ರಶೇಖರ್ ಅವರು ಜಾಗತೀಕರಣದ ಪ್ರಭಾವ, ಬಹುರಾಷ್ಟ್ರೀಯ ಕಂಪನಿಗಳ ಧಾಳಿಯಿಂದಾಗುವ ಅನಾಹುತಗಳ ಬಗ್ಗೆ ಬೆಳಕು ಚೆಲ್ಲುವ ಸಣ್ಣ ಪ್ರಯತ್ನವಾಗಿ 'ಮಾತಾಡ್ ಮಾತಾಡ್ ಮಲ್ಲಿಗೆ' ತೆರೆಗೆ ತಂದಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳು ಎಲ್ಲಾ ವಲಯಗಳಲ್ಲೂ ಆಕ್ರಮಿಸುತ್ತಿರುವ ಸಂದರ್ಭದಲ್ಲಿ, ಜನಸಾಮಾನ್ಯರು, ರೈತರು, ಸಣ್ಣ ವ್ಯಾಪಾರಿಗಳ ಮೇಲೆ ಆಗುತ್ತಿರುವ ಪರಿಣಾಮ ಅಗಾಧ. ದೊಡ್ಡಣ್ಣನಂತೆ ವರ್ತಿಸುತ್ತಿರುವ ಅಮೆರಿಕಾ ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚುತ್ತಿದೆ. ನಮ್ಮ ಆಡಳಿತಶಾಹಿಗಳ ಡೊಗ್ಗು ಸಲಾಮಿನಿಂದಾಗಿ ಜಾಗತೀಕರಣದ ಪ್ರಭಾವ ನಿಧಾನವಾಗಿ ಎಲ್ಲೆಡೆ ವ್ಯಾಪಿಸುತ್ತಿದೆ. ಇದರ ನೇರ ಪರಿಣಾಮ ಎದುರಿಸುತ್ತಿರುವ ರೈತ ಸಮುದಾಯ ಇದಕ್ಕೆ ಯಾರು ಹೊಣೆ ಎಂದು ಸ್ಪಷ್ಟವಾಗಿ ಅರಿಯದೆ, ಸಂಕಷ್ಟಕ್ಕೀಡಾಗಿ ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ಇಂತಹ ಸಂದರ್ಭದಲ್ಲೇ ನಾಗತಿಹಳ್ಳಿ ಚಂದ್ರಶೇಖರ್ ಅವರು ಜಾಗತೀಕರಣದ ಪ್ರಭಾವ, ಬಹುರಾಷ್ಟ್ರೀಯ ಕಂಪನಿಗಳ ಧಾಳಿಯಿಂದಾಗುವ ಅನಾಹುತಗಳ ಬಗ್ಗೆ ಬೆಳಕು ಚೆಲ್ಲುವ ಸಣ್ಣ ಪ್ರಯತ್ನವಾಗಿ 'ಮಾತಾಡ್ ಮಾತಾಡ್ ಮಲ್ಲಿಗೆ' ತೆರೆಗೆ ತಂದಿದ್ದಾರೆ.

ಜಾಗತೀಕರಣದ ಅಪಾಯದ ಬಗ್ಗೆ ಅರಿವಿರುವ ಜನಪರ ಚಳುವಳಿಗಳು ಎಷ್ಟೇ ಬೊಬ್ಬಿರಿದರೂ ಅವರಿಂದ ದೂರವೇ ಉಳಿಯುವವರ ಸಂಖ್ಯೆ ಸ್ವಲ್ಪ ಹೆಚ್ಚೇ! ಪ್ರಭಾವೀ ಮಾಧ್ಯಮವಾದ ಚಲನಚಿತ್ರದ ಮೂಲಕ ಇಂತಹ ಸಂದೇಶವೊಂದನ್ನು ಪ್ರಚುರಪಡಿಸುವುದು 'ಪ್ರಭಾವಶಾಲಿ' ಎಂಬುದನ್ನು ಅಲ್ಲಗಳೆಯಲಾಗದು! ಮನರಂಜನೆ ನೆಪದಲ್ಲಿ ಯುವಜನರ ಹಾದಿತಪ್ಪಿಸುತ್ತಿರುವ ಚಿತ್ರಗಳ ಸರಮಾಲೆಗಳ ಸಂದರ್ಭದಲ್ಲಿ ಇಂತಹ ಪ್ರಯತ್ನ ಶ್ಲಾಘನೀಯ, ಇದಕ್ಕಾಗಿ ನಾಗತಿಹಳ್ಳಿ ಚಂದ್ರಶೇಖರ್ ಅಭಿನಂದನಾರ್ಹರು.

ಜೇನುಕೊಪ್ಪ, ವಿದೇಶಿ ಕಂಪನಿಯೊಂದು ಗಣಿಗಾರಿಕೆ ನಡೆಸಲು ಆಯ್ದುಕೊಂಡ ಒಂದು ಗ್ರಾಮ. ವಿವಿಧ ರೀತಿಯ ಹೂವಿನ ಬೆಳೆಯೇ ಅಲ್ಲಿನ ರೈತರ ಜೀವನಾಧಾರ. ಗಣಿಗಾರಿಕೆಗೆ ತಮ್ಮ ಭೂಮಿ ಒಪ್ಪಿಸಲು ಈ ರೈತರು ಸಿದ್ದರಿಲ್ಲ. ಭ್ರಷ್ಟ ಆಡಳಿತಶಾಹಿ ಬಹುರಾಷ್ಟ್ರೀಯ ಕಂಪನಿಯೊಂದಿಗೆ ಕೈ ಮಿಲಾಯಿಸಿ ರೈತರನ್ನು ಒಕ್ಕಲೆಬ್ಬಿಸಲು ಯತ್ನಿಸುತ್ತದೆ. ಆದರೆ ಹೂವಯ್ಯ ಎಂಬ ಪ್ರಜ್ಞಾವಂತ ದೊಡ್ಡ ರೈತ, ಭೂಮಿ ಕಳೆದುಕೊಳ್ಳುವುದರಿಂದ ಆಗುವ ಅನಾಹುತಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಟ್ಟು, ಅವರನ್ನು ಸರ್ಕಾರದ ವಿರುದ್ಧ ಅಣಿನೆರೆಸುತ್ತಾನೆ. ಸರ್ಕಾರದ ಆಮಿಷ, ದಾಳಿ- ದಬ್ಬಾಳಿಕೆಗಳಿಗೆ ಹೆದರಿ ಮುಕ್ಕಾಲು ಪಾಲು ರೈತರು ಊರು ಬಿಟ್ಟು ಹೋಗುತ್ತಾರೆ. ಇದೇ ಸಂದರ್ಭದಲ್ಲಿ ಊರಿಗೆ ನಕ್ಸಲರ ಪ್ರವೇಶವೂ ಆಗುತ್ತದೆ. ಹಿಂಸಾಮಾರ್ಗದಲ್ಲಿ ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತಾರೆ.

ಆ ನಿಟ್ಟಿನಲ್ಲಿ ಪೋಲೀಸರು ಮತ್ತು ಅಧಿಕಾರಿಗಳನ್ನು ಹತ್ಯೆಗೈಯುವ ಸಂದರ್ಭದಲ್ಲೇ ಅಮಾಯಕ ನಾಗರಿಕರನ್ನು ಸಾಯಿಸುತ್ತಾರೆ. ಗಾಂಧಿ ತತ್ವದಲ್ಲಿ ನಂಬಿಕೆಯಿಟ್ಟ ಹೂವಯ್ಯ, ಇವರ ಮಾರ್ಗವನ್ನು ಪ್ರಬಲವಾಗಿ ವಿರೋಧಿಸುತ್ತಾನೆ. ತನ್ನ ಜೊತೆಗೆ ಯಾರೂ ನಿಲ್ಲದಿದ್ದ ಸಂದರ್ಭದಲ್ಲಿ, ಜೀವವಿರುವವರೆಗೂ ಒಂಟಿಯಾಗೀ ಹೋರಾಡುತ್ತೇನೆಂದು ನಿಶ್ಚಯಿಸಿ, ಉಪವಾಸ ಸತ್ಯಾಗ್ರಹ ಕೈಗೊಳ್ಳುತ್ತಾನೆ. ಅವನ ದೇಹಸ್ಥಿತಿ ಗಂಭೀರವಾದಾಗ ಮಾಧ್ಯಮಗಳ ಮೂಲಕ ಪ್ರಚಾರ ದೊರೆತು ಎಲ್ಲೆಡೆಯಿಂದ ಅವನಿಗೆ ಬೆಂಬಲದ ಮಹಾಪೂರ ಹರಿದುಬರುತ್ತದೆ. ಸರ್ಕಾರ ಅಸಹಾಯಕವಾಗುತ್ತದೆ ಮತ್ತು ಸುಪ್ರೀಂಕೋರ್ಟ್‌ನಿಂದ ಗಣಿಗಾರಿಕೆಗೆ ತಡೆಯಾಜ್ಞೆ ದೊರೆತು ಹೂವಯ್ಯ ಜಯಶಾಲಿಯಾಗುತ್ತಾನೆ.

ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಲು ಯತ್ನಿಸುತ್ತಿರುವಾಗ, ಅದರ ವಿರುದ್ಧ ಪ್ರತಿಭಟನೆಗಳು ಚಿಗುರೊಡೆಯುತ್ತಿವೆ. ಬಳ್ಳಾರಿ, ಮತ್ತಿತರೆಡೆ ಸುತ್ತಮುತ್ತ ಭೂಮಿಯನ್ನು ಬಗೆದು ಖಾಸಗಿ ವ್ಯಕ್ತಿಗಳು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ. ಕರ್ನಾಟಕದ ವಸ್ತುಸ್ಥಿತಿ ಹೀಗಿರುವಾಗಲೇ ಇದೇ ವಿಚಾರವನ್ನು ಪರಿಣಾಮಕಾರಿಯಾಗಿ ತೆರೆಮೇಲೆ ತಂದಿರುವುದು ಸ್ವಾಗತಾರ್ಹವೇ ಆದರೂ ಕೆಲವು ನ್ಯೂನತೆಗಳನ್ನು ಗಮನಿಸಬೇಕಾದ್ದು ಅನಿವಾರ್ಯ.

ಮದ್ದೇನು?

ಹೂವಯ್ಯ ಗಾಂಧಿ ತತ್ವದಲ್ಲಿ ನಂಬಿಕೆಯಿಟ್ಟವನು, ಆ ತತ್ವದಿಂದ ಜಯಶಾಲಿಯೂ ಆಗುವನು. ಅಂದರೆ ಜಾಗತೀಕರಣಕ್ಕೆ ಗಾಂಧಿವಾದ ಮದ್ದು ಎಂಬುದು ಸೂಚಿತ ಅರ್ಥ. ಜಾಗತೀಕರಣದ ವಿರುದ್ಧದ ಹೋರಾಟದಲ್ಲಿ ಗಾಂಧಿವಾದಕ್ಕೆ ಗಾಂಧಿವಾದಿಗಳು ಒಂದು ಪಾತ್ರವಹಿಸ ಬಹುದಾದರೂ ಅತ್ಯಾಧುನಿಕ ವಿಜ್ಞಾನ ತಂತ್ರಜ್ಞಾನಗಳ ಮೇಲೆ ದುಷ್ಟ ಹಿಡಿತ ಸಾಧಿಸಿ ಜಗತ್ತಿ ಮೇಲೆ ಅಪ್ಪಳಿಸುತ್ತಿರುವ ಜಾಗತೀಕರಣದ ದೈತ್ಯ ಶಕ್ತಿಗಳನ್ನು ಗಾಂಧಿವಾದವೇ ಎದುರಿಸಲು ಸಮರ್ಥವೇ ಎಂಬ ಪ್ರಶ್ನೆಯೂ ಏಳುತ್ತದೆ. ಅದರ ವರ್ಗ ಶೋಷಣೆ, ಜಾಗತಿಕ ಮಾರುಕಟ್ಟೆ, ಅಧಿಪತ್ಯದ ತಂತ್ರಗಳನ್ನು ಗಾಂಧಿವಾದ ಹೇಗೆ ವಿಶ್ಲೇಷಿಸುತ್ತದೆ. ಇವುಗಳ ಬಗ್ಗೆ ನಿರ್ದೇಶಕರು ತಲೆಕೆಡಿಸಿಕೊಳ್ಳಲು ಹೋಗಿಲ್ಲ.



ಬದಲಿಗೆ ಭಾರತವೂ ಸೇರಿದಂತೆ ಪ್ರಪಂಚದಾದ್ಯಂತ ಎಡ ನೇತೃತ್ವದಲ್ಲಿ ಜಾಗತೀಕರಣದ ವಿರುದ್ಧ ಎದೆಗೊಟ್ಟು ನಿಂತ ಚಳುವಳಿಯ ಬಗ್ಗೆ ಚಿತ್ರದಲ್ಲಿ ಎಲ್ಲೂ ಒಂದು ಸೊಲ್ಲೂ ಇಲ್ಲ! ಇಂದಿಗೂ ಕ್ಯೂಬಾದಲ್ಲಿ ಕ್ಯಾಸ್ಟ್ರೋ, ಅರ್ಜೆಂಟೈನಾದ ಚವೇಝ್ ಜಾಗತೀಕರಣದ ವಿರುದ್ಧ ಸೆಡ್ಡು ಹೊಡೆದು ನಿಂತು, ಮುನ್ನಡೆಯುತ್ತಿರುವ ಬಗ್ಗೆ ನಿರ್ದೇಶಕರು ಗಮನಿಸದೇ ಇರಲು ಸಾಧ್ಯವಿಲ್ಲ. ಇಂದಿನ ಸಂದರ್ಭದಲ್ಲಿ ಜಾಗತೀಕರಣ ಎದುರಾಗಿ ಗಾಂಧಿತತ್ವವೇ ಸರಿಸಾಟಿ ಎಂಬ ನಿಲುವು ಪ್ರಸ್ತುತವೇ?

ನಕ್ಸಲ್‌ವಾದದ ಅಸಮರ್ಥನಿಯ ನಿಲುವು, ಸೀಮಿತ ಚೌಕಟ್ಟನ್ನು ಸ್ಪಷ್ಟವಾಗಿಯೇ ಗ್ರಹಿಸುವ ನಿರ್ದೇಶಕರು, ಏಕಾಂಗಿ ಹೋರಾಟವನ್ನು ಪುಷ್ಟೀಕರಿಸುವುದು ಆಕ್ಷೇಪಾರ್ಹ. ಪ್ರಜ್ಞಾವಂತ ರೈತ ಹೂವಯ್ಯ ಬಹುರಾಷ್ಟ್ರೀಯ ಕಂಪನಿ... ಧಾಳಿಯಿಂದಾಗುವ ಪರಿಣಾಮಗಳ ಬಗ್ಗೆ... ಮಾಡುತ್ತಾನೆ, ರೈತರಿಗೆ ತಿಳುವಳಿಕೆ ನೀಡುತ್ತಾನೆ... ಹೊರತು, ಅವರನ್ನು ಸಂಘಟಿಸಿ, ಒಗ್ಗಟ್ಟ... ಹೋರಾಟಕ್ಕೆ ಇಳಿಸುವ ಸಣ್ಣ ಪ್ರಯತ್ನವ... ಮಾಡದೇ ಇರುವುದು ಚಿತ್ರದ ನಕಾರಾತ್ಮಕ ಅ... ಜಾಗತೀಕರಣದ ವಿರುದ್ಧವಾಗಲೀ, ಸರ್ಕಾರದ ... - ನಿರೂಪಣೆಯ ವಿರುದ್ಧವಾಗಿ ಸಂಘ... ಹೋರಾಟವೇ ಅನಿವಾರ್ಯ - ಅದೊಂ... ಪರಿಹಾರ ಎಂಬುದನ್ನು ನಿರ್ದೇಶಕ... ಮನಗಾಣಬೇಕಿತ್ತು.

ಇಲ್ಲಿ ಹೂವಯ್ಯ ಗೆಲ್ಲುವುದು ಹೇಗೆ?

ಜಾಗತೀಕರಣ ನಮ್ಮ ದೇಶದ ಆಳುವ ವ... ಅಗತ್ಯವಾಗಿದೆ. ನಮ್ಮ ಸಾಮಾಜಿಕ, ಆರ್ಥಿ... ವ್ಯವಸ್ಥೆ, ಇವರ ಹಿಡಿತದಲ್ಲಿ... ನ್ಯಾಯಾಲಯಗಳೂ ಈ ವ್ಯ... ಒಂದು ಭಾಗ. ಜಾಗತೀಕರಣ... ಪ್ರಭಾವಕ್ಕೆ ಒಳಗಾ... ನ್ಯಾಯಾಲಯ ಹತ್ತಾರು ... ವಿರೋಧಿ, ಕಾರ್ಮಿಕ ವಿರೋ... ಶಿಕ್ಷಣ ವಿರೋಧಿ, ಸಾಮಾ... ನ್ಯಾಯ ವಿರೋಧಿ ತೀರ್ಪುಗ... ನೀಡುತ್ತಿರುವುದು ಕಾಣುತ್ತಿದ್ದೇ... ಅಂತಹದ್ದರಲ್ಲಿ ನ್ಯಾಯಾಲಯ... ಕುರಿತು ಈ ಏಕಮುಖ ವಿ... ಇಡುವುದು ಸಾಧ್ಯವೇ?

ಮಾಧ್ಯಮದ ವಿಷಯ... ಇದು ಅವಲಂಬಿಸುತ್ತ... ಚಿತ್ರದಲ್ಲಿ ಮಾಧ್ಯಮದಿ... ಸಿಗುವ ಪ್ರಚಾರದಿಂದಾಗಿ ಜನ ಹೂವಯ್ಯ... ಬೆಂಬಲಕ್ಕೆ ಧಾವಿಸುತ್ತಾರೆ. ವಾಸ್ತವ... ಬಂಡವಾಳಿಗರ ಹಿಡಿತದಲ್ಲಿರುವ ಮಾಧ್ಯಮ... ಜನಪರ ಚಳುವಳಿಗಳನ್ನು ಕಡೆಗಣಿಸುತ್ತಿರುವ... ಇಂದಿನ ಸತ್ಯ.

ಜಾಗತೀಕರಣವನ್ನು ಹಾಗೂ ಅದನ್ನು ... ಎದುರಿಸಬೇಕು ಎನ್ನುವಲ್ಲಿ ನಿರ್ದೇಶಕರ ಚಿಂ... ತೀವ್ರ ಮಿತಿಗಳಿರುವುದು ಇಲ್ಲಿ ಪ್ರಕಟವಾಗು... ಜಾಗತೀಕರಣದಂತಹ ಭೀಕರ ಧಾಳಿಯ... ಎದುರಿಸುವಲ್ಲಿಯೂ ವ್ಯಕ್ತಿಗತ ಪಾತ್ರಕ್ಕೆ ಪ್ರಾಧಾ... ನೀಡುತ್ತಾರೆಯೇ ಹೊರತು ಇಡೀ ಜನಸಮೂ... ಪಾತ್ರಕ್ಕೆ ಅಲ್ಲ. ನಾಗತಿಹಳ್ಳಿಯಂತಹವರೂ ಕ... ಮಸಾಲೆ ಚಿತ್ರಗಳ ಫಾರ್ಮುಲಾ... ಆರಿಸಿಕೊಂಡಿರುವುದು ವೈಚಾರಿಕ ಮಿತಿಯೇ...

ಅಭಿನಯದಲ್ಲಿ ಎಲ್ಲರೂ ಪೈಪೋಟಿಗೆ ಬಿ... ಅಭಿನಯಿಸಿದ್ದಾರೆ. ಹೂವಯ್ಯ... ವಿಷ್ಣುವರ್ಧನ್ ಪ್ರೇಕ್ಷಕರ ಮೇಲೆ ಗಾಢ ಪರಿಣಾ... ಬೀರುತ್ತಾರೆ. ಸುಹಾಸಿನಿ, ದೊಡ್ಡಣ್ಣ, ಸಿ... ಚಂದ್ರು, ತಾರಾ, ರಂಗಾಯಣ ರಘು, ... ಸಹನಟರೆಲ್ಲರದ್ದೂ ಹದವರಿತ ಅಭಿನ... ಲಂಕೇಶ್‌ಪತ್ರಿಕೆಯ ಚಂದ್ರೇಗೌಡರ ಕಟ್ಟೆಪುರಾ... ಪಾತ್ರವಾದ 'ವಾಟಿಸ್ಸೆ'ಯಾಗಿ ಮಂಡ್ಯ ರಮೇ... ಅಭಿನಯ ನೆನಪಿನಲ್ಲುಳಿಯುವಂತದ್ದು.

ಕನ್ನಡಕ್ಕೆ ಮತ್ತೊಮ್ಮೆ ಮಾಧುರ್ಯದ ಗ... ಹಿಡಿಸಿದ ಸಂಗೀತ ನಿರ್ದೇಶಕ ಮನೋಮ... ಇಲ್ಲೂ ಅದನ್ನು ಮುಂದುವರೆಸಿ... ಪ್ರಶಂಸಾರ್ಹ.

ದೃಶ್ಯ ಸಂಯೋಜನೆ, ಪ್ರಭಾವೀ ಸಂಭಾ... ನಮ್ಮ ಜನಪದ ಗಾಯಕರಾದ ಪಿಚ್ಚಳ್ಳಿ ಶ್ರೀನಿ... ಜನ್ನಿಯವರ ಹಾಡುಗಾರಿಕೆಯನ್ನು ಬಳಸಿಕೊಂ... ವುದಕ್ಕೆ ನಿರ್ದೇಶಕರಿಗೆ ಫುಲ್ ಮಾರ್ಕ್ಸ್!

ಗಜಲ್....



ನನ್ನ ದೇಶದಲ್ಲಿ.....

ಹಗಲು ಹನ್ನೆರಡಕ್ಕೆ ಹೆಣ್ಣಿನ ಮಾನಭಂಗವಾಗುವುದು ನನ್ನ ದೇಶದಲ್ಲಿ
ಬೆಳ್ಳಂಬೆಳಕಿನಲ್ಲಿ ಬೆಳಕಿನ ಕೊಲೆಯಾಗುವುದು ನನ್ನ ದೇಶದಲ್ಲಿ :
ಅರಣ್ಯ ಖಾತೆಯ ಸಚಿವನಿಂದಲೇ ಅರಣ್ಯ ಸರ್ವನಾಶ ಈ ನಾಡಿನಲ್ಲಿ
ಕೊಡಲಿಗೆ ಹಿಡಿಕೆಯಾಗಿ ಕಟ್ಟಿಗೆಯೇ ಕಾಡು ಕಡಿಯುವುದು ನನ್ನ ದೇಶದಲ್ಲಿ :
ಅಕ್ಷರಗಳು ಎಂದೂ ಇಂದೂ ಎಲ್ಲರಿಗೂ ದೊರೆಯಲಾರವು ಈ ನಾಡಿನಲ್ಲಿ
ಅಂಗೈ ಅಕ್ಷರ ಕಣ್ಣೆದುರಿಗೆ ರಹಸ್ಯವಾಗುವುದು ನನ್ನ ದೇಶದಲ್ಲಿ :
ದೇವರಾಗುವುದು ಭಿಕ್ಷುಕನಾಗುವುದು ಅತೀ ಸರಳ ಈ ನಾಡಿನಲ್ಲಿ
ಬಯಲಿನ ಸತ್ಯ ಬಂದಿಯಾಗಿ ದೇವಾಲಯವಾಗುವುದು ನನ್ನ ದೇಶದಲ್ಲಿ :
ಬೆತ್ತಲೆಯಾಗಿ ರಸ್ತೆಯಲ್ಲಿ ನೀ ನಿಂತರೂ 'ಕಾಶಿ' ಈ ನಾಡಿನಲ್ಲಿ
ಬೆತ್ತಲೆಯ ಭಾವ ಬಟ್ಟೆಗಳ ಲೂಟಿಯಾಗುವುದು ನನ್ನ ದೇಶದಲ್ಲಿ :

ಡಾ: ಕಾಶೀನಾಥ ಅಂಬಲಗೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH